ಬಾಬು ಜಗಜೀವನರಾಂ

ಸಿ.ಕೆ.ಮಹೇಶ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಬಾಬು ಜಗಜೀವನರಾಂ

ಸಿ. ಕೆ. ಮಹೇಶ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨

BABU JAGAJEEVANARAM—Written by C. K. Mahesh and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii + 68

ಮೊದಲನೇ ಮುದ್ರಣ ೧೯೯೪

ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ

ಅಧ್ಯಕ್ಷರು

ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಸ್ಟ್ರಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ

ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆ ಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸು ವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆ ಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿ ಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಕಾಶವೀಯುತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರಂಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಸಿ. ಕೆ. ಮಹೇಶ್

ಜಗಜೀವನರಾಂ

ಭಾಗ – ೧

ಜೀವನ

ಪರಿಸರ:

ಬಿಹಾರ, ಪ್ರಾಚೀನ ಭಾರತದ ಜನತಾಂತ್ರಿಕ ವ್ಯವಸ್ಥೆಯ ತೊಟ್ಟಿಲು. ಸಮಾನತೆ, ಸೋದರತೆ ಮತ್ತು ಸ್ವಾತಂತ್ರ್ಯದ ಬೀಜಗಳನ್ನು ಪ್ರಪ್ರಥಮವಾಗಿ ಚೆಲ್ಲಿದ ಬುದ್ಧನ ಭೂಮಿ. ಅಂಗುಲೀಮಾಲ, ಸುನೀತ್, ಉಪಾಲ, ಜೀವಿಕ ಮುಂತಾದ ದಲಿತರ ಅಂಧಕಾರದ ವಲಯುಗಳಿಗೆ ಆತನ ಕರುಣೆ, ಪ್ರೀತಿ–ವಾತ್ಸಲ್ಯದ ಹೊಂಗಿರಣಗಳು ಹರಿದ ಭಾಗ. ಭಾರತದ ಸಾಂಸ್ಕೃತಿಕ ಏಕತೆ ಮತ್ತು ಸಮಗ್ರತೆಯನ್ನು ಬುದ್ಧನ ಬೆಳಕಲ್ಲಿ ಸಾಧಿಸಿದ ಅಶೋಕನ ಪ್ರಯೋಗಾಲಯವೂ ಬಿಹಾರ್. ಅಲ್ಲದೆ, ಆಧುನಿಕ ಭಾರತದ ಸತ್ಯ – ಅಂಹಿಸಾ ತತ್ವಗಳ ಹರಿಕಾರ ಗಾಂಧೀಜಿಯ 'ಚಂಪಾರಣ್ಯ' ಸತ್ಯಾಗ್ರಹದ ಸ್ಥಳವೂ ಇದಾಗಿದೆ. ಇಂತಹ ಬಿಹಾರ್ ಪ್ರಾಂತ್ಯದ ಒಂದು ಮೂಲೆಯಲ್ಲಿ ಜನ್ಮ ಪಡೆದವರು ಜಗಜೀವನ್‌ರಾಮ್.

೧೯–೨೦ನೇ ಶತಮಾನಗಳ ಭಾರತ ಚರಿತ್ರೆ ಎಲ್ಲ ನಿಟ್ಟಿನಿಂದಲೂ ಮಹತ್ವಪೂರ್ಣ. ಅನೇಕ ಚಿಂತಕರನ್ನು, ಸಮಾಜ ಸುಧಾರಕರನ್ನು,

ರಾಜಕೀಯ ದಾರ್ಶನಿಕರನ್ನು ಮತ್ತು ಅತ್ಯುತ್ತಮ ಆಡಳಿತಗಾರರನ್ನು ಬೆಳಗಿಸಿದೆ. ಗಾಂಧಿ, ನೆಹರು, ಅಂಬೇಡ್ಕರ್, ಲೋಹಿಯಾ, ಜಯಪ್ರಕಾಶ್ ಮುಂತಾದ ಪ್ರಮುಖ ಹೆಸರುಗಳಲ್ಲಿ ಜಗಜೀವನ್‌ರಾಮ್ ಅವರದೂ ಒಂದು.

ಜಗಜೀವನ್‌ರಾಮ್ ಬಿಹಾರ್ ರಾಜ್ಯದ ಚಂದ್ವಾ ಎನ್ನುವ ಸಣ್ಣ ಗ್ರಾಮದಲ್ಲಿ ಏಪ್ರಿಲ್ ೫, ೧೯೦೮ರಲ್ಲಿ ಜನಿಸಿದರು. ತಂದೆ – ತಾಯಿ ಶೋಭರಾಮ್ ಮತ್ತು ವಾಸಂತಿ ದೇವಿ ಗಾಢ ಧಾರ್ಮಿಕ ಹಿನ್ನೆಲೆಯುಳ್ಳವರು. ಶೋಭರಾಮ್ ಚಿಕ್ಕಂದಿನಿಂದಲೂ ಪಂಜಾಬಿನಲ್ಲಿ ಸೇನೆಯಲ್ಲಿದ್ದ ಸೋದರ ಮಾವನ ಆಶ್ರಯದಲ್ಲಿದ್ದ. ಕ್ರಿಯಾಶೀಲನಾದ ಆತ ಸಿಪಾಯಿಗಳ ಆಸ್ಪತ್ರೆಯಲ್ಲಿ ಪರಿಚಾರಿಕೆ ಕೆಲಸ ಮಾಡುತ್ತಾ, ಅಲ್ಲಿನ ಅಧಿಕಾರಿಗಳ ಸಂಪರ್ಕ ಬೆಳೆಸಿಕೊಂಡು ದಿನನಿತ್ಯದಲ್ಲಿ ಉಪಯೋಗಿಸುವ ಇಂಗ್ಲೀಷ್ ಭಾಷೆ ಕಲಿತ. ಇದೇ ಸೈನ್ಯಕ್ಕೆ ಸೇರಲು ಬುನಾದಿ. ಕ್ರಮೇಣ ಆತನಿಗೆ ದಿನಾಪುರಕ್ಕೆ ವರ್ಗವಾಯಿತು. ಅಲ್ಲಿ ವಾಸಂತಿದೇವಿಯೊಡನೆ ವಿವಾಹ ಜರುಗಿತು. ಬರುವ ಅಲ್ಪ ಸಂಬಳದಲ್ಲಿ ಹಣವುಳಿಸಿ ಒಂದು ಸಣ್ಣ ಮನೆ ನಿರ್ಮಿಸಿಕೊಂಡ ಶೋಭರಾಮ್ ಬದುಕು ನಿರುಂಬಳವಾಗಿ ಸಾಗುತ್ತಿರುವಾಗ ನಡೆದ ದುರ್ಘಟನೆ ಆತನ ನೌಕರಿಗೆ ಕಂಟಕಕಾರಿಯಾಯಿತು. ಮೇಲಧಿಕಾರಿಯೊಬ್ಬರ ತಪ್ಪಿಗೆ ಕ್ಷಮೆ ಯಾಚಿಸುವ ಪ್ರಸಂಗವದು. ತನ್ನದಲ್ಲದ ತಪ್ಪಿಗೆ ತಲೆ ತಗ್ಗಿಸುವುದು ಅರ್ಥಹೀನ. ಸ್ವಾಭಿಮಾನದ ವ್ಯಕ್ತಿಯಾದ ಆತ ಕ್ಷಮೆ ಬೇಡಲಿಲ್ಲ. ಅದಕ್ಕೆ ಬದಲು ತನ್ನ ನೌಕರಿಯನ್ನೇ ಬಲಿಕೊಟ್ಟ.

ಬದುಕಿನ ತಿರುವುಗಳಿಗೆ ಪಕ್ವವಾಗಿದ್ದ ಶೋಭರಾಮ್, ಸಂಸಾರ ಸಮೇತ ಕಲ್ಕತ್ತಾ ಸೇರಿ ಅಲ್ಲಿನ ವೈದ್ಯಕೀಯ ಕಾಲೇಜಿನಲ್ಲಿ ನೌಕರಿ ಪಡೆದ. ಅಲ್ಲಿ ಆರೋಗ್ಯ ಕ್ಷೀಣಿಸುತ್ತದೆ. ಅದರಿಂದ ಕಲ್ಕತ್ತೆಯ ಕೆಲಸ ತೊರೆದು ಚಂದ್ವಾ ಗ್ರಾಮಕ್ಕೆ ಬಂದು ಜೀವನಕ್ಕೆ ಒಂದಿಷ್ಟು ಜಮೀನು ಕೊಂಡು ತನ್ನ ಕುಟೀರದಲ್ಲಿ ವಾಸಿಸತೊಡಗಿದ.

ಧಾರ್ಮಿಕ ಮನೋಭಾವದ ಶೋಭರಾಮ್, ತನ್ನ ಮಾನವೀಯ ಗುಣಗಳಿಂದ ಇತರರ ಪ್ರೀತಿಗೆ ಪಾತ್ರನಾಗಿದ್ದ. ಬಡವರ ನೋವುಗಳಿಗೆ ಮಿಡಿಯುತ್ತಿದ್ದ. ಸ್ವಂತ ಹಣದಲ್ಲಿ ಬಾವಿಯೊಂದನ್ನು ತೋಡಿಸಿ ಕುಡಿಯುವ ನೀರಿನ ಬವಣೆ ನೀಗಿಸಿದ್ದ. ಆತನದು ಈ ಬಗೆಯ ಸಾತ್ವಿಕ ವ್ಯಕ್ತಿತ್ವ.

ಶೋಭರಾಮ್ – ವಾಸಂತಿಯವರ ಕಡೆಯ ಮಗ ಜಗಜೀವನ್ ರಾಮ್. ಸಂತಲಾಲ್ ಹಿರಿಯ. ಉಳಿದ ಐವರು ಹೆಣ್ಣುಮಕ್ಕಳು. ರಾಮ್‌ಗಿಂತ ಸಂತಲಾಲ್ ೨೩ ವರ್ಷ ದೊಡ್ಡವನು. ತಂದೆ–ತಾಯಿಗಳು ತಮ್ಮ ಮಕ್ಕಳು ಉತ್ತಮ ಶಿಕ್ಷಣ ಪಡೆಯಬೇಕೆಂಬ ಮಹತ್ತರ ಆಶೆ ಹೊಂದಿದ್ದರು.

ಶಿಕ್ಷಣ ಮತ್ತು ಹೋರಾಟ:

ಬಾಲಕ ಜಗಜೀವನ್ ೫ ವರ್ಷ ೮ ತಿಂಗಳ ವಯಸ್ಸಿನಲ್ಲಿ ಚಂದ್ವಾ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ದಾಖಲಾದ. ಮನೆಗೆ ಅದೊಂದು ಹಬ್ಬದ ಸಡಗರ. ಬಾಲಕನಿಗೆ ಹೊಸ ಬಟ್ಟೆಗಳನ್ನು ತೊಡಿಸಿ ಮನೆಯ ಅಕ್ಕಪಕ್ಕದವರಿಗೆ ಸಿಹಿ ಹಂಚಿದರು. ರಾಮ್‌ನನ್ನು ತಂದೆಯೇ ಶಾಲೆಗೆ ಸೇರಿಸಿದ್ದರು. ಮಗನ ಜ್ಞಾನದ ಬೆಳಕಿನಡಿ ತಾನೂ ಮುಗ್ಗರಿಸದೇ ನಡೆಯಬಹುದೆಂದು ಭಾವಿಸಿದ್ದ ಶೋಭರಾಮ್, ಮಗನ ಶೈಕ್ಷಣಿಕ ಪ್ರಗತಿಯ ಬಗ್ಗೆ ನಿಗಾ ವಹಿಸಿದ್ದರು. ಆಗಾಗ ಪ್ರಶ್ನಿಸುತ್ತಿದ್ದರು. ತಂದೆ–ಮಗನ ಕಲಿಕೆಯ ಸಂವಾದಗಳು ಬಹಳ ದಿನ ನಡೆಯಲಿಲ್ಲ. ಶೋಭರಾಮ್ ತೀವ್ರ ಖಾಯಿಲೆಗೊಳಗಾಗಿ ಸಾವನ್ನಪ್ಪಿದರು.

ಶಿಕ್ಷಣದ ಉತ್ತುಂಗದ ಶಿಖರ ತಲುಪಲು ಅಸಂಖ್ಯ ಮೆಟ್ಟಿಲುಗಳನ್ನು ಕ್ರಮಿಸುವುದು ಅವಶ್ಯಕ. ಆದರೆ ಜಗಜೀವನ್ ಇನ್ನೂ ಆರಂಭದ ಮೆಟ್ಟಿಲಲ್ಲೇ ಪಿತೃ ವಿಯೋಗದಿಂದ ನರಳಿದರು. ತಾಯಿ ವಾಸಂತಿ ದೇವಿಗೆ ನಿರ್ದಿಷ್ಟ ಆದಾಯ ಮೂಲಗಳಿರಲಿಲ್ಲ. ಸಂಸಾರದ ನೌಕೆ ಚಂಡಮಾರುತದಲ್ಲಿ

ಸಿಲುಕಿತು. ಹೇಗೋ ಮಾಡಿ ಪ್ರಾಥಮಿಕ ಶಿಕ್ಷಣವನ್ನು ಚಂದ್ವಾದಲ್ಲಿ ಮುಗಿಸಿದರು. ನಂತರ ಆರ್ರಾ ಪಟ್ಟಣದ ಅಗರ್‌ವಾಲ್ ಮಾಧ್ಯಮಿಕ ಪಾಠಶಾಲೆಯಲ್ಲಿ ಮುಂದಿನ ಶಿಕ್ಷಣ ಆರಂಭ. ಇಂಗ್ಲೀಷ್ ಭಾಷೆ ಮೊದಲು ಕಷ್ಟವೆನಿಸಿದರೂ ಹೆಚ್ಚಿನ ಅವಧಿಯನ್ನು ಅದರ ಕಲಿಕೆಗೆ ಮೀಸಲಿರಿಸಿದ ರಾಮ್, ಪರೀಕ್ಷೆಯಲ್ಲಿ ೬೨ ಅಂಕಗಳನ್ನು ಪಡೆದು ತರಗತಿಯಲ್ಲೇ ದ್ವಿತೀಯ ಸ್ಥಾನ ಪಡೆದ.

ದುರಂತದ ಈ ನಾಡಿನಲ್ಲಿ ಅಸ್ಪೃಶ್ಯನಾಗಿದ್ದ ಪ್ರತಿಯೊಬ್ಬನೂ ತನ್ನ ಜೀವಿತ ಕಾಲದಲ್ಲಿ ಒಮ್ಮೆ ಅಥವಾ ಅನೇಕ ಸಮಯಗಳಲ್ಲಿ ಅಸ್ಪೃಶ್ಯತೆಯ ಅವಮಾನಕ್ಕೆ ಒಳಗಾಗುವುದು ಅನಿವಾರ್ಯ. ರಾಮ್‌ನಿಗೂ ತನ್ನ ಶಾಲೆಯಲ್ಲಿ ಈ ಅವಮಾನ ತಟ್ಟಿತು.

ವಿದ್ಯಾರ್ಥಿಗಳು ನೀರು ಕುಡಿಯಲು ಶಾಲೆಯಲ್ಲಿ ಮುಸ್ಲಿಂರಿಗೆ ಮತ್ತು ಹಿಂದೂಗಳಿಗೆ ಎರಡು ಪ್ರತ್ಯೇಕ ನೀರಿನ ಮಡಿಕೆಗಳನ್ನು ಇಟ್ಟಿದ್ದರು. ದಲಿತರು ಹಿಂದೂಗಳ ಜೊತೆಗೆ ನೀರು ಕುಡಿಯುತ್ತಿದ್ದರು. ಆದರೆ ಅದು ಬಹಳ ದಿನ ನಡೆಯಲಿಲ್ಲ. ಹಿಂದೂ ವಿದ್ಯಾರ್ಥಿಗಳಿಗೆ ದಲಿತ ವಿದ್ಯಾರ್ಥಿಗಳು ತಮ್ಮ ಮಡಿಕೆಯಲ್ಲೇ ನೀರು ಕುಡಿಯುವುದನ್ನು ಸಹಿಸಲಾಗಲಿಲ್ಲ. ಅದರಿಂದ ಮುಖ್ಯೋಪಾಧ್ಯಾಯರಿಗೆ ದೂರು ಸಲ್ಲಿಸಿದರು. ಮುಖ್ಯೋಪಾಧ್ಯಾಯರು ದೂರಿಗೆ ಆರಂಭದಲ್ಲಿ ಬೆಲೆ ಕೊಡಲಿಲ್ಲ. ಆದರೆ ಅದು ಗಂಭೀರ ಸ್ವರೂಪ ಪಡೆಯಿತು. ಅದರಿಂದ ದಲಿತರಿಗೆ ಪ್ರತ್ಯೇಕ ನೀರಿನ ಮಡಿಕೆ ಇಡಲು ನಿರ್ಧರಿಸಿದರು.

ಪ್ರತ್ಯೇಕ ಮಡಿಕೆ ಅಪಮಾನದ ಸಂಕೇತ. ಜಾತಿಯ ಅಹಂಕಾರದ ದ್ಯೋತಕ ಎಂದು ಬಗೆದ ಜಗಜೀವನ್ ಇದನ್ನು ತಪ್ಪಿಸಲು ಒಂದು ತಂತ್ರ ಹೂಡಿದ. ರಹಸ್ಯವಾಗಿ ಎರಡು ಬಾರಿ ಪ್ರತ್ಯೇಕ ಮಡಿಕೆಗಳನ್ನು ಒಡೆದು ಹಾಕಿದನು. ಇದರಿಂದ ರೋಸಿದ ಮುಖ್ಯೋಪಾಧ್ಯಾಯರು ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಮಡಿಕೆಯನ್ನು ಇಡಲು ತೀರ್ಮಾನಿಸಿದರು.

ಇದನ್ನು ಸಮ್ಮತಿಸದವರು ತಮ್ಮದೇ ಆದ ಪ್ರತ್ಯೇಕ ನೀರಿನ ವ್ಯವಸ್ಥೆ ಏರ್ಪಡಿಸಿಕೊಳ್ಳಬೇಕೆಂದು ಆಜ್ಞಾಪಿಸಿದರು. ಚಿಕ್ಕ ವಯಸ್ಸಿನಲ್ಲೇ ಅಸ್ಪೃಶ್ಯತೆ ವಿರುದ್ಧ ರಾಮ್ ತೋರಿದ ಈ ಪ್ರತಿಭಟನೆ ಅವರ ಸಾಮಾಜಿಕ, ಆರ್ಥಿಕ ರಾಜಕೀಯ ಚಿಂತನೆಗಳಿಗೆ ಖಚಿತ ಸುಳಿವಿನ ಘಟನೆ ಆಗಿದೆ.

೧೯೨೫–೨೬ ರಾಮ್‌ರ ಬದುಕಿನ ತಿರುವಿನ ವರ್ಷಗಳು. ೧೯೨೫ರ ಮೇ ತಿಂಗಳು ವಾರಣಾಸಿಯಲ್ಲಿ ವಿದ್ಯಾರ್ಥಿಗಳ ಸಮ್ಮೇಳನ ನಡೆಯಲಿತ್ತು. ಸ್ವಾತಂತ್ರ್ಯ ಚಳುವಳಿ ಬಿಸಿಯೇರುತ್ತಿದ್ದ ಸಂದರ್ಭ. ವಿದ್ಯಾರ್ಥಿ ಸಮ್ಮೇಳನದಲ್ಲಿ ದೇಶದ ಮುಖಂಡರು ಪಾಲ್ಗೊಳ್ಳುತ್ತಿದ್ದರು.

ಜಗಜೀವನ್‌ರಾಮ್ ಆರ್ರಾ ನಗರದಿಂದ ಬಿಹಾರ್ ರಾಜ್ಯದ ಪ್ರತಿನಿಧಿಯಾಗಿ ಈ ಸಮ್ಮೇಳನಕ್ಕೆ ಆಯ್ಕೆಯಾದರು. ಸಮ್ಮೇಳನದ ಪ್ರಮುಖ ಕಾರ್ಯಕ್ರಮ ವಿದ್ಯಾರ್ಥಿಗಳ ಭಾಷಣ ಸ್ಪರ್ಧೆ. ರಾಮ್ ಇದರಲ್ಲಿ ಬಹುಮಾನ ಪಡೆದ. ಪಂಡಿತ ಮದನಮೋಹನ ಮಾಳವೀಯ ಸಭೆಗೆ ಆಗಮಿಸಿದ್ದರು.

೧೯೨೬ ಕಿಲಾಫತ ಚಳುವಳಿಯ ಕಾವು ದೇಶದೆಲ್ಲೆಡೆ ಪಸರುತ್ತಿದ್ದಾಗ ರಾಷ್ಟ್ರ ನಾಯಕರು ಜನರನ್ನು ಹುರಿದುಂಬಿಸಲು ಬಿರುಸಾಗಿ ತಿರುಗುತ್ತಿದ್ದರು. ಆರ್ರಾ ನಗರದಲ್ಲಿ ಇಂಥ ಒಂದು ದೊಡ್ಡ ಸಭೆ ಮೇ ತಿಂಗಳಲ್ಲಿ ನಡೆಯಲಿತ್ತು. ಪಂಡಿತ್ ಮಾಳವೀಯರು ಮತ್ತು ಮಹ್ಮದಾಲಿ ಜಿನ್ನಾ ಸಭೆಯ ಪ್ರಮುಖ ಭಾಷಣಕಾರರು. ಅಲ್ಲಿನ ದಲಿತರು ತಮ್ಮ ಸಮಸ್ಯೆಗಳ ಕುರಿತು ಒಂದು ಭಿನ್ನವತ್ತಳೆ ಅರ್ಪಿಸಲು ನಿರ್ಧರಿಸಿದರು. ಅದನ್ನು ಸಿದ್ಧಪಡಿಸಿ ಸಭೆಯಲ್ಲಿ ಓದುವ ಹೊಣೆಗಾರಿಕೆಯನ್ನು ಜಗಜೀವನ್‌ರಾಮ್‌ಗ ವಹಿಸಿದ್ದರು. ೧೮ ವರ್ಷದ ರಾಮ್ ಈ ಕಾರ್ಯವನ್ನು ಎಲ್ಲರ ಮನಮಿಡಿಯುವಂತೆ ಓದಿದರು. ಮಾಳವೀಯರು ರಾಮ್‌ನ ವಾಕ್ಚಾತುರ್ಯಕ್ಕೆ ಮಾರುಹೋದರು. ತಾವು ತಂಗಿದ್ದ ಬಿಡಾರಕ್ಕೆ ಆತನನ್ನು ಕರೆದುಕೊಂಡು

ಹೋಗಿ ಮುಂದಿನ ವಿದ್ಯಾಭ್ಯಾಸವನ್ನು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ನಡೆಸಲು ಆಹ್ವಾನಿಸಿದರು.

ಅದೇ ವರ್ಷದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಜಗಜೀವನ್ ಫಲಿತಾಂಶ ಗಣಿತದಲ್ಲಿ ನೂರಕ್ಕೆ ನೂರು ಅಂಕಗಳೊಂದಿಗೆ ಪ್ರಥಮ ಶ್ರೇಣಿ. ಇಡೀ ಜಿಲ್ಲೆಗೇ ಪ್ರಥಮ ಸ್ಥಾನ. ಈ ಫಲಿತಾಂಶ ಎಲ್ಲರ ಕಣ್ಣು ತೆರೆಸುತ್ತದೆ. ೧೯೨೭ರ ಜುಲೈ ತಿಂಗಳು ಬನಾರಸ್ ಹಿಂಟೂ ವಿಶ್ವವಿದ್ಯಾಸಿಲಯಕ್ಕೆ ರಾಮ್ ಸೇರಿದರು. ಬಿರ್ಲಾ ವಿದ್ಯಾರ್ಥಿ ವೇತನದ ಸಹಾಯದಿಂದ ರಾಮ್‌ರು ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆದರು. ಅಸ್ಪೃಶ್ಯತೆಯ ಭೂತ ಮತ್ತೊಮ್ಮೆ ಇಲ್ಲಿ ಕಾಡಿತು. ವಿದ್ಯಾರ್ಥಿ ನಿಲಯದ ಕೆಲಸಗಾರರು ರಾಮ್ ಊಟದ ತಟ್ಟೆಯನ್ನು ತೊಳೆಯಲು ನಿರಾಕರಿಸಿದರು. ಒಬ್ಬ ಚಮ್ಮಾರನ ಎಂಜಲು ಎತ್ತಿ, ಆತನ ತಟ್ಟೆಗಳನ್ನು ಸ್ವಚ್ಛಗೊಳಿಸುವುದು ತಮ್ಮ ಜಾತಿ ಘನತೆಗೆ, ಅಹಂಗೆ ಹೊಡೆತ ಬೀಳುವುದೆಂದು ಕಾರ್ಮಿಕರು ಭಾವಿಸಿದ್ದರು. ರಾಮ್ ಈ ಅವಮಾನವನ್ನು ಸಹಿಸಲಿಲ್ಲ. ನೌಕರರು ವಿರೋಧಕ್ಕೆ ಮಣಿಯಲಿಲ್ಲ. ಕಡೆಗೆ ರಾಮ್ ಪ್ರಿನ್ಸಿಪಾಲರ ಮನವೊಲಿಸಿ ನಿಲಯದ ಹೊರಗಡೆ ವಾಸಿಸಲು ಅವಕಾಶ ಪಡೆದರು.

ಬನಾರಸ್ ನಗರದ ಹೊರವಲಯದ ಒಂದು ಕೊಠಡಿಯನ್ನು ಬಾಡಿಗೆಗೆ ಪಡೆದ ಜಗಜೀವನ್‌ರಾಮ್‌ರೊಂದಿಗೆ ತಾಯಿ ವಾಸಂತಿದೇವಿ ಸೇರಿಕೊಂಡರು. ಅಲ್ಲಿಗೆ ಸ್ವಲ್ಪ ದಿನಗಳಲ್ಲಿ ತಮ್ಮ ಅನೇ ವಯಸ್ಸಿನಲ್ಲಿ ಮದುವೆಯಾಗಿದ್ದ ಹೆಂಡತಿಯೂ ಬಂದು ಸೇರಿದಳು. ಮನೆಯ ಮಾಲೀಕನಿಗೆ ಹೇಗೋ ಜಾತಿ ತಿಳಿದುಹೋಯಿತು. ಮನೆಯಿಂದ ಹೊರಹಾಕಲು ಯತ್ನಿಸಿದನು. ಆದರೆ ರಾಮ್‌ರ ಅಧ್ಯಾಪಕರೊಬ್ಬರು ಮಧ್ಯೆ ಪ್ರವೇಶಿಸಿ ಮುಂದಿನ ಅಪಾಯವನ್ನು ತಪ್ಪಿಸಿದರು.

ಕೆಲವೇ ದಿನಗಳಲ್ಲಿ ಜಗಜೀವನ್‌ರಾಮ್ ಮತ್ತೂ ಒಮ್ಮೆ ಅಸ್ಪೃಶ್ಯತೆಯ ಅವಮಾನಕ್ಕೆ ಬಲಿಯಾಗುತ್ತಾರೆ. ಕ್ಷೌರಿಕನೊಬ್ಬ ಅವರ ಕೂದಲನ್ನು

ತೆಗೆಯಲು ನಿರಾಕರಿಸಿದನು. ಪಾಪ ಆ ಕ್ಷೌರಿಕನಿಗೆ ಈ ನಾಡಿನ ಪುರೋಹಿತಶಾಹಿ ಸಿದ್ಧಾಂತ ತನ್ನ ಬದುಕನ್ನೂ ಕೊಂದುಹಾಕಿರುವ ಚರಿತ್ರೆ ತಿಳಿಯಲು ಹೇಗೆ ಸಾಧ್ಯ?

ಜಗಜೀವನ್‌ರಾಮ್ ಇದಕ್ಕೆ ಒಂದು ಸಾಮೂಹಿಕ ತಳಪಾಯ ತೋಡಿದರು. ಕ್ಷೌರಿಕನ ಉದ್ಧಟತನವನ್ನು ಅಜ್ಞಾನದ ಫಲವೆಂದು ಪರಿಗಣಿಸಿದರು. ಆತನ ವಿರುದ್ಧ ವ್ಯಕ್ತಿಗತ ದ್ವೇಷ ಸಾಧಿಸಲು ಬಯಸಲಿಲ್ಲ. ದಲಿತ ವರ್ಗಗಳನ್ನು ಸಂಘಟಿಸಿ ಕ್ಷೌರಿಕನ ಮನೋಪ್ರವೃತ್ತಿ ವಿರುದ್ಧ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಚಳುವಳಿಯ ಗಾಳಿ ಒಂದುಕಡೆ ಮತ್ತು ಅಂಬೇಡ್ಕರ್‌ರ ಸ್ವಾಭಿಮಾನ ಜಾಗೃತಿಯ ಆಂದೋಲನದ ಗಾಳಿ ಮತ್ತೊಂದು ಕಡೆ ಬೀಸುತ್ತಿದ್ದ ಸಂಕ್ರಮಣದ ಕಾಲವದು. ಭಾರತದಲ್ಲಿ ಆಗಲೇ ಕನಿಷ್ಟ ಪ್ರಮಾಣದ ಮೇಲ್ಪದರದ ಪರಿವರ್ತನಾ ಮಿಣುಕುಗಳು ಅಲ್ಲಲ್ಲಿ ಗೋಚರಿಸುತ್ತಿದ್ದವು. ಇದರಿಂದ ಬನಾರಸ್‌ನ ದಲಿತರ ಹೋರಾಟಕ್ಕೆ ಹಿಂದುಳಿದ ಜಾತಿಗಳ ಬೆಂಬಲವೂ ದೊರಕಿತು. ಸಮಸ್ಯೆ ಬೇಗನೆ ದಲಿತರ ಪರವಾಗಿ ಇತ್ಯರ್ಥವಾಯಿತು. ರಾಮ್‌ರಿಗೆ ಸಂಘಟನೆ ಮತ್ತು ಹೋರಾಟದ ಮಹತ್ವವನ್ನು ಎತ್ತಿತೋರಿತು ಈ ಘಟನೆ.

ಎರಡು ವರ್ಷ ಇಂಟರ್‌ಮೀಡಿಯೇಟ್ ಮುಗಿಯಿತು. ಬನಾರಸ್ ರಾಮ್‌ರ ರಾಜಕೀಯ, ಸಾಮಾಜಿಕ ಬದುಕಿನ ಪ್ರಥಮ ಕಾರ್ಯಾಗಾರ. ಅವರು ವಿಜ್ಞಾನದ ವಿದ್ಯಾರ್ಥಿಯಾದರು. ಹಿಂದೂ ಸಮಾಜದ ನಾಡಿಬಡಿತ ಅರಿತರು. ಮುಂದೆ ಪದವಿಗಾಗಿ ಕಲ್ಕತ್ತಾದ ವಿದ್ಯಾಸಾಗರ ಕಾಲೇಜಿನಲ್ಲಿ ೧೯೩೧ರಲ್ಲಿ ಪ್ರವೇಶ ಪಡೆದರು. ಸ್ವಾತಂತ್ರ್ಯ ಮತ್ತು ಅರಿವು ದಲಿತರ ವಿಮೋಚನೆಯ ದಾರಿದೀಪ ಎಂದು ಭಾವಿಸಿದ ಜಗಜೀವನ್ ಸ್ವಾತಂತ್ರ್ಯ ಚಳುವಳಿ ಹಾಗೂ ಶಿಕ್ಷಣದ ಕಡೆಗೆ ಒಟ್ಟಿಗೆ ತೀವ್ರ ಗಮನಹರಿಸಿದರು. ೧೯೩೪ರಲ್ಲಿ ಕಲ್ಕತ್ತ ವಿಶ್ವವಿದ್ಯಾನಿಲಯದ ಬಿ.ಎಸ್ಸಿ. ಪದವಿ ಪಡೆದರು.

ಸ್ವಾತಂತ್ರ್ಯ ಚಳುವಳಿ:

ದಲಿತರ ವಿಮೋಚನೆ ಮತ್ತು ನಾಡಿನ ಸ್ವಾತಂತ್ರ್ಯ ಪ್ರತ್ಯೇಕವಾದವಲ್ಲ. ಒಂದಕ್ಕೊಂದು ಅವು ಬೆಸದಿವೆ. ದೇಶ ಬ್ರಿಟಿಷರಿಂದ ಬಿಡುಗಡೆ ಪಡೆದರೆ ದಲಿತರೂ ಬದಲಾವಣೆಯ ಆಶಾಕಿರಣಗಳನ್ನು ವೀಕ್ಷಿಸಬಹುದೆಂಬುದು ಜಗಜೀವನ್‌ರಾಮ್ ನಂಬಿಕೆ. ಕಾಲೇಜು ಶಿಕ್ಷಣದ ದಿನಗಳಲ್ಲಿ ಅವರು ದೇಶದ ವಿಮುಕ್ತಿ ಆಂದೋಲನದಲ್ಲಿ ಧುಮುಕಲು ಇದು ಪ್ರೇರಕ.

ಕಾಂಗ್ರೆಸ್ ಅಧಿವೇಶನಗಳಲ್ಲಿ ಜಗಜೀವನ್‌ರಾಮ್ ಭಾಗವಹಿಸುತ್ತ ಗಾಂಧಿ, ನೆಹರು, ಸುಭಾಷ್ ಮುಂತಾದ ಹಿರಿಯ ಮುಖಂಡರ ಮಾತುಗಳಿಂದ ಆಕರ್ಷಿತರಾದರು. ಇದೇ ಸಂದರ್ಭದಲ್ಲಿ ದಲಿತ ಸಂಘಟನೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಸೆಣಬು ಗಿರಣಿಗಳ ದಲಿತ ಕಾರ್ಮಿಕರು ಮತ್ತು ಇತರೇ ಕೂಲಿಕಾರರು ಒಂದು ಬೃಹತ್ ಸಮ್ಮೇಳನವನ್ನು ಏರ್ಪಡಿಸಿದರು. ಕಲ್ಕತ್ತಾ ನಗರದಲ್ಲಿ ೧೫ ಸಾವಿರ ದಲಿತರು ಒಂದೆಡೆ ಸೇರಿದ್ದೊಂದು ಪ್ರಮುಖ ಘಟನೆ. ಬಂಗಾಳದ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಇದು ಸ್ಪಷ್ಟ ಹೆಜ್ಜೆ. ಸಮ್ಮೇಳನ ಜಗಜೀವನರಲ್ಲಿ ಅಪಿತಿದ್ದ ಧೀಮಂತ ನಾಯಕನನ್ನು ಹೊರಹೊಮ್ಮಿಸಿತು.

ದಲಿತರ ಪ್ರತ್ಯೇಕ ಚುನಾವಣೆ ಕ್ಷೇತ್ರಗಳನ್ನು ನಿರಾಕರಿಸಿದ ಮತ್ತು ಅದರ ಮೂಲಕ ದಲಿತರಿಗೆ ಎಂದೆಂದೂ ಪರಿಣಾಮಕಾರಿ ಪ್ರಾತಿನಿಧ್ಯ ಲಭಿಸದಂತೆ ತಡೆಹಿಡಿದ 'ಪೂನಾ ಒಪ್ಪಂದ' ಭಾರತದ ಚರಿತ್ರೆಯಲ್ಲಿ ದಲಿತರ 'ಮ್ಯಾಗ್ನಕಾರ್ಟ್' ಆಗಲು ಅಸಾಧ್ಯ. ಅದೊಂದು ದಲಿತರ ರಾಜಕೀಯ ಅಭಿವೃದ್ಧಿಗೆ ಎದುರಾದ ಕಾರ್ಮೋಡ. ದಲಿತರ ಈ ಪ್ರಭಾವಶಾಲಿ ರಾಜಕೀಯ ಅಸ್ತ್ರವನ್ನು ರದ್ದುಪಡಿಸಲು ಗಾಂಧೀಜಿಯವರು ನಡೆಸಿದ ಉಪವಾಸ ಸತ್ಯಾಗ್ರಹವನ್ನು ಖಂಡಿಸಿ ಜಗಜೀವನರು ಒಂದು ಗಂಭೀರ ಪತ್ರ ಬರೆಯುತ್ತಾರೆ.

ಇದು ಗಾಂಧೀಜಿ ಮತ್ತು ಕಾಂಗ್ರೆಸ್ ಗಮನವನ್ನು ದಲಿತರ ಕಡೆಗೆ ಸೆಳೆಯುತ್ತದೆ. ೧೯೩೨, ಸೆಪ್ಟೆಂಬರ್ ೩೦ರಂದು ಅಸ್ಪೃಶ್ಯತಾ ನಿವಾರಣಾ ಲೀಗ್ ಅನ್ನು ಬೊಂಬಾಯಿಯಲ್ಲಿ ಸ್ಥಾಪಿಸಲಾಯಿತು. ಬಿರ್ಲಾ ಅದರ ಪ್ರಥಮ ಅಧ್ಯಕ್ಷರು. ಮುಂದೆ ಇದೇ ಹರಿಜನ ಸೇವಾ ಸಂಘವಾಗಿ ಪರಿಣಮಿಸಿತು. ಜಗಜೀವನ್‌ರಾಮ್ ಬಿಹಾರ್ ರಾಜ್ಯದ ಈ ಸಂಘದ ಪ್ರಧಾನ ಕಾರ್ಯದರ್ಶಿಗಳು.

ಜಗಜೀವನ್‌ರಾಮ್‌ರ ಮೊದಲ ಪತ್ನಿ ೧೯೩೩ರಲ್ಲಿ ಅಗಲಿದರು. ಕಾನ್ಪುರದ ಜನಪ್ರಿಯ ಸಮಾಜ ಸೇವಕರಾದ ಡಾ. ಬಿರ್‌ಬಲ್‌ರ ಮಗಳಾದ ಇಂದ್ರಾಣಿ ದೇವಿಯವರನ್ನು ೧೯೩೫ರ ಜೂನ್ ತಿಂಗಳಲ್ಲಿ ಮದುವೆ ಆಗುತ್ತಾರೆ.

ಅಂಬೇಡ್ಕರ್ ಸಿಡಿಸಿದ ಮತಾಂತರದ ಬಾಂಬು ಹಿಂದೂಗಳಲ್ಲಿ ನಡುಕ ಹುಟ್ಟಿಸಿತು. ದೇಶದೆಲ್ಲೆಡೆ ಅಂಬೇಡ್ಕರ್ – ಮತಾಂತರ ಕುರಿತ ಪರ ಮತ್ತು ವಿರೋಧಿ ಸಭೆಗಳು ನಡೆದವು. ರಾಜಕೀಯ ಮತ್ತು ಧಾರ್ಮಿಕ ಮುಖಂಡರುಗಳ ಸಂಹಾರ ಚರ್ಚೆ ಬಿರುಸಾಯಿತು. ಮತಾಂತರ ಗಂಭೀರ ಚರ್ಚೆಯ ಗ್ರಾಸವೆನಿಸಿತು. ಈ ಯಜ್ಞದಲ್ಲಿ ಹಿಂದೂ ಮಹಾಸಭೆ ಹಿಂದೆಬೀಳಲಿಲ್ಲ.

೧೯೩೫ರ ಡಿಸೆಂಬರ್ ೨೯ರಂದು ಪೂನಾದಲ್ಲಿ ಪಂಡಿತ್ ಮಾಳವೀಯರ ಅಧ್ಯಕ್ಷತೆಯಲ್ಲಿ ಸಭಾ ಹಿಂದೂಗಳ ಒಂದು ಬೃಹತ್ ಸಮಾವೇಶ ವ್ಯವಸ್ಥೆಗೊಳಿಸಿತು. ಪುರಿ ಶಂಕರಾಚಾರ್ಯ, ಜಗಜೀವನ್‌ರಾಮ್ ಮುಂತಾದವರು ಸಭೆಗೆ ಆಹ್ವಾನಿತರು. ರಾಮ್ ಸಭೆಯಲ್ಲಿ ಈ ನಿರ್ಣಯ ಮಂಡಿಸಿದರು.

"ಜಾತಿ ಮತ್ತು ಪಂಗಡಗಳ ಭೇದ ಇರದೆ ಎಲ್ಲರಿಗೂ
ಸಮಾನ ಅವಕಾಶ ಕಲ್ಪಿಸಬೇಕು. ದೇವಾಲಯ, ಶಾಲೆ,
ಛತ್ರ ಮತ್ತು ಹೋಟೆಲ್‌ಗಳಿಗೆ ದಲಿತರಿಗೆ ಮುಕ್ತ

ಪ್ರವೇಶ ಇರಬೇಕು. ಬಾವಿ – ನದಿ ನೀರನ್ನು ದಲಿತರು ಉಪಯೋಗಿಸಲು ಯಾರ ಅಡ್ಡಿ, ಆತಂಕಗಳೂ ಇರಬಾರದು. ಜಾತಿಯಾಧಾರಿತ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಶೋಷಣೆಯನ್ನು ತಕ್ಷಣ ನಿಲ್ಲಿಸಬೇಕು.''

ನಿರ್ಣಯದ ಒಡಲು ದಲಿತರ ಸಮಗ್ರ ಬದುಕನ್ನು ಧ್ವನಿಸುತ್ತದೆ. ಮತಾಂತರಕ್ಕೆ ಹಿಂದೂ ಧರ್ಮವೇ ಮೂಲ. ಅದರ ಆಮೂಲಾಗ್ರ ಪರಿವರ್ತನೆಯೇ ಧರ್ಮಾಂತರ ತಪ್ಪಿಸುತ್ತದೆ ಎಂಬುದು ನಿರ್ಣಯದ ಆಶಯ. ದುರಾದೃಷ್ಟ ಪುರಿ ಶಂಕರಾಚಾರ್ಯ ನಿರ್ಣಯದ ದೇವಸ್ಥಾನ ಪ್ರವೇಶದ ಭಾಗವನ್ನು ವಿರೋಧಿಸಿದರು. ಜಗಜೀವನ್‌ರಾಮ್ ಮತ್ತು ಅವರ ಅನುಚರರು ಇದನ್ನು ತೀವ್ರವಾಗಿ ಪ್ರತಿಭಟಿಸಿದರು.

೧೯೩೫ರ ಭಾರತೀಯ ಕಾನೂನು ಪ್ರಕಾರ ಪ್ರಾಂತೀಯ ಶಾಸನಸಭೆಗಳ ಚುನಾವಣೆ ಘೋಷಣೆ. ಕಾಂಗ್ರೆಸ್ ರಾಷ್ಟ್ರೀಯ ನಾಯಕರ ಗಮನ ಇತ್ತ ಕಡೆ ಹರಿಯಿತು. ಬಿಹಾರಿನ ಪ್ರಮುಖ ನಾಯಕರಾದ ಜಗಜೀವನ್‌ರಾಮ್ ಪಕ್ಷದ ಪ್ರಚರಕ್ಕೆ ರಾಜ್ಯದ ತುಂಬಾ ಓಡಾಡಿದರು. ಕಾಂಗ್ರೆಸ್ ಅಧಿಕ ಬಹುಮತದಿಂದ ಗೆದ್ದಿತು.

ಕೃಷ್ಣಸಿನ್ಹಾರ ಮುಖಂಡತ್ವದಲ್ಲಿ ಬಿಹಾರ್‌ನ ಮಂತ್ರಿಮಂಡಲ ರಚನೆ. ರಾಜೇಂದ್ರಪ್ರಸಾದ್ ಮತ್ತು ಸಿನ್ಹಾ ಅವರು ರಾಮ್‌ರನ್ನು ಸಚಿವರಾಗುವಂತೆ ಒತ್ತಾಯಿಸಿದರು. ಆದರೆ ರಾಮ್ ತಮಗಿಂತಲೂ ಹಿರಿಯರಾದ ದಲಿತ ಪ್ರತಿನಿಧಿ ಜಗಲಾಲ್ ಚೌಧರಿ ಅವರ ಪರವಾಗಿ ಸಚಿವಸ್ಥಾನವನ್ನು ನಿರಾಕರಿಸಿದರು.

ರಾಮ್ ಕುರ್ಚಿ ಬಿಟ್ಟರೂ ರಾಮ್‌ರನ್ನು ಕುರ್ಚಿ ಬಿಡಲಿಲ್ಲ. ಶಾಸಕಾಂಗ ಕಾರ್ಯದರ್ಶಿ ಹುದ್ದೆ ಅವರನ್ನು ಹುಡುಕಿಕೊಂಡು ಬಂತು. ಬಿಹಾರದ ದೂರ ದೂರದ ಗ್ರಾಮೀಣ ಜನಸಂಪರ್ಕವನ್ನು ಈ ಅಧಿಕಾರಾವಧಿಯಲ್ಲಿ ಬೆಳೆಸಿಕೊಂಡರು. ಇದರಿಂದ ಜಗಜೀವನ್ ಅತ್ಯಂತ

ಪ್ರಮುಖ ನಾಯಕರೆನಿಸಿದರು, ಬಿಹಾರದಲ್ಲಿ. ಸ್ವಾತಂತ್ರ್ಯ ಎಲ್ಲಕ್ಕಿಂತ ಮಿಗಿಲು ಎಂದು ಭಾವಿಸಿದ್ದ ರಾಮ್, ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ೧೯೩೯ರಲ್ಲಿ ತಮ್ಮ ಪದವಿಗೆ ರಾಜೀನಾಮೆ ನೀಡಿದರು. ಚಳುವಳಿಗೆ ಅವರ ಹುರಿದುಂಬಿಸುವ ಭಾಷಣದ ಬಿಸಿ ಸರ್ಕಾರಕ್ಕೆ ಸಹಿಸಲಾಗಲಿಲ್ಲ. ತತ್ಫಲ ೧೯೪೦ರ ಅಕ್ಟೋಬರ್‌ನಲ್ಲಿ ರಾಮ್‌ರ ಬಂಧನ. ಮತ್ತು ಒಂದು ವರ್ಷದ ಹಜಾರಿಬಾಗ್ ಕಾರಾಗೃಹದ ಆತಿಥ್ಯ.

ಸೆರೆಮನೆ ವಾಸ ವಸ್ತುಶಃ ಒಂದು ಶಿಕ್ಷೆ ಎನಿಸಲಿಲ್ಲ. ಅದಕ್ಕೆ ಬದಲು ಜಗಜೀವನ್‌ರ ಬದುಕಿಗೆ ಒಂದು ಹೊಸ ಪರ್ವ ತೆರೆಯಿತು. ಕಾರಾಗೃಹದಲ್ಲಿ ರಾಮ್ ಮಾರ್ಕ್ಸ್, ಗಾಂಧಿ ಮತ್ತು ಇತರೆ ಪ್ರಮುಖರ ಸಿದ್ಧಾಂತಗಳನ್ನು ಓದಿ ಅರಗಿಸಿಕೊಳ್ಳಲು ಅನುಕೂಲವಾಯಿತು.

೧೯೪೨ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜಗಜೀವನರ ಸಕ್ರಿಯ ಪಾತ್ರ. ದೇಶದ ಎಲ್ಲ ನಾಯಕರುಗಳು ಈ ಕಡೆ ಆಂದೋಲನದಲ್ಲಿ ಭಾಗವಹಿಸಿದ್ದರು. ಬಹುತೇಕ ಎಲ್ಲ ರಾಷ್ಟ್ರ ನಾಯಕರುಗಳನ್ನು ಬಂಧಿಸಿಡಲಾಯಿತು. ರಾಮ್ ಮಾತ್ರ ತಲೆ ತಪ್ಪಿಸಿಕೊಂಡು ಹೊಸ ಬಗೆಯ ಹೋರಾಟದಲ್ಲಿ ನಿರತರಾಗಿದ್ದರು. ವೈಯಕ್ತಿಕವಾಗಿ ಕರಪತ್ರಗಳನ್ನು ತಯಾರಿಸಿ ಜನರಿಗೆ ಅವುಗಳನ್ನು ಹಂಚುತ್ತಿದ್ದರು. ಬ್ರಿಟಿಷ್ ಸರ್ಕಾರ ಇದರ ಬಗ್ಗೆ ಕೆಂಡ ಕಾರಿತು. ಜಗಜೀವನ್‌ರನ್ನು ಬಂಧಿಸಲು ಎಲ್ಲೆಡೆ ಶೋಧನೆ ಆರಂಭವಾಯಿತು. ಕಡೆಗೆ ೧೯೪೨ರ ಆಗಸ್ಟ್ ೨೦ರಂದು ಬಂಧಿತರಾದರು. ಬಂಕಾಪುರ ಸೆರಮನೆಯ ಗಾಳಿ, ಬೆಳಕಿರದ ಚಿಕ್ಕ ಕೊಠಡಿ ಅವರ ಸೆರೆಮನೆ ವಾಸದ ಉದ್ಘಾಟನೆ. ಪ್ರತಿಕೂಲ ಪರಿಸರ ಆರೋಗ್ಯವನ್ನು ಬೇಗ ಕುಂದಿಸಿತು. ಆದರೆ ಬಿಡುಗಡೆ ಮಾತ್ರ ೧೪ ತಿಂಗಳ ತರುವಾಯ.

ಕಾರಾಗೃಹದಿಂದ ಹೊರಬಂದ ಮೇಲೆ ಜಗಜೀವನ್ ಅಖಿಲ ಭಾರತ ದಲಿತ ವರ್ಗಗಳ ಕಾರ್ಯಕಾರಿ ಸಮಿತಿಯ ಸಭೆಯನ್ನು ನಾಗಪುರದಲ್ಲಿ ಕರೆದರು. ಸಭೆ ಗಾಂಧೀಜಿ, ರಾಜಾಜಿ ರೂಪಿಸಿದ

ಸೂತ್ರಗಳಲ್ಲಿ ದಲಿತರ ರಾಜಕೀಯ ಹಕ್ಕುಭಾದ್ಯತೆಗಳು ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದವು. ಸಭೆ ಇದನ್ನು ತೀವ್ರವಾಗಿ ಪರಿಗಣಿಸಿ ವಿಷಾದ ವ್ಯಕ್ತಪಡಿಸಿತು.

೧೯೪೬ರ ಸೆಪ್ಟೆಂಬರ್ ೩, ನೆಹರೂ ನೇತೃತ್ವದಲ್ಲಿ ಮಧ್ಯಕಾಲೀನ ಸರ್ಕಾರದ ರಚನೆ. ಕಾಂಗ್ರೆಸ್ ಒಳಗೊಂಡಂತೆ ದೇಶದ ಎಲ್ಲ ಧರ್ಮೀಯರಿಗೆ ಮತ್ತು ಜನಾಂಗಗಳ ಜನರಿಗೆ ಸರ್ಕಾರದಲ್ಲಿ ಪ್ರಾತಿನಿಧ್ಯ ಲಭ್ಯ. ಜಗಜೀವನ್ ಮಂತ್ರಿಮಂಡಲದಲ್ಲಿ ಒಬ್ಬರು.

ಅಂದು ಮಂತ್ರಿ ಪದವಿಗೇರಿದ ಜಗಜೀವನ್‌ರಾಮ್‌ರ ರಾಜಕೀಯ ಜೀವನದ ಯಶಸ್ಸಿನ ಮೆಟ್ಟಿಲುಗಳ ಸೋಪಾನ ಕೊನೆಯ ಉಸಿರಿರುವವರೆಗೆ ಬೆಳೆಯುತ್ತಾ ಸಾಗಿತ್ತೆಂಬ ಮಾಹಿತಿಯನ್ನು ಈ ಸಂದರ್ಭದಲ್ಲೇ ದಾಖಲಿಸುವುದು ಅಪ್ರಸ್ತುತವೆನಿಸದು.

ಸ್ವತಂತ್ರ ಭಾರತದಲ್ಲಿ ಪ್ರಮುಖ ಪಾತ್ರ:

ರಾಮ್‌ರ ಮಧ್ಯಕಾಲೀನ ಸರ್ಕಾರದ ಕಾರ್ಮಿಕ ಮಂತ್ರಿಗಳ ಪದವಿ ೧೯೫೨. ಪ್ರಥಮ ಸಾರ್ವತ್ರಿಕ ಚುನಾವಣೆವರೆಗೆ ಮುಂದುವರಿಯುತ್ತದೆ. ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಅವರ ಕೊಡುಗೆ ಅಪಾರ. ಕನಿಷ್ಠ ವೇತನ, ನೌಕರರ ರಾಜ್ಯ ವಿಮಾ ನಿಧಿ, ಭವಿಷ್ಯ ನಿಧಿ, ಬೋನಸ್ ಮುಂತಾದ ಕಾರ್ಮಿಕರ ಹಿತ ರಕ್ಷಿಸುವ ಶಾಸನಗಳು ಅವರ ಕಾಲದಲ್ಲಿ ರೂಪಿತಗೊಂಡವು. ಈ ಕಾನೂನುಗಳ ಅನುಷ್ಠಾನ ಪ್ರತಿಯೋರ್ವ ಕೈಗಾರಿಕೋದ್ಯಮಿಯ ಆದ್ಯ ಕರ್ತವ್ಯ. ಸಣ್ಣ, ದೊಡ್ಡ ಎಲ್ಲ ಬಂಡವಾಳಿಗರು ಶಾಸನಗಳ ಅನುಚರರಾಗಬೇಕು. ತಪ್ಪಿದವರು, ಉದ್ಯಮಗಳಲ್ಲಿ ಮುಂದುವರಿಯುವ ಹಕ್ಕು ಕಳೆದುಕೊಳ್ಳುತ್ತಾರೆಂಬ ಕಟ್ಟೆಚ್ಚರಿಕೆಯ ಖಚಿತ ಮಾತುಗಳನ್ನು ರಾಮ್ ಆಡಿರುವುದು. ಅಲ್ಲದೆ ಕಾರ್ಮಿಕ – ಮಾಲೀಕರ ಮಧ್ಯೆ ಸಾಮರಸ್ಯ

ಮೂಡಿಸಲು ತ್ರಿಸದಸ್ಯ ಸಲಹಾ ಸಮಿತಿಯು ಇವರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು.

೧೯೪೫ರಲ್ಲಿ ಟಾಟಾ ಕಂಪನಿಯಲ್ಲಿ ಒಂದು ದೊಡ್ಡ ಬಿರುಕು ಕಾಣಿಸುತ್ತದೆ. ಆದರೆ ರಾಮ್‌ರ ಸಮಯೋಚಿತ ಮುಂದಾಲೋಚನೆಯ ಕಾರ್ಯಕ್ಷಮತೆ ಆ ಕಂದಕವನ್ನು ಮುಚ್ಚುತ್ತದೆ. ಅವರ ಈ ದಕ್ಷತೆಗೆ ನೆಹರೂ ಅಭಿನಂದಿಸಿದರು.

೧೯೪೭. ಜೂನ್ ತಿಂಗಳು ಜಗಜೀವನ್‌ರಾಮ್ ಸಾವಿನ ಸುಳಿಯಿಂದ ಪಾರಾದರು. ಜಿನೀವಾದ ಅಂತರರಾಷ್ಟ್ರೀಯ ಕಾರ್ಮಿಕರ ಸಮ್ಮೇಳನದಿಂದ ವಿಮಾನದಲ್ಲಿ ಹಿಂತಿರುಗಿ ಬರುವಾಗ 'ಬಾಶ್ರ'ದ ಬಳಿ ಅಪಘಾತ ಸಂಭವಿಸಿತು. ತೀವ್ರ ಗಾಯಗೊಂಡ ರಾಮ್, ವಿಲ್ಲಿಂಗಡ್‌ನ ನರ್ಸಿಂಗ್ ಹೋಂನಲ್ಲಿ ಒಂದೂವರೆ ತಿಂಗಳು ಸತತ ಚಿಕಿತ್ಸೆ ಪಡೆದರು. ಗಾಂಧೀಜಿ ಆಸ್ಪತ್ರೆಗೆ ಧಾವಿಸಿದರು. ಗಾಂಧಿ – ಜಗಜೀವನ್‌ರ ಅನನ್ಯ ಸಂಬಂಧದ ಪಾರದರ್ಶಕ ನೋಟ ಇದಾಗಿದೆ.

ಬಿಹಾರಿನ ದಲಿತರು ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಲು ರಾಮ್ ಕಾರಣೀಭೂತರು. ಆದರೆ ಈ ಅಪಘಾತದ ದುರಾದೃಷ್ಟ ಅವರಿಗೆ ಆಗಸ್ಟ್ ೧೫ರ ಸ್ವಾತಂತ್ರ್ಯ ಅಧಿಕಾರ ಹಸ್ತಾಂತರದ ಭಾವಪರವಶತೆಯ ಕಿರಣಗಳನ್ನು ಅನುಭವಿಸುವುದಕ್ಕೆ ಎದುರಾದ ಕತ್ತಲು.

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಏಷ್ಯಾ ಭಾಗದ ಸಮ್ಮೇಳನ ೧೯೪೭, ನವೆಂಬರ್ ತಿಂಗಳು ನಡೆಯಿತು. ಅದರ ಚುನಾಯಿತ ಅಧ್ಯಕ್ಷರು ಜಗಜೀವನ್‌ರಾಮ್.

"ರಾಮ್ ಕಾರ್ಮಿಕರ ಅಭಿವೃದ್ಧಿಯ ಪ್ರವರ್ತಕ. ಆತನ ಕರ್ತವ್ಯ ಅದ್ವಿತೀಯ. ಖಾಯಿದೆ ಪುಸ್ತಕಗಳಲ್ಲೂ ಮುದ್ರಿಸಲು ಅಸಾಧ್ಯ. ಆ ವರ್ಗಗಳ ಸ್ಥಿತಿಗತಿಗಳಲ್ಲಿ ಯಾವುದೇ ಗುಣಾತ್ಮಕ ಸ್ಥಿತ್ಯಂತರ ಆಗಿದ್ದರೆ ಅದರ ಹಿಂದೆ ಜಗಜೀವನ್‌ರಾಮ್ ಬುದ್ಧಿ – ಮನಸ್ಸು ಇರುವುದು"

ಎಂಬುದು ಡಾ. ರಾಜೇಂದ್ರಪ್ರಸಾದರ ಅಭಿಪ್ರಾಯ. ಈ ಮಾತಿನ ಅಂತರಂಗ ಕಾರ್ಮಿಕರ ಬಗೆಗ ಜಗಜೀವನರಲ್ಲಿ ಮನೆಮಾಡಿದ್ದ ನಡೆ–ನುಡಿಯಲ್ಲಿದ್ದ ತಾದಾತ್ಮ್ಯವನ್ನು ಬಿಚ್ಚಿ ತೋರಿಸದೇ ಇರದು.

ಸ್ವತಂತ್ರ ಭಾರತದ ಸಂವಿಧಾನ ರಚನಾ ಸಮಿತಿ ಮತ್ತು ಅದರ ವಿವಿಧ ಉಪಸಮಿತಿಗಳ ಜೀವನಾಡಿಗಳು ನೆಹರು, ಅಂಬೇಡ್ಕರ್, ವಲ್ಲಭಾಯಿ ಪಟೇಲ್, ರಾಜೇಂದ್ರ ಪ್ರಸಾದ್, ರಾಜಾಜಿ ಮುಂತಾದ ಹಿರಿಯರು. ಅವರೆಲ್ಲರೊಡನೆ ಈ ಎಲ್ಲ ಸಮಿತಿಗಳಲ್ಲಿ ರಾಮ್ ಕೂಡಾ ಪಾದರಸದಂತೆ ಅಲೆದಾಡುತ್ತಿದ್ದುದು ಮೆಚ್ಚುಗೆಯ ಅಂಶ.

೧೯೫೨, ಪ್ರಥಮ ಮಹಾ ಚುನಾವಣೆಯ ಫಲಿತಾಂಶ ಹೊರಬಿತ್ತು. ಕಾಂಗ್ರೆಸ್‌ಗೆ ಅಧಿಕ ಬಹುಮತ. ಇದೊಂದು ಅಸಹಜ – ಸೋಜಿಗದ ವಿಷಯವಾಗಿರಲಿಲ್ಲ. ರಾಮ್ ಕೂಡಾ ಸುಲಭವಾಗಿ ಗೆದ್ದು, ನೆಹರು ಮಂತ್ರಿಮಂಡಲದಲ್ಲಿ ಸಂಪರ್ಕ ಸಚಿವರಾದರು. ಧರ್ಮ, ದೇಶದ ಸರ್ವಕ್ಷೇತ್ರಗಳ ಸಂಪರ್ಕಗಳಿಗೆ ಕಡಿವಾಣ ಬಿಗಿದು ನಡುಗಡ್ಡೆಗಳನ್ನು ಸೃಷ್ಟಿಸುತ್ತ ದೇಶದ ಸಮಗ್ರತೆ ಕೊಂದದ್ದು ತಿಳಿದ ವಿಷಯ. ತಾಂತ್ರಿಕ ಮತ್ತು ವೈಜ್ಞಾನಿಕ ಸಾಧನಗಳಲ್ಲೇ ಕನಿಷ್ಟ ಪ್ರಮಾಣದ ಮೇಲ್ನೋಟದ ಸೇತುವೆ ಸಾಧ್ಯ. ಆದರೆ ಈ ಸಾಧನಾ ಸಾಮಗ್ರಿಗಳು ಸಾರ್ವತ್ರಿಕ ಒಡೆತನಕ್ಕೆ ಒಳಪಟ್ಟಿರಬೇಕೆಂದು ರಾಮ್‌ರ ಸೈದ್ಧಾಂತಿಕ ನಿಲುವು. ಅದರಂತೆ ಅವರು ಸಂಪರ್ಕ ಸಚಿವರಾದಾಗ ಮಾಡಿದ ಪ್ರಪ್ರಥಮ ಕೆಲಸ ವೈಮಾನಿಕ ಸೇವೆಯ ರಾಷ್ಟ್ರೀಕರಣ ಹಾಗೂ "ಏರ್ ಇಂಡಿಯಾ' ಮತ್ತು 'ಭಾರತೀಯ ಏರ್‌ಲೈನ್ಸ್' ಸಂಸ್ಥೆಗಳ ರಚನೆ. ಅಂಚೆ–ತಂತಿ ಮತ್ತು ದೂರವಾಣಿ ಕೇಂದ್ರಗಳು ದೇಶದ ಎಲ್ಲೆಡೆ ಬೆಳಗಿದವು.

ಈ ಇಲಾಖೆಯಲ್ಲಿ ರಾಮ್ ನಿರ್ವಹಿಸಿದ ಮತ್ತೊಂದು ಮಹತ್ತರ ಕಾರ್ಯ 'ಫರಕ್ಕಾ' ಸೇತುವೆಗೆ ಸಂಸತ್ತಿನಲ್ಲಿ ನಿರ್ಣಯ ಪಡೆಯುತ್ತ ಬುನಾದಿ ತೋಡಿದ್ದು. ಕಲ್ಕತ್ತ ಬಂದರಿಗೆ ಸೇತುವೆ ನಿರ್ಮಾಣ ಅವಶ್ಯಕ ಎಂಬುದನ್ನು ಬ್ರಿಟಿಷರು ಮನಗಂಡಿದ್ದರು. ದೇಶ ಆಗಿನ್ನೂ ಇಬ್ಭಾಗದ

ಕಹಿ ನುಂಗಿದ ಘಳಿಗೆ. ಪಾಕಿಸ್ತಾನವನ್ನು ಓಲೈಸುವ ಪ್ರಸಂಗಗಳು ಸೇತುವೆಗೆ ವಿರುದ್ಧವಿದ್ದವು. ಆದರೆ ರಾಮ್ ಚಾಣಾಕ್ಷತೆಗೆ ಈ ವಿರೋಧಗಳು ಮಣಿದವು.

೧೯೫೬ ರಾಮ್‌ರ ಸಾರಿಗೆ ಮತ್ತು ರೈಲ್ವೆ ಸಚಿವ ಸ್ಥಾನದ ಕಾರ್ಯಾರಂಭ. ಈ ಇಲಾಖೆಯಲ್ಲಿ ಬಹು ಹಿಂದಿನಿಂದಲೂ ಬೆಳೆದು ಬಂದಿದ್ದ ಸಾಂಪ್ರದಾಯಿಕ ಬೇರುಗಳನ್ನು ಆಮೂಲಾಗ್ರವಾಗಿ ಕಿತ್ತು ಬಿಸಾಡಲು ಯೋಜಿಸಿದರು. ಕ್ರಾಂತಿಕಾರಕ ಪರಿವರ್ತನೆಗಳ ತೆರೆಗಳು ರೈಲ್ವೆಯಲ್ಲಿ ಕಂಡವು. ೩ನೇ ದರ್ಜೆ ರೈಲ್ವೆ ಭೋಗಿಗಳು ಅಧಿಕ ಸೌಕರ್ಯದಿಂದ ಮಾನವೀಯ ಸ್ಪರ್ಶ ಪಡೆದವು. ಬ್ರಿಟಿಷರ 'ಹಿಂದೂ ಪಾನಿ' ಮತ್ತು 'ಮುಸ್ಲಿಂ ಪಾನಿ' ಬದಲು ಸ್ವತಂತ್ರ ಭಾರತದಲ್ಲಿ 'ಪಂಡಿತ್ ಪಾನಿ' ಅನ್ನುವ ಹೊಸ ಬಗೆಯ ನೀರಿನ ವ್ಯವಸ್ಥೆ ಪ್ರಯಾಣಿಕರಿಗೆ ತಲೆ ಎತ್ತಿತು. ಹೆಸರೇ ಸೂಚಿಸುವಂತೆ ಇಲ್ಲಿಗೆ ನೀರು ಸರಬರಾಜು ಮಾಡುವ ಏಕಸ್ವಾಮ್ಯತೆ ಪಂಡಿತರದು. ಮೇಲ್ಜಾತಿ ಪರಮಾಧಿಕಾರ ಶ್ರೇಷ್ಠತೆಯ ವರ್ತನೆ ವಿವಿಧ ಕಾಲದಲ್ಲಿ, ವಿವಿಧ ಸ್ವರೂಪಗಳಲ್ಲಿ ಬಿಂಬಿಸುತ್ತಿರುತ್ತದೆ. ದಲಿತರು – ಹಿಂದುಳಿದವರು ನೀರು ಒದಗಿಸುವ ಹಕ್ಕಿನಿಂದ ವಂಚಿತರು. ರೈಲ್ವೆ ಸಚಿವರಾದಾಕ್ಷಣ ರಾಮ್ ಈ ಭಿನ್ನತೆ ಕೊಂದು, ಸಾರ್ವಜನಿಕರ ನೀರು ವ್ಯವಸ್ಥೆ ಜಾರಿಗೆ ತಂದರು. ನೀರು ಸರಬರಾಜಿನ ವಿಶೇಷಾಧಿಕಾರ ಎಲ್ಲ ಜಾತಿ – ಪಂಗಡ – ಧರ್ಮದವರೂ ಪಡೆದರು. ರೈಲ್ವೆ ಉಪಹಾರ ಗೃಹಗಳಲ್ಲಿ ಕಡ್ಡಾಯವಾಗಿ ದಲಿತ ಅಡಿಗೆ ನೌಕರರನ್ನು ನೇಮಿಸಿಕೊಳ್ಳುವ ಆಜ್ಞೆ ಹೊರಡಿಸಿದ್ದು ರಾಮ್ ಅವರ ಕಾಲದಲ್ಲಿ.

ರಾಜ್ಯಾಂಗ ದಲಿತರಿಗೆ ರಾಜಕೀಯ ಮೀಸಲಾತಿ ಮಾತ್ರ ಯೋಜಿಸಿತ್ತು. ಆದರೆ ರಾಮ್ ಈ ತತ್ವವನ್ನು ಸರ್ಕಾರಿ ನೌಕರಿಗೂ ವಿಸ್ತರಿಸಿದರು. ಅಷ್ಟೇ ಅಲ್ಲದೆ ರೈಲ್ವೆ ಇಲಾಖೆಯ ಬಡ್ತಿಯಲ್ಲೂ ಮುಂದೆ ಅಂಚೆ–ತಂತಿ ಇಲಾಖೆಯಲ್ಲಿಯೂ ಮೀಸಲಾತಿ ನಿಯಮಾವಳಿಗಳು ವಿಸ್ತಾರಗೊಂಡವು

ಎಂಬುದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಂ.ಜಿ. ರಂಗ ಅವರ ಅಭಿಪ್ರಾಯ. ಇಂದು ದಲಿತರ ಸಾಮಾಜಿಕ – ಆರ್ಥಿಕ ವಲಯಗಳಲ್ಲಿ ಪರಿವರ್ತನೆ ಗಾಳಿ ಬೀಸುತ್ತಿರುವುದಕ್ಕೆ ಸರ್ಕಾರಿ ನೌಕರಿಗಳು ಮತ್ತು ಶಿಕ್ಷಣ ಮೂಲ ದ್ರವ್ಯಗಳು. ಈ ಬೆಳಕಿನಲ್ಲಿ ರಂಗಾ ಅವರ ಹೇಳಿಕೆಯನ್ನು ವಿಶ್ಲೇಶಿಸಿದಾಗ ದಲಿತರಿಗೆ ರಾಮ್ ಅವರು ನೀಡಿರುವ ಕೊಡುಗೆ ಹಿಮಾಲಯದಷ್ಟೇ ಎತ್ತರ, ಸಾಗರದಷ್ಟೇ ಆಳ. ಪದಗಳಲ್ಲೂ ಕಡೆದು ನಿಲ್ಲಿಸಲಾಗದು.

ದೇಶದ ರಕ್ಷಣೆಗೂ ತೀವ್ರ ಕಳಕಳಿ ಹೊಂದಿದವರು ಜಗಜೀವನ್. ಸಮಾಜದ ದುರ್ಬಲರ ಕ್ಷೇಮಾಭಿವೃದ್ಧಿಗೆ ಯಾವ ಆದ್ಯತೆಯೋ ಅದೇ ಆದ್ಯತೆಯನ್ನು ನಾಡಿನ ಸಂರಕ್ಷಣೆಗೂ ನೀಡಿದರು. ರೈಲ್ವೆ ಇಲಾಖೆಯಲ್ಲಿದ್ದಾಗಲೇ ಪೂರ್ವ ಗಡಿ ಭಾಗದ ರಕ್ಷಣೆಗೆ ತಳೆದ ನಿಲುವು ಇದಕ್ಕೊಂದು ಸ್ಪಷ್ಟ ನಿದರ್ಶನ. ಅನೇಕ ವರ್ಷಗಳ ಒತ್ತಡದ ನೆನೆಗುದಿಯಲ್ಲಿ ಬಿದ್ದ ಫರಕ್ಕ ಕಾರ್ಯಾಚಕ ನಡುವಿನ ರೈಲ್ವೆ ಮಾರ್ಗ ಕಾಯಕಲ್ಪ ಪಡೆಯಿತು. ಪಶ್ಚಿಮ ಬಂಗಾಳದ ದಕ್ಷಿಣ ಮತ್ತು ಉತ್ತರ ಭಾಗಗಳು ಇದರಿಂದ ಬೆಸೆದುಕೊಂಡವು. ರಾಷ್ಟ್ರದ ಪೂರ್ವ ಪ್ರದೇಶದ ಸಂರಕ್ಷಣೆಗೆ ಅಗತ್ಯದ ಕಾರ್ಯವಾಗಿತ್ತು ಇದು. ನಾಡಿನ ಇಂಥ ಆಯಕಟ್ಟಿನ ಪ್ರದೇಶ ಕಾರ್ಯವೂ ಹಿಂದಿನ ಆಡಳಿತಗಾರರ ಕಣ್ಣು ತೆರೆಸಲಿಲ್ಲವೆಂಬುದು ಆಶ್ಚರ್ಯಕರ. ಚೀನಾ ದಾಳಿಯ ಅಧಿಕ ಪ್ರಮಾಣದ ಅಸಾಹುತ ತಪ್ಪಿದ್ದು ಈ ರೈಲ್ವೆ ಮಾರ್ಗದಿಂದಲೇ ಎಂದರೆ ಉತ್ಪ್ರೇಕ್ಷೆ ಎನಿಸದು.

ನೆಹರೂ – ಶಾಸ್ತ್ರಿಗಳ ಕಣ್ಮರೆಯ ರಾಜಕೀಯ ಶೂನ್ಯತೆಗೆ ಉತ್ತರ ಶೋಧಿಸಿದ ಪ್ರಮುಖ ನಾಯಕರಲ್ಲಿ ರಾಮ್ ಕೂಡ ಒಬ್ಬರು. ೧೯೬೪–೬೫ರಷ್ಟೊತ್ತಿಗೆ ಅವರು ರಾಷ್ಟ್ರದ ಅಗ್ರಗಣ್ಯ ಮುಖಂಡರಾಗಿದ್ದರು.

೧೯೬೯–೭೦, ಆ್ಯನಿಬೆಸೆಂಟ್, ಗೋಖಲ್, ಗಾಂಧೀಜಿ ಬೆಳೆಸಿದ ಕಾಂಗ್ರೆಸ್ ಪಕ್ಷದ ಪ್ರಥಮ ಇಬ್ಭಾಗ. ದೇಶದ ರಾಜಕೀಯ ಚರಿತ್ರೆಯಲ್ಲಿ

ಅಗಾಧ ತಿರುವು. ಕಾಮ್‌ರಾಜ್, ನಿಜಲಿಂಗಪ್ಪ, ಮುರಾರ್ಜಿ ಹಾಗೂ ಇಂದಿರಾಗಾಂಧಿ, ಜಗಜೀವನ್ – ಇವರ ಮಧ್ಯೆ 'ಪಕ್ಷ ಮತ್ತು ಸರ್ಕಾರ'ದ ನಿಯಂತ್ರಣಕ್ಕಾಗಿ ಮುಸುಕಿನ ಯುದ್ಧದ ಉದ್ಘಾಟನೆ. ೧೯೬೯, ರಾಷ್ಟ್ರಪತಿ ಚುನಾವಣೆ ಅದಕ್ಕೆ ಉತ್ತಮ ಅಖಾಡ.

ಪಕ್ಷದ ಅಭ್ಯರ್ಥಿ ಆಯ್ಕೆ ಚದುರಂಗದಾಟದ ಪ್ರಥಮ ದಾಳ. ಇಂದಿರಾಗಾಂಧಿ ಜಗಜೀವನ್‌ರನ್ನು ಬೆಂಬಲಿಸಿದರೆ, ನಿಜಲಿಂಗಪ್ಪ ಮತ್ತಿತರರು ಸಂಜೀವರೆಡ್ಡಿಯವರನ್ನು ಬೆಂಬಲಿಸಿದರು. ಅತ್ಯುನ್ನತ ಸ್ಥಾನದ ಆಯ್ಕೆಯಾದ ಇದನ್ನು ಸಂವಾದ, ಚರ್ಚೆಯಲ್ಲೇ ಬಗೆಹರಿಸಬಹುದಾಗಿತ್ತು. ಆದರೆ ರಾಜಕೀಯ ಗ್ರಹಣದ ಕಾಳಗ ಆಗಾಗಲೇ ಬಯಲಾಗಿತ್ತು. ಆದರಿಂದ ಮಾತುಕತೆ ದೂರ ಉಳಿದಿತ್ತು.

ಆ ವರ್ಷ ಗಾಂಧೀಜಿ ಶತಮಾನೋತ್ಸವ. ಅದರಿಂದ ಜಗಜೀವನ್ ಸರ್ವಸಮ್ಮತ ಅಭ್ಯರ್ಥಿ ಆಗಬೇಕೆಂಬುದು ಇಂದಿರಾ ಇಂಗಿತ. ಆದರೆ ವಿರೋಧಿ ಬಣ ಇದ್ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಕಡೆಗೆ ಪಕ್ಷದ ಸಂಸದೀಯ ಸಮಿತಿ ಚುನಾವಣೆ ಮೇರೆಗೆ ಎರಡು ಗುಂಪು ಹೊರಗುಳಿದವು.

ಫಲಿತಾಂಶ ರಾಮ್‌ರಿಗೆ ಒಲಿಯಲಿಲ್ಲ. ವಿಜಯಮಾಲೆ ಸಂಜೀವರೆಡ್ಡಿಯವರ ಕೊರಳಿಗೆ ೪–೨ರ ಅಂತರದಲ್ಲಿ ಬಿತ್ತು. ಆದರೆ ಆ ಮಾಲೆ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ವಿ.ವಿ. ಗಿರಿ ವಿರುದ್ಧ ಬಾಡದೇ ಇರಲಾಗಲಿಲ್ಲ. ವಿ.ವಿ. ಗಿರಿ ಸ್ವತಂತ್ರ ಅಭ್ಯರ್ಥಿಯಾಗಿದ್ದರೂ ಇಂದಿರಾ – ಜಗಜೀವನ್‌ರ ಪರಿಶ್ರಮದಿಂದ ಜಯವನ್ನು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು.

ಗಾಂಧೀಜಿಯವರ ನೂರು ವರ್ಷಗಳ ಸುವರ್ಣ ಸಮಯದಲ್ಲಿ ದಲಿತರೊಬ್ಬರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡುವ ಒಂದು ಅತ್ಯುತ್ತಮ ಅವಕಾಶ ಗಾಂಧೀಜಿ ಭಕ್ತರಿಂದಲೇ ವಂಚಿತವಾಗಿದ್ದು ಚರಿತ್ರೆಯ ದುರಂತ. ಆ ಕಾಲದಲ್ಲೇ ಅಸ್ಪೃಶ್ಯರೊಬ್ಬರು ಅತ್ಯುನ್ನತ ಪದವಿಗೇರಿದ್ದರೆ ನಾಡಿನ ಸಾಂಸ್ಕೃತಿಕ ಸಭೆಯಲ್ಲಿ ಇದೊಂದು ಹೊಸ ಅಧ್ಯಾಯವೆನಿಸಿಬಿಡುತ್ತಿತ್ತು.

ಇಂದೂ ದಲಿತರು ಅದಕ್ಕಾಗಿಯೇ ಹೋರಾಟ ನಡೆಸುವ ಪ್ರಮೇಯವೂ ಬರುತ್ತಿರಲಿಲ್ಲ.

ಚುನಾವಣೆಯಲ್ಲಿ ನಡೆದ ರಾಜಕೀಯ ಹಿಕಮ್ಮತ್ತುಗಳು ಅದ್ಭುತ. ನಿಜಲಿಂಗಪ್ಪನವರು ಜನಸಂಘದ ಬೆಂಬಲ ಪಡೆಯಲೂ ಹೆಣಗಾಡುತ್ತಾರೆ. ಪಕ್ಷದ ಅನುಮತಿ ಪಡೆಯದೇ ಪಕ್ಷದ ಹೆಸರಲ್ಲಿ ವೈಯಕ್ತಿಕ ಪತ್ರ ಬರೆದರು. ಜಗಜೀವನ್ ಮತ್ತಿತರ ಪಕ್ಕಾ ಕಾಂಗ್ರೆಸ್ಸಿಗರು ಕೆಂಡವಾಗಲು ಕಾರಣವೆನಿಸಿತು ಇದು. ಈ ಮಧ್ಯೆ ಈ ಇಡೀ ಸಂಘರ್ಷಕ್ಕೆ ಇಂದಿರಾ ೧೪ ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದತಿ ಮತ್ತು ಭೂ ಸುಧಾರಣಾ ಕಾನೂನುಗಳ ಮೂಲಕ ಸೈದ್ಧಾಂತಿಕ ಸ್ವರೂಪ ರಚಿಸಿದ್ದರು. ಜನಸಂಘ ಈ ಎಲ್ಲ ಕಾರ್ಯಗಳ ವಿರುದ್ಧ ಇತ್ತೆಂಬುದನ್ನು ಪ್ರತ್ಯೇಕವಾಗಿ ಹೇಳುವುದು ಅನಗತ್ಯ. ಅದರಿಂದ ಜಗಜೀವನರು ನಿಜಲಿಂಗಪ್ಪನವರಿಗೆ ಉಗ್ರವಾದ ಪತ್ರಗಳನ್ನು ಬರೆದು ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಾರೆ.

ರಾಜಕೀಯ ಚದುರಂಗದಾಟದ ಈ ಅಂತರ ಸುಳಿಗಳು ಕಡೆಗೆ ಕಾಂಗ್ರೆಸ್ಸನ್ನು ಎರಡು ಭಾಗಗಳನ್ನಾಗಿ ಸೀಳಿದವು. ಒಂದು ಸಂಸ್ಥಾ ಕಾಂಗ್ರೆಸ್. ಅದರ ಅಧ್ಯಕ್ಷರು ನಿಜಲಿಂಗಪ್ಪ. ಮತ್ತೊಂದು ಆಡಳಿತ ಕಾಂಗ್ರೆಸ್. ಅಧ್ಯಕ್ಷರು ಜಗಜೀವನ್‌ರಾಮ್. ಆಡಳಿತ ಪಕ್ಷವನ್ನು ಅಸ್ತಿತ್ವದೊಡನೆ ಕ್ರಿಯಾಶೀಲತೆ ಅಪ್ಪಿತು.

ರಾಮ್ ಅಧ್ಯಕ್ಷತೆಯಲ್ಲಿ ೧೯೬೯, ಡಿಸೆಂಬರ್ ೨೬–೨೯ ಬೊಂಬಾಯಿ ನಗರದಲ್ಲಿ ಪ್ರಥಮ ರಾಷ್ಟ್ರೀಯ ಅಧಿವೇಶನ. ಇಂದಿರಾ, ಫಕ್ರುದ್ದೀನ್ ಮುಂತಾದವರು ಅಭಿವ್ಯಕ್ತಿಪಡಿಸಿದ ಮಾತುಗಳು ಅರ್ಥಪೂರ್ಣ. ರಾಮ್‌ರ ಅಧ್ಯಕ್ಷೀಯ ಭಾಷಣ ಅವರ ರಾಜಕೀಯ, ಸಾಮಾಜಿಕ, ಆರ್ಥಿಕ ಚಿಂತನೆಗಳ ಯಜ್ಞಕುಂಡ.

ಈ ಮಧ್ಯೆ ಇಂದಿರಾಗಾಂಧಿ ತಮ್ಮ ಮಂತ್ರಿಮಂಡಲವನ್ನು ಪುನರ್ರಚಿಸಿದರು. ಜಗಜೀವನ್‌ರಾಮ್‌ರವರಿಗೆ ರಕ್ಷಣಾ ಇಲಾಖೆ ವಹಿಸಿಕೊಡುತ್ತಾ

ತಮ್ಮ ಆಪ್ತ ವಲಯದ ಸಲಹೆಗಾರನನ್ನಾಗಿ ಪರಿಗಣಿಸಿದರು. ಅದೊಂದು ಪ್ರತಿಷ್ಠಿತ ಖಾತೆ. ದೇಶದ ರಕ್ಷಣೆಗೆ ರೈಲ್ವೆ ಸಚಿವರಾಗಿದ್ದಾಗಲೇ ಪ್ರತ್ಯಕ್ಷ – ಪರೋಕ್ಷ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದ ರಾಮ್‌ರಿಗೆ ಇನ್ನೂ ರಕ್ಷಣಾ ಇಲಾಖೆಯಲ್ಲಿ ಅವರು ನಿರ್ವಹಿಸಿರುವ ಕಾರ್ಯಗಳು ಅಪಾರ. ದಾಖಲೆಗೆ ಅರ್ಹವಾದವು.

ರಕ್ಷಣಾ ಸಿಬ್ಬಂದಿ ಮತ್ತು ಪರಿಕರಗಳು ಆಧುನೀಕರಣಗೊಂಡವು. ಉತ್ತಮ ಯುದ್ಧ ಸಲಕರಣೆಗಳು ಸೇನಾಪಡೆಗೆ ಸೇರಿದವು. ರಾಮ್‌ರ ಸಾಮಾಜಿಕ ಕ್ರಾಂತಿಯ ಕಹಳೆ ಇಲ್ಲಿಯೂ ಮೊಳಗಿತು. ತಲತಲಾಂತರದ ರೂಢಿಬದ್ಧ ಪದ್ಧತಿಗೆ ಕೊನೆಯ ನಮನ ಹಾಡಿದರು. ಸೈನ್ಯ ಸೇರ್ಪಡೆಗೆ ಜಾತಿಯಿಂದ ಕ್ಷತ್ರಿಯರಾದವರಿಗೆ ವಿಶೇಷ ಸವಲತ್ತಿನ ವ್ಯವಸ್ಥೆ ಹಿಂದಿನಿಂದ ಬೆಳೆದುಕೊಂಡು ಬಂದ ಹೆಮ್ಮರ. ಇತರೆ ಜನವರ್ಗದವರಿಗೆ ಸೈನ್ಯಕ್ಕೆ ಸೇರುವ ಅವಕಾಶ ಅತ್ಯಲ್ಪ. ಇಲ್ಲವೆಂದರೂ ತಪ್ಪಾಗುತ್ತಿರಲಿಲ್ಲ. ಇದನ್ನು ಪರಿಗ್ರಹಿಸಿದ ರಾಮ್, ಇದರ ಹಿಂದಿರುವ ಜಾತಿ ಪದ್ದತಿಯ ಬೇರುಗಳನ್ನು ಕಿತ್ತೊಗೆಯಲು ಹವಣಿಸಿದರು. ಅದಕ್ಕಾಗಿ ದೇಶದ ಸರ್ವ ಜಾತಿ, ಜನಾಂಗ, ವರ್ಗ, ಪಂಗಡ, ಮತ, ಧರ್ಮೀಯರಿಗೂ ಸೈನ್ಯದ ಬಾಗಿಲನ್ನು ಮುಕ್ತವಾಗಿ ತರೆದರು. ವಿವಿಧ ಪರಿಸರದ ಜನರು ಸೇನೆಗ ಸೇರಿದ ತತ್ಫಲ ನಮ್ಮ ಪಡೆಗಳು ಹೊಸ ಹುರುಪು – ಚೈತನ್ಯ ಪಡೆದವು. 'ದಕ್ಷತೆ', 'ಜಾಣ್ಮೆ', 'ತಂತ್ರಗಾರಿಕೆ'ಗೆ ಪ್ರಸಿದ್ಧಿ ಪಡೆಯಿತು. ಇದು ಪ್ರಕಟವಾಗಿದ್ದು ೧೯೭೧, ಭಾರತ ಪಾಕಿಸ್ತಾನ ಯುದ್ಧದಲ್ಲಿ.

ಇಂದಿರಾ ಮತ್ತು ಜಗಜೀವನ್‌ರ ಹೆಸರುಗಳು ಯುದ್ಧದ ಗೆಲುವಿನಿಂದ ಉತ್ತುಂಗಕ್ಕೇರಿದವು. ಇದನ್ನು ನಗದೀಕರಣಗೊಳಿಸಲು ಆಲೋಚಿಸಿದ ಪ್ರಧಾನಮಂತ್ರಿಗಳು ತಕ್ಷಣವೇ ಸಂಸತ್ ಚುನಾವಣೆ ನಡೆಸಿ ದೊಡ್ಡ ಬಹುಮಾನ ಪಡೆದರು. ವಿರೋಧಪಕ್ಷದ ದೊಡ್ಡ ದೊಡ್ಡ ನಾಯಕರ ತಲೆಗಳು ಬಿರುಗಾಳಿಯಲ್ಲಿ ತರಗಲೆಗಳಂತೆ ಉರುಳಿದವು.

ರಾಮ್‌ರ ಪ್ರಸಿದ್ಧಿ ಮತ್ತು ಪ್ರಭಾವ ಇಂದಿರಾರನ್ನು ಅನೇಕ ಬಾರಿ ವಿಚಲಿತಗೊಳಿಸಿದ್ದುಂಟು. ಎರಡು ಮೂರು ಬಾರಿ ಇಂದಿರಾ ಕೂಡ ಮಂತ್ರಿ ಮಂಡಲದಿಂದ ಕೈಬಿಡಲು ಯೋಚಿಸಿದರಲ್ಲದೆ ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಅವರ ವಿರುದ್ಧ ಪರ್ಯಾಯ ದಲಿತ ನಾಯಕನನ್ನು ಬೆಳೆಸಲು ಯತ್ನ ನಡೆಸಿದ್ದುಂಟು. ಆದರೆ ರಾಮ್ ಸ್ವಂತತ್ರ ಭಾರತದ ದಲಿತರ ಅನಭಿಷಿಕ್ತ ಮುಖಂಡರೆಂದೇ ಪರಿಗಣಿತರಾಗಿದ್ದರು. ಜೊತೆಗೆ ಅವರ ಬೆಂಬಲಕ್ಕೆ ಸದಾ ಸುಮಾರು ೮೦ ಸಂಸದೀಯರು ಇರುತ್ತಿದ್ದರು. ಅದರಿಂದ ಯಾವುದೇ ಮುಂದಾಳು ಯಾವುದೇ ಸಂದರ್ಭದಲ್ಲಿ ಅವರನ್ನು ಅಲುಗಾಡಿಸಲಾಗುತ್ತಿರಲಿಲ್ಲ.

ನಮ್ಮ ನಾಡಿನ ಜನತಾಂತ್ರಿಕ ವ್ಯವಸ್ಥೆಯ ಕರಾಳ ಅಧ್ಯಯನ 'ತುರ್ತು ಪರಿಸ್ಥಿತಿ'. ಶ್ರೀಮತಿ ಇಂದಿರಾಗಾಂಧಿಯವರು ಯಾವ ಒತ್ತಡಕ್ಕೆ ಸಿಲುಕಿ ದೇಶದ ಮೇಲೆ ಈ ಹೊರೆ ಏರಿದರೆಂಬುದರ ವಿಶ್ಲೇಷಣೆ ಅಪ್ರಸ್ತುತ. ಆದರೆ ಜಗಜೀವನ್‌ರಾಮ್‌ರು ಅಂದು ಮಂತ್ರಿಮಂಡಲದ ಪ್ರಮುಖರು ಹಾಗೂ ಅಘೋಷಿತ ಎರಡನೇ ನಾಯಕರು. ಅದರಿಂದ ಆ ಸಂದರ್ಭದ ಅವರ ನಡೆವಳಿಕೆ ಮತ್ತು ಮನೋಭಾವ ವಿವೇಚನೆಗೆ ಯೋಗ್ಯ. ಅದರ ಮೇಲೆ 'ವ್ಯಕ್ತಿತ್ವ'ದ ನಿಷ್ಕರ್ಷೆಯೂ ಸುಲಭ.

೧೨, ಜೂನ್ ೧೯೭೫, ಅಲಹಾಬಾದ್ ಹೈಕೋರ್ಟ್ ತೀರ್ಪು ಇಂದಿರಾರ ಕುರ್ಚಿಯನ್ನು ಅದುರಿಸಿತು. ಅದರೊಡನೆ, ಅದು ಜನತಂತ್ರ ಪಾತಳಿಯ ಸುವ್ಯವಸ್ಥೆಯ ಸತ್ವ ಪರೀಕ್ಷೆ ಕೂಡ. ರಾಜಕೀಯ ಅಸ್ಥಿರತೆ, ಗೊಂದಲ ಮತ್ತು ಕಾರ್ಮೋಡ ದೇಶದೆಲ್ಲೆಡೆ ಆವೃತವಾಯಿತು. ಒಂದು ಹಂತದಲ್ಲಿ ಇಂದಿರಾರು ರಾಜೀನಾಮೆ ನೀಡಿದರು. ತೆರೆದ ಸ್ಥಾನವನ್ನು ಜಗಜೀವನ್ ಕ್ರಮಿಸುವರು ಎಂಬ ರೋಚಕ ಸುದ್ದಿಗಳು ನಾಡಿನ ಮೂಲೆ ಮೂಲೆಯಲ್ಲಿ ಹರಿದಾಡಿದವು.

ಜಗಜೀವನ್‌ಗೆ ಈ ಪ್ರತಿಕೂಲ ತೀರ್ಪು ಬಳಸಿಕೊಂಡು ತಮ್ಮ ೮೦ ಸಂಸದೀಯರ ಬೆಂಬಲ ಮತ್ತಿತರ ಸಹಕಾರದಿಂದ ಇಂದಿರಾರನ್ನು ಪದವಿಯಿಂದ ಕೆಳಗಿಳಿಸಬಹುದಾಗಿತ್ತು. ಆದರೆ ರಾಮ್ ಮೂಲತಃ ಇಂಥ ಅವಕಾಶವಾದಿ ರಾಜಕಾರಣ ವಿರೋಧಿಗಳು. ಚತುರತೆಯ ತಂತ್ರಗಾರಿಕೆ ರಾಜಕಾರಣಕ್ಕೂ ಹೇಸುತ್ತಿದ್ದರು. ಸಂಕಷ್ಟದಲ್ಲಿದ್ದಾಗ ನಾಯಕರ ಬೆನ್ನಿಗೆ ಚೂರಿ ಚುಚ್ಚುವ ಮನೋಭಾವಕ್ಕೆ ಅಸಹ್ಯಪಡುತ್ತಿದ್ದರು.

ಪಕ್ಷ ಮತ್ತು ಸರ್ಕಾರ ಎದುರಿಸಿದ ಈ ಬಿಕ್ಕಟ್ಟಿನ ಸಡಿಲಿಕೆಗೆ ರಾಮ್ ಮತ್ತು ಚವ್ಹಾಣ್ ಕಾರ್ಯತತ್ಪರರಾದರು. ಒಂದು ಉತ್ತಮ ಸೂತ್ರ ಹೆಣೆದು ಸಂಸದೀಯ ಮಂಡಳಿ ಸಭೆ ಇಂದಿರಾರ ಪರ ನಿಲ್ಲುವಂತೆ ನೋಡಿಕೊಂಡರು. ಇಂದಿರಾ ಅವರು ಅಧಿಕಾರ ಕಳೆದುಕೊಳ್ಳುವ ಪ್ರಮೇಯ ಬರದಂತೆ ತಡೆದರು. ಇಷ್ಟಾದರೂ ಇಂದಿರಾ ಅಂತರ್ಯ ಜೂನ್ ೨೬, ೧೯೭೫ ಭಾರತದ ಜನತಂತ್ರದ ಕರಾಳ ದಿನವನ್ನಾಗಿ ಮಾರ್ಪಡಿಸಿತು.

ನಡುರಾತ್ರಿ ಘೋಷಿಸಿದ 'ತುರ್ತು ಪರಿಸ್ಥಿತಿ'ಯ ಪೂರ್ವಭಾವಿ ಮಾಹಿತಿಯ ಸುಳಿವು ಜಗಜೀವನ್‌ರಾಮ್‌ರಿಗೆ ತಿಳಿದಿರಲಿಲ್ಲ. ತಿಳಿದ ಮೇಲಾದರೂ ನೇರವಾಗಿ ವಿರೋಧಿಸಲಿಲ್ಲ. ಪ್ರತಿಭಟಿಸಿದ್ದರೂ ಅಂದರಿಂದಾಗುತ್ತಿದ್ದ ಪ್ರಯೋಜನ ಕೇವಲ ಸೆರೆಮನೆ ವಾಸ. ಇದೇನೂ ರಾಮ್‌ರಿಗೆ ಹೊಸದಲ್ಲ. ಹೆದರುವ – ಹಿಂಜರಿಯುವ ಪ್ರಸಂಗವೂ ಇರಲಿಲ್ಲ. ಆದರೆ ಅವರ ಈ ವರ್ತನೆ ರಾಜಕೀಯ ಮುಂದಾಲೋಚನೆಯ ತಜ್ಞತೆಗೆ ಪ್ರತೀಕ. ರಾಮ್ ಮಂತ್ರಿಮಂಡಲದಲ್ಲಿ ಮುಂದುವರೆದದ್ದು ವಾಸ್ತವಿಕವಾಗಿ ಇಂದಿರಾ ಮತ್ತು ಅವರ ಬೆಂಬಲಿಗ ಕೂಟದ ಚಟುವಟಿಕೆಗಳಿಗೆ ಹಾಕಿದ ಪರೋಕ್ಷ ಕಡಿವಾಣ. ಅಲ್ಲದೆ ತುರ್ತು ಪರಿಸ್ಥಿತಿ ರದ್ದುಗೊಳಿಸಿ ಚುನಾವಣೆ ಘೋಷಿಸುವ ಮುಖೇನ ಜನತಂತ್ರದ ಮರುಹುಟ್ಟಿಗೆ ಪ್ರೇರಕ ಎಂಬುದು ಅನೇಕ ರಾಜಕೀಯ ತಜ್ಞರ ಅಭಿಪ್ರಾಯ.

ಜೂನ್ ೨೬, ನಸುಕಿನಲ್ಲಿ ಕರೆದ ಮಂತ್ರಿಮಂಡಲ ಸಭೆ 'ತುರ್ತು ಪರಿಸ್ಥಿತಿ' ಹೇರಿಕೆ ಮತ್ತು ಜಯಪ್ರಕಾಶ್, ಚಂದ್ರಶೇಖರ್ ಮತ್ತು ಇತರ ವಿರೋಧಿ ನಾಯಕರ ಬಂಧನದ ಸುದ್ದಿ ತಿಳಿಸುತ್ತಾ ಕೆಲವೇ ನಿಮಿಷಗಳಲ್ಲಿ ಬರ್ಖಾಸ್ತು ಆಯಿತು. ಪ್ರಧಾನಿಗಳ ನಿವಾಸದಲ್ಲಿ ನಡೆದ ಸಭೆಗೆ ಆಗಮಿಸಿದ ಜಗಜೀವನ್ ಎಲ್ಲವನ್ನೂ ಸಮಚಿತ್ತ ಭಾವದಲ್ಲಿ ಆಲಿಸಿ, ಅವಾಕ್ಕಾದರೂ ದುಃಖವೆನಿಸಿದರೂ ಅದ್ಯಾವುದನ್ನೂ ಅಭಿವ್ಯಕ್ತಿಪಡಿಸದೇ ನೋವಿನ ಎದೆಯಲ್ಲಿ ಮೌನವ್ರತರಾಗಿ ತಮ್ಮ ನಿವಾಸ ತಲುಪಿದಾಗ ಆಶ್ಚರ್ಯ ಕಾದಿತ್ತು. ನಿವಾಸದ ಸುತ್ತಮುತ್ತ ಬೇಹುಗಾರರ ಗಸ್ತು. ಪ್ರಾಯೋಗಿಕ ಗೃಹಬಂಧನ ಅದಾಗಿದ್ದರೂ ತಾತ್ವಿಕ ಗೃಹಬಂಧನದ ಸೆಳೆತ ಅದರಲ್ಲಿ ಇರಲಿಲ್ಲ. ಸ್ವಾತಂತ್ರ್ಯ ಮತ್ತು ದಲಿತ ವಿಮೋಚನೆಯ ಅವಿನಾಭಾವ ಸಂಬಂಧ ಕಂಡುಕೊಂಡಿದ್ದ ರಾಮ್‌ರ ಹೊಟ್ಟೆಯಲ್ಲಿ ಈ ಘಟನಾವಳಿಗಳು ಕತ್ತರಿ ಆಡಿಸಿದಂತಾದವು. ಅವರ ಮನದಾಳದಲ್ಲಿ ಆವರಿಸಿದ ಅತೀವ ಸಂಕಟ ಕಡೆಯಲ್ಲಿ ದಿನಚರಿಯ ಬರಹದಲ್ಲಿ ಹೊರಬಂತು. ಅಂದಿನ ಅವರ ದಿನಚರಿ ಹೀಗೆ ಮಾತನಾಡಿದೆ.

"ಇದೊಂದು ಕರಾಳ ದಿನ"

ಸಾರ ಸಂಗ್ರಹದ ಒಂದೇ ಒಂದು ಪದ ಅಥವಾ ನುಡಿ ಒಂದು ಸೂಕ್ಷ್ಮ ಮನಸ್ಸಿನ ಸಂಪೂರ್ಣ ದರ್ಶನ ಅಲ್ಲವೆ?

ತುರ್ತು ಪರಿಸ್ಥಿತಿ ರದ್ದುಗೊಳಿಸಿ ಚುನಾವಣೆ ಘೋಷಿಸಿದಾಕ್ಷಣ ಜಗಜೀವನ್‌ರು ಪಂಜರದ ಪಕ್ಷಿಯಂತೆ ಪಕ್ಷದಿಂದ ಹೊರಬಂದರು. ಅವರ ಜಾಡನ್ನು ಬಹುಗುಣ, ನಂದಿನಿ ಸತ್ಪತಿ ಮುಂತಾದ ಇತರೆ ಕಾಂಗ್ರೆಸ್ ನಾಯಕರು ಅನುಕರಿಸಿದರು. ಇವರೆಲ್ಲರನ್ನೂ ಒಟ್ಟುಗೂಡಿಸಿದ ರಾಮ್ ಜನತಾಂತ್ರಿಕ ಕಾಂಗ್ರೆಸ್ ಪಕ್ಷ ರಚಿಸಿದರು. ಮತ್ತೊಂದೆಡೆ ಜಯಪ್ರಕಾಶರ ಉಸ್ತುವಾರಿಯಲ್ಲಿ ಸಂಸ್ಥಾ ಕಾಂಗ್ರೆಸ್, ಜನಸಂಘ,

ಸ್ವತಂತ್ರ ಪಕ್ಷ, ಸಮಾಜವಾದಿ ಪಕ್ಷಗಳು ಮಿಳಿತಗೊಂಡು 'ಜನತಾಪಕ್ಷ' ರಚನೆಯಾಯಿತು. ಒಗ್ಗೂಡಿದ ಈ ಪಕ್ಷಗಳ ತಕ್ಷಣದ ದಾರಿ ಮತ್ತು ಧ್ಯೇಯ ಒಂದೇ. ಅದು ಜನತಂತ್ರ ಮತ್ತು ಅದರ ಉಳಿಸುವಿಕೆ. ಆದರೆ ಅವುಗಳ ಸಾಂಸ್ಕೃತಿಕ ನೆಲೆಗಳು ಭಿನ್ನ. ಸಾಮಾಜಿಕ, ಆರ್ಥಿಕ ಸಿದ್ಧಾಂತಗಳು ಉತ್ತರ – ದಕ್ಷಿಣ.

ಆಕಸ್ಮಿಕವಾಗಿ ತನ್ನೊಡನೆ ಜಗಜೀವನ್‌ರಾಮ್ ಇದ್ದಿದ್ದರೆ ಇಂದಿರಾ ಇದ್ಯಾವ ರಾಜಕೀಯ ಪ್ರಕ್ರಿಯೆಗೂ ಬೆದರುತ್ತಿರಲಿಲ್ಲ (ಆಕಸ್ಮಿಕವಾಗಿ ತನ್ನೊಡನೆ ಜಗಜೀವನ್ ಇದ್ದಿದ್ದರೆ). ಉತ್ತರಪ್ರದೇಶ, ಬಿಹಾರ ಮತ್ತಿತರ ಭಾಗಗಳಲ್ಲಿ ರಾಮ್ ದಲಿತರ, ಹಿಂದುಳಿದವರ ಮತ್ತು ಮುಸ್ಲಿಮರ ಆರಾಧ್ಯ ದೈವ. ದಿಟ್ಟೆದೆಯ ದೃಢಕಾಯ ಮನಸ್ಸಿನ ಧೀರ ಮಹಿಳೆಯಾದ ಇಂದಿರಾರ ಹೃದಯವು ಜಗಜೀವನ್‌ರ ತೊರೆಯುವಿಕೆಯಿಂದ ಅದಿರಿತು.

ಚುನಾವಣೆಯಲ್ಲಿ ಜಗಜೀವನ್ ವಿರೋಧ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ದೇಶದೆಲ್ಲೆಡೆ ಬಿರುಗಾಳಿಯೋಪಾದಿಯಲ್ಲಿ ಸಂಚರಿಸಿದರು. ದಣಿವು – ಆಯಾಸವೆಂಬ ಪದಗಳು ಅವರ ಪದಕೋಶದಿಂದ ಮರೆಯಾದವು. ಚುನಾವಣೆಗೆ ವಿದ್ಯುತ್ ತರಂಗಗಳು ಹರಿದವು. ಇಂದಿರಾ ಮತ್ತು ಕಾಂಗ್ರೆಸ್ ವಿರುದ್ಧ ಹಾಗೂ ಜನತಾ – ಜನತಾಂತ್ರಿಕ ಕಾಂಗ್ರೆಸ್ ಪಕ್ಷಗಳ ಪರ ದೊಡ್ಡ ಅಲೆಯೇ ಸೃಷ್ಟಿಯಾಯಿತು. ಪ್ರಚಾರ ಸಮಯದಲ್ಲಿ ಕಾಂಗ್ರೆಸ್ ನಾಯಕರು ಜಗಜೀವನ್ ವಿರುದ್ಧ ವಿದೇಶೀ ಹಣ, ಜಾತಿ ರಾಜಕಾರಣದ ಆರೋಪ ಹೊರಸಿದರಲ್ಲದೆ ರಾಮ್‌ಗೆ ಬಿಡಿಗಾಸಿನ ಕಿಮ್ಮತ್ತು ಇಲ್ಲವೆಂದು ಕುಹಕವಾಡಿದರು. ಇಂತಹ ಕಟಕಿ ಟೀಕೆಗಳಿಗೆ ಕುಗ್ಗದ ರಾಮ್, ಫಲಿತಾಂಶದ ಮುಖೇನ ಸೂಕ್ತ ಉತ್ತರ ನೀಡಿ ಈ ಎಲ್ಲ ಅಪಪ್ರಚಾರದ ಕಂಠಗಳಿಗೆ ತೆರೆ ಎಳೆದರು.

ದೇಶದ ಆಡಳಿತದ ಚುಕ್ಕಾಣಿ ಪ್ರಪ್ರಥಮವಾಗಿ ಕಾಂಗ್ರೆಸ್‌ನ ಕೈ ತಪ್ಪಿತ್ತು. ಮುಂದಿನ ಪ್ರಧಾನಮಂತ್ರಿ ಆಯ್ಕೆ ಇದ್ದಕ್ಕಿದ್ದಂತೆ ಒಂದು

ಬೃಹತ್ ಆಕಾರದ ಪ್ರಶ್ನೆಯಾಗಿ ಮೈದಾಳಿತು. ಸೆರೆಯಲ್ಲಿದ್ದ ಮುರಾರ್ಜಿ ಮತ್ತು ಆಸ್ಪತ್ರೆಯಲ್ಲಿದ್ದ ಚರಣ್‌ಸಿಂಗ್‌ರೂ ಪ್ರಧಾನಿ ಪಟ್ಟದ ಕಡೆಗೆ ಕಣ್ಣುಹಾಯಿಸಿದರು. ಈ ಮಧ್ಯೆ ಜಗಜೀವನ್‌ರ ಸಿ.ಎಫ್.ಡಿ. ಮತ್ತು ಜನತಾ ಪಕ್ಷಗಳ ಮಿಲನದ ಕಾರ್ಯವೂ ನಡೆದುಹೋಯಿತು.

ಜನತಾಪಕ್ಷದ ವಿಜಯದ ರೂವಾರಿ ಜಗಜೀವನ್ ಈ ದೇಶದ ಪ್ರಧಾನಿಗಳಾಗಬೇಕಾದ್ದದ್ದು ನ್ಯಾಯಸಮ್ಮತ. ಮುರಾರ್ಜಿ, ಚರಣ್ ಮತ್ತು ಜಗಜೀವನ್ ಈ ಮೂವರಲ್ಲಿ ಅಧಿಕ ಸಂಖ್ಯೆಯ ಸಂಸದೀಯರ ಬೆಂಬಲ ರಾಮ್‌ರಿಗೇ ಇತ್ತು. ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಅಡಿಯಲ್ಲಿ ಸಂಸದೀಯ ಪಕ್ಷದ ನಾಯಕನ ಆಯ್ಕೆಗೆ ಚುನಾವಣೆ ನಡೆದಿದ್ದರೆ ಆವತ್ತಿನ ಎಲ್ಲ ಪ್ರಚಾರ ಮಾಧ್ಯಮಗಳ ವಿಶ್ಲೇಷಣೆಯಂತೆ ಅಧಿಕ ಬಹುಮತದೊಂದಿಗೆ ರಾಮ್ ಗೆಲ್ಲುತ್ತಿದ್ದರು. ಆದರೆ ಕೊನೆ ಕೊನೆಯಲ್ಲಿ ರಾಜಕೀಯದ ಹಾವು–ಏಣಿಯಾಟ ಸರ್ವಸಮ್ಮತ. ಸೂತ್ರದನ್ವಯ ಪ್ರಧಾನಿ ಪಟ್ಟವನ್ನು ಮುರಾರ್ಜಿಗೆ ದಕ್ಕಿಸಿತು. ಇದರ ಹಿಂದಿನ ಬುದ್ಧಿ – ಮನಸ್ಸು ಜಯಪ್ರಕಾಶ್ ನಾರಾಯಣ್ ಮತ್ತು ಕೃಪಲಾನಿ ಎಂಬ ಸಂಗತಿ ದುಃಖ ತರುತ್ತದೆ.

ಈ ಮೂವರಲ್ಲಿ ಪ್ರಧಾನಿಯಾಗುವ ಅಧಿಕ ಅರ್ಹತೆ ಇದ್ದುದು ರಾಮ್‌ರಿಗೆ ಎಂಬ ವಾದವನ್ನು ಮಂಡಿಸಿರುವ ಲಂಕೇಶ್ ನುಡಿಗಳನ್ನು ಇಲ್ಲಿ ನೆನೆಯುವುದು ವಿಹಿತ. "೧೯೭೭ರ ಜನತಾ ಪಕ್ಷದ ಗೆಲುವು ಮುಂದಕ್ಕೆ ತಂದು ತೋರಿದ ಮೂವರಲ್ಲಿ ಜಗಜೀವನ್ ರಾಷ್ಟ್ರವನ್ನು ನಡೆಸಲು ಅರ್ಹತೆ ಪಡೆದಿದ್ದ ಒಬ್ಬನೇ ಒಬ್ಬ" ಅಲ್ಲದೆ "ಜನತಾಪಕ್ಷ, ಪಕ್ಷದ ವೈವಿಧ್ಯಮಯ ವ್ಯಕ್ತಿಗಳನ್ನು ಕಿತ್ತಾಡಬಲ್ಲ ವಿಚಿತ್ರ ಶಕ್ತಿಗಳನ್ನು ತಮ್ಮ ಹಾಸ್ಯ, ಬುದ್ಧಿ, ದಕ್ಷತೆಯಿಂದ ಹದ್ದುಬಸ್ತಿನಲ್ಲಿಡಬಲ್ಲ ಯೋಗ್ಯತೆ ಪಡೆದಿದ್ದ ಮನುಷ್ಯ ಈ ರಾಮ್."

ಮಾನವನ ಆಂತರಿಕ ಸ್ವಭಾವ, ಗುಣ ಲಕ್ಷಣಗಳಿಂದ ಅಳೆದರೂ ವಸ್ತು ಸ್ಥಿತಿಯಲ್ಲಿ ರಾಮ್‌ರೇ ಪ್ರಧಾನಿಗಳಾಗಬೇಕಾಗಿತ್ತು. ಇದು ನೂರಕ್ಕೆ

ನೂರು ಸತ್ಯದ ಸಂಗತಿ. ಆದರೆ ಈ ನಾಡಿನ ಹೊಲಸು ಸಾಮಾಜಿಕ ವ್ಯವಸ್ಥೆ ಅವರ ಕಾಲನ್ನು ಕೇವಲ ಅರ್ಥರಹಿತ ನೆವದಲ್ಲಿ ಹಿಡಿದು ಎಳೆಯಿತು ಎಂಬ ಇಂಗಿತವನ್ನು ಲಂಕೇಶರೇ ಹೀಗೆ ದಾಖಲಿಸಿರುವರು. "ಒಮ್ಮೆ ಇನ್ನೊಂದು ಕಪ್ಪು ವಜ್ರ ಕಾಮ್‌ರಾಜ್ ನಾಡಾರ್‌ರನ್ನು ಆತನ ಬಣ್ಣ ಕಂಡು ತಿರಸ್ಕರಿಸಿದ್ದ ಭಾರತ ಈಗ ಜಗಜೀವನ್ ರಾಮ್‌ರನ್ನು ಆತನ ಬಣ್ಣದಿಂದ ಮಾತ್ರವಲ್ಲ, ಆತನ ದಕ್ಷತೆ, ಜಾಣತನಕ್ಕೆ ದಿಗ್ಭ್ರಮೆಗೊಳ್ಳುತ್ತಲೇ ಸಮಯ ಸಾಧಕತನದ ನೆವದಲ್ಲಿ ತಿರಸ್ಕರಿಸಿತು.'' ಭಾರತದ ಉನ್ನತ ಪದವಿ ಪಡೆಯಲು ಉನ್ನತ ಜಾತಿ ಒಂದು ಪ್ರಮುಖ ಅರ್ಹತೆಯ ಅಂಶ ಎಂಬ ಲೋಹಿಯಾರ ಮಾತನ್ನು ಇಲ್ಲಿ ಸ್ಮರಿಸಬಹುದು.

ಮುರಾರ್ಜಿಯವರ ನಾಯಕತ್ವದ ಜನತಾಪಕ್ಷದ ಮಂತ್ರಿಮಂಡಳದಲ್ಲಿ ಸೇರುವ ಕಿಂಚಿತ್ತೂ ಅಪೇಕ್ಷೆ ತೋರದ ಜಗಜೀವನ್, ಜೆ.ಪಿ. ಕೃಪಲಾನಿ ಮತ್ತಿತರ ರಾಷ್ಟ್ರ ನಾಯಕರ ಒತ್ತಡಕ್ಕೆ ಮಣಿದು ಉಪಪ್ರಧಾನಿಗಳಾಗುತ್ತಾರೆ. ರಕ್ಷಣಾ ಇಲಾಖೆ ಮತ್ತೊಮ್ಮೆ ಅವರ ಅಪಾರ ಅನುಭವದ ಮಾರ್ಗದರ್ಶನದಲ್ಲಿ ನವೀನ ಆಯಾಮ ಪಡೆಯುತ್ತದೆ.

ಈ ಸಮಯದ ಪುರೋಹಿತಶಾಹಿ ವಾರಸುದಾರರ ಹುಚ್ಚು ಕುಣಿತ ಅಕ್ಷಮ್ಯವಾದುದು. ದಲಿತರ ಸ್ವಾಭಿಮಾನಕ್ಕೆ ಇಟ್ಟಕೊಳ್ಳಿ. ದೇಶದ ಗೌರವ – ಘನತೆ ಹರಜಾದ ಪ್ರಸಂಗ. ಜಗಜೀವನ್‌ರ ವ್ಯಕ್ತಿತ್ವಕ್ಕೆ ಬಳಿದ ಮಸಿ ಅದಲ್ಲ. ವಾಸ್ತವಿಕವಾಗಿ ದಲಿತರಿಗೆ ಮಸಿ ಬಳಿಯುತ್ತ ಪುರೋಹಿತರೇ ತಮ್ಮ ಅಂತರಂಗದ ವಿಕೃತ ಮುಖವನ್ನು ನಗ್ನಗೊಳಿಸಿಕೊಂಡಿದ್ದರು. ರಾಷ್ಟ್ರಭಕ್ತಿಯ ಹಿಂದಿನ ಮರ್ಮವಾದ ದಲಿತ ವಿರೋಧಿತನವನ್ನು ಗೋಚರಿಸಿದ್ದರು. ನಮ್ಮೆಲ್ಲರ ನೆನಪಿನಂಗಳದಲ್ಲಿ ಇನ್ನೂ ಹಚ್ಚನೆ ಹಸಿರಾಗಿರುವ ಈ ಘಟನೆ :

"ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಪ್ರವರ್ತಕರಲ್ಲಿ ಒಬ್ಬರು ಶ್ರೀ ಸಂಪೂರ್ಣಾನಂದರು. ಅವರ

ಪುತ್ಥಳಿಯನ್ನು ಸ್ಥಾಪಿಸಲು ವಿಶ್ವವಿದ್ಯಾಲಯದ ನಿರ್ಣಯ. ಅದರ ಅನಾವರಣಕ್ಕೆ ಹಿಂದೊಮ್ಮೆ ಈ ವಿಶ್ವ ವಿದ್ಯಾಲಯದ ವಿದ್ಯಾರ್ಥಿಯೂ ಪ್ರಸುತ್ತ ಕಾಲದ ಪ್ರಮುಖ ಮುಖಂಡರೆನಿಸಿದ ಜಗಜೀವನ್‌ರಾಮ್‌ರಿಗೆ ಆಹ್ವಾನ. ಪೂರ್ವ ನಿಶ್ಚಿತ ಕಾರ್ಯಕ್ರಮದಂತೆ ರಾಮ್ ಪುತ್ಥಳಿಯನ್ನು ಅನಾವರಣಗೊಳಿಸಿ ಹಿಂದಿರುಗಿದರು. ಆದರೆ ಇದನ್ನೇ ಬಕಪಕ್ಷಿಗಳಂತೆ ನಿರೀಕ್ಷಿಸುತ್ತಿದ್ದ ಪುರೋಹಿತಶಾಹಿ ಪಕ್ಷಾರರು 'ಗಂಗಾ' ನದಿಯಿಂದ ನೀರು ತಂದು ಆ ಪುತ್ಥಳಿಯನ್ನು ಶುದ್ಧೀಕರಿಸಿ ಪುನರ್ ಅನಾವರಣ ಮಾಡಿಬಿಟ್ಟರು.''

ಇಂಥ ಅವೈಚಾರಿಕ, ಅವೈಜ್ಞಾನಿಕ ಘಟನೆಗಳು ಜಗತ್ತಿನ ಯಾವ ಮೂಲೆಯಲ್ಲೂ ನಡೆಯಲಾರವು. ಬ್ರಾಹ್ಮಣನೊಬ್ಬನ ಮಣ್ಣಿನ ಮೂರ್ತಿಯನ್ನು ಅಸ್ಪೃಶ್ಯನೊಬ್ಬ ಸ್ಪರ್ಶಿಸುವುದಕ್ಕೆ ಅನರ್ಹ ಎಂಬ ತರ್ಕ ಅತ್ಯಂತ ಅಮಾನವೀಯವಾದುದು. ಇವರನ್ನು ಸಮರ್ಥಿಸುವ ಸ್ಮೃತಿ ಶಾಸ್ತ್ರಗಳನ್ನು ಬೆಂಕಿಗಿಟ್ಟು ಸುಡಬೇಕು. ಅವರ ತಲೆಯಲ್ಲಿ ಹೊಕ್ಕಿರುವ ಈ ಜಾತೀಯತೆಯ ಹುಳುವನ್ನು ಹಿಡಿದು ಕೊಲ್ಲದಿದ್ದರೆ ಈ ದೇಶಕ್ಕೆ ಭವಿಷ್ಯವೇ ಇಲ್ಲ.

ಈ ಘಟನೆಯ ಹಿನ್ನೆಲೆಯಲ್ಲಿ ಲೋಹಿಯಾ ಅವರ 'ಹಿಂದೂ V/S ಹಿಂದೂ' ಬರಹದಲ್ಲಿ ವ್ಯಕ್ತವಾಗಿರುವ ಹಿಂದೂ ಮತಾಂಧತೆ ಮತ್ತು ಪುರೋಹಿತಶಾಹಿಯ ೫ ಸಾವಿರ ವರ್ಷಗಳ ಅಂತರಂಗ, ಬಹಿರಂಗಗಳ ಚಲನವಲನಗಳನ್ನು ಗಮನಿಸುವುದು ಉತ್ತಮ. ಮೇಲ್ನೋಟದಲ್ಲಿ ತಣ್ಣಗಿರುವಂತೆ ಕಾಣುವ ಈ ವೈದಿಕ ಸಂಸ್ಕೃತಿ ತನ್ನ ಅಸ್ತಿತ್ವಕ್ಕೆ ಹೊಡೆತ ಬೀಳಲು ಆರಂಭಿಸಿದಾಗ ತನ್ನೆಲ್ಲ ಶಕ್ತಿಯನ್ನು ಸಂಚಯಿಸಿಕೊಂಡು ಒಮ್ಮೆಗೇ ಸ್ಫೋಟಿಸಿಬಿಡುತ್ತದೆ.

ಹಿಂದೂ ಮತಾಂಧತೆ ನಾಲ್ಕು ಪ್ರಾಣವಾಯುಗಳ ಮೇಲೆ ನೆಲೆಸಿದೆಯೆಂದು ಲೋಹಿಯಾ ಗುರುತಿಸುವರು. ಅದರಲ್ಲಿ ಎರಡು

ನಕಾರಾತ್ಮಕವಾದವು. ಮತ್ತೆರಡು ಸಕಾರಾತ್ಮಕವಾದವು. ಜಾತಿ ಪದ್ಧತಿ – ಬಂಡವಾಳಶಾಹಿ ಪರ ವಾಲುವ ಈ ಸಿದ್ಧಾಂತ 'ಸ್ತ್ರೀ ಸಮಾನತೆ' ಮತ್ತು 'ಸಹಿಷ್ಣುತೆ' ಭಾವನೆಗೆ ವಿರುದ್ಧವಾಗಿರುತ್ತದೆ. ದೇಶದೊಳಗಡೆ ಇವುಗಳ ವಿರುದ್ಧ ಕ್ರೋಢೀಕೃತ ಸಂಘರ್ಷ – ಸಿದ್ಧಾಂತ ಬೆಳೆಯತೊಡಗಿದಾಕ್ಷಣವೇ ಅಂತರ್ಯದಲ್ಲಿ ಮಲಗಿದ್ದ ಈ ತತ್ವ ಬಹಿರಂಗಕ್ಕೆ ಬಂದು ತನ್ನ ರಕ್ಕಸ ಸ್ವರೂಪವನ್ನು ದರ್ಶಿಸುತ್ತದೆ. ಪರಿಶುದ್ಧ ಹಿಂದೂವೆನಿಸಿದ ಗಾಂಧಿಯ ಹತ್ಯೆಯ ಹಿಂದಿರುವ ವಿಚಾರದ ಜಾಡೂ ಇದೇ ಆಗಿದೆಯೆಂದು ಲೋಹಿಯಾರ ಅಭಿಪ್ರಾಯ. ಮುಂದುವರೆದು ಜಗಜೀವನರ ಮಾನಸಿಕ ಕೊಲೆ ಮತ್ತು ಡಿಸೆಂಬರ್ ೬ರ ೧೯೯೨ರ ದುರ್ಘಟನೆಗೂ ಹಿನ್ನಲೆ ಈ ಪುರೋಹಿತಶಾಹಿಯ ಬೀಜಾಸುರರ ಕುಣಿತ ಢಾಳಾಗಿ ಕಂಡುಬರುತ್ತದೆ.

ಕಾಲಕ್ರಮೇಣ ಜನತಾ ಪಕ್ಷದಲ್ಲಿ ಜನಸಂಘಾಗಳ 'ದ್ವಿ ಸದಸ್ಯ' ಸಮಸ್ಯೆ ಉದ್ಭವಿಸಿತು. ರಾಜಕೀಯ ರಂಗ ಇದರಿಂದ ಮಲಿನಗೊಂಡಿತು. ಪಕ್ಷದಲ್ಲಿ ವಿಲೀನಗೊಂಡ ಘಟಕ ಪಕ್ಷಗಳು ತಮ್ಮ ಪೂರ್ವಾಶ್ರಮದ ಸಿದ್ಧಾಂತ ಮತ್ತು ಕಾರ್ಯಕ್ರಮಗಳನ್ನು ಮರೆತಿರಲಿಲ್ಲ. ಮಿಳಿತ ಕೇವಲ ಮೇಲ್ಪದರಿನದು. ಅದರಲ್ಲೂ ಜನಸಂಘ ಸಮಸ್ತ ಜನತಾಪಕ್ಷ ತನ್ನ ತಾಳಕ್ಕೆ ತಕ್ಕಂತೆ ಕುಣಿಯುವ ವಾತಾವರಣ ನಿರ್ಮಿಸಲು ಹೊಸ ಹೊಸ ತಂತ್ರಗಳನ್ನು ಹೊಸೆಯಲು ಹೆಣಗುತ್ತಿತ್ತು. ಚರಣ್‌ಸಿಂಗ್ ಮತ್ತು ರಾಜನಾರಾಯಣರ ಚಟುವಟಿಕೆಗಳು ಪಕ್ಷದ ಒಳಿತಿಗೆ ಪೂರಕವಾಗಿರಲಿಲ್ಲ. ಬಾಲ್ಯಾವಸ್ಥೆಯ ಜನತಾ ಪಕ್ಷಕ್ಕೆ ಇದರ ಭಾರ ತಡೆಯಲಾಗಲಿಲ್ಲ. ಪಕ್ಷ ಮತ್ತು ಸರ್ಕಾರ – ಎರಡೂ ಮುರಾರ್ಜಿಯವರ ನಿಯಂತ್ರಣದಿಂದ ಕೈತಪ್ಪಿದವು. ಕಡೆಗೆ ಅವರು ಪ್ರಧಾನಮಂತ್ರಿ ಪದವಿಗೆ ರಾಜೀನಾಮ ನೀಡಿದರು.

ಜಗಜೀವನ್‌ರು ಮಂತ್ರಿಮಂಡಲ ರಚಿಸುವ ಅವಕಾಶ ತಮಗೆ ನೀಡಬೇಕೆಂದು ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರಲ್ಲಿ ಮನವಿ

ಮಾಡಿಕೊಂಡರು. ಜನತಾ ಪಕ್ಷದ ಬಹುಸಂಖ್ಯಾತ ಸಂಸದೀಯರು ರಾಮ್‌ರ ಬೆಂಬಲಕ್ಕಿದ್ದರು. ಆದರೆ ರಾಮ್‌ರ ಕೋರಿಕೆಗೆ ರಾಷ್ಟ್ರಪತಿಗಳಿಂದ ನಕಾರಾತ್ಮಕ ಉತ್ತರ. ಅದಷ್ಟೇ ಅಲ್ಲದೆ ಸಂಜೀವ ರೆಡ್ಡಿಯವರು ಚರಣ್ ಸಿಂಗರಿಗೇ ಸರ್ಕಾರ ರಚಿಸಲು ಆಹ್ವಾನಿಸಿದರು. ರಾಷ್ಟ್ರಪತಿಗಳ ಈ ನಿರ್ಣಯ ಸಂವಿಧಾನ ವಿರೋಧ ಮತ್ತು ಜನತಂತ್ರಕ್ಕೆ ಮಾರಕ ಎಂಬುದಾಗಿ ಅಂದಿನ ಮಾಧ್ಯಮಗಳು ಪ್ರಕಟಿಸಿದವು. ಸಂವಿಧಾನ ಸಂರಕ್ಷಕರಿಂದಲೇ ಸಂವಿಧಾನದ ನೀತಿ–ನಿಯಮಗಳನ್ನು ಗಾಳಿಗೆ ತೂರಿದ್ದು ಒಂದು ಬಗೆಯಲ್ಲಿ 'ಬೇಲಿಯೇ ಎದ್ದು ಹೊಲ ಮೇಯ್ದಂತೆ'' ಗಾದೆಗೆ ಸಮ. ಸಂಜೀವರೆಡ್ಡಿಯವರ ಈ ನಿಲುವಿಗೆ ಬಹುಶಃ ೧೯೬೯ರ ರಾಜಕೀಯ ದ್ವೇಷದ ಪ್ರತೀಕಾರ ಇರಬೇಕು.

ಚರಣ್‌ಸಿಂಗರ ಪ್ರಧಾನಮಂತ್ರಿ ಪದವಿಯ ಬಹು ದಿನಗಳ ಕನಸು ಇಂದಿರಾರ ಸಹಕಾರದಿಂದ ನನಸಾಯಿತಾದರೂ, ಅದರ ಅವಧಿ ಮಾತ್ರ ತೀರಾ ಅಲ್ಪಕಾಲದ್ದು. ಸಂಸತ್ತನ್ನೇ ಎದುರಿಸದ ಪ್ರಧಾನಮಂತ್ರಿ ಎಂಬ ದಾಖಲೆ ಬೇರೆ ತಮ್ಮ ಹೆಸರಿಗೇ ಬರೆಸಿಕೊಳ್ಳುವ ದುರಂತ ತಲುಪಿದರು. ಈ ರಾಜಕೀಯ ಅಸ್ಥಿರತೆ ಕೊನೆಯಲ್ಲಿ ಲೋಕಸಭೆ ವಿಸರ್ಜನೆ ಮತ್ತು ಸಾರ್ವಜನಿಕ ಚುನಾವಣೆಯ ಘೋಷಣೆಯಲ್ಲಿ ಸಮಾಪ್ತಿಯಾಯಿತು.

ಈ ಮಧ್ಯೆ ಜನತಾಪಕ್ಷ ಶಿಥಿಲಗೊಂಡಿತು. ಜನಸಂಘ ಹೊರಬಂದು ಭಾರತೀಯ ಜನತಾ ಪಕ್ಷವಾಗಿ ಪ್ರತ್ಯೇಕ ಪಕ್ಷ ರಚಿಸಿದರೆ ಚರಣ್‌ಸಿಂಗ್ ಮತ್ತವರ ಹಿಂಬಾಲಕರು ಲೋಕದಳ ಸ್ಥಾಪಿಸಿದರು. ಉಳಿದ ಘಟಕಗಳು ಚಂದ್ರಶೇಖರ್‌ರ ನಾಯಕತ್ವದಲ್ಲಿ 'ಜನತಾ ಪಕ್ಷದಲ್ಲೇ' ಮುಂದುವರೆದವು. ಹಿಂದೆ ಎರಡು ಬಾರಿಯೂ ಪ್ರಧಾನಮಂತ್ರಿ ಪದವಿಯಿಂದ ಚಾಣಾಕ್ಷ ರಾಜಕಾರಣದ ಪ್ರತಿಫಲನಕ್ಕೆ ವಂಚಿತರಾದ ಜಗಜೀವನ್‌ರನ್ನೇ ತಮ್ಮ ಪಕ್ಷದ ಮುಂದಿನ ಮುಖಂಡರೆಂಬ ಘೋಷಣೆಯೊಂದಿಗೆ ಚಂದ್ರಶೇಖರರ ಜನತಾ ಪಕ್ಷ ಚುನಾವಣೆಯ ಕಣಕ್ಕೆ ಧುಮುಕಿತು. ಆದರೆ ಜನತಂತ್ರದಲ್ಲಿ

ಮತದಾರರ ನಂಬಿಕೆ, ವಿಶ್ವಾಸಕ್ಕೂ ಒಂದು ಮಿತಿ ಇರುತ್ತದೆ ಅಲ್ಲವೆ? ಜನತಾ ಪಕ್ಷ ಮತ್ತು ಇತರೇ ವಿರೋಧ ಪಕ್ಷಗಳು ನೆಲಕಚ್ಚಿದವು. ಇಂದಿರಾಗಾಂಧಿಯವರ ಪಕ್ಷ ಅಧಿಕ ಬಹುಮತದಿಂದ ಗೆದ್ದಿತು. ಹಿಂದಿನ ಬಾರಿಯಂತೆ ಈ ಬಾರಿಯೂ ಚುನಾವಣೆ ದೊಡ್ಡ ದೊಡ್ಡ ತಲೆಗಳನ್ನೇ ತರಿಯಿತು. ಜಗಜೀವನರೇನೋ ತಮ್ಮ ಸಸರಾಂ ಕ್ಷೇತ್ರದಿಂದ ಎಂದಿನಂತೆ ಅಧಿಕ ಬಹುಮತದಿಂದಲೇ ಗೆದ್ದರು. ಆದರೆ ಸ್ವತಂತ್ರ ಭಾರತದಲ್ಲಾದರೂ ದಲಿತನೊಬ್ಬ ದೇಶದ ಅತ್ಯುನ್ನತ ಗುರಿ ತಲುಪುವ ಕನಸು ಮಾತ್ರ ಕರಗತೊಡಗಿತು. ಚುನಾವಣೆಯ ತರುವಾಯದ ರಾಜಕೀಯ ಬೆಳವಣಿಗೆಗಳು ಜನತಾಪಕ್ಷವನ್ನು ಮತ್ತೆ ಮತ್ತೆ ಸೀಳಿತು. ಇದೆಲ್ಲದರಿಂದ ನಿಸ್ತೇಜರಾದ ಜಗಜೀವನರು ಕಾಂಗ್ರೆಸ್ (ಜೆ) ಎಂಬ ಹೊಸ ಪಕ್ಷ ಕಟ್ಟಿದರು. ಆದರೆ ಕೊನೆ ಕೊನೆಯ ರಾಜಕೀಯ ಸುಳಿಗಳು ಮತ್ತು ಹೆಚ್ಚಾದ ವಯಸ್ಸು ಅವರಲ್ಲಿನ ಚೈತನ್ಯ, ಉತ್ಸಾಹಗಳನ್ನು ಮುಳುಗಿಸಿದವು. ಜೊತೆಗೇ ತಮ್ಮ ಪ್ರೀತಿಯ ಮಗ ಸುರೇಶ ರಾಮರ ಸಾಹಸ ಕಾರ್ಯಗಳು ಹಾಗೂ ಆತನ ಸಾವು ಅವರಲ್ಲಿ ಅಡಗಿದ್ದ ಅಳಿದುಳಿದ ಶಕ್ತಿಯನ್ನು ಕ್ಷಯಿಸಿದ್ದವು.

ಇಂದಿರಾಗಾಂಧಿ ಮತ್ತೊಮ್ಮೆ ಪ್ರಧಾನಮಂತ್ರಿಗಳ ಗಾದಿಯಲ್ಲಿ ಕುಳಿತಾಗ ಪಂಜಾಬ್, ಕಾಶ್ಮೀರ, ಅಸ್ಸಾಂ ಸಮಸ್ಯೆಗಳು ತಾರಕ ತಲುಪಿದ್ದವು. ಪಂಜಾಬಿನ ಬ್ಲೂ ಸ್ಟಾರ್ ಆಪರೇಷನ್ ಸಿಕ್ಖರಲ್ಲಿ ಮೂಡಿಸಿದ ಆಕ್ರೋಶ ಅಂಗರಕ್ಷಕರಿಂದಲೇ ಇಂದಿರಾಗಾಂಧಿ ಹತ್ಯೆಗೊಳ್ಳುವುದರಲ್ಲಿ ಪ್ರಕಟವಾಯಿತು. ಈ ನಂತರದ ಚುನಾವಣೆ ರಾಜೀವರನ್ನು ತಾಯಿಯ ಅನುಕಂಪದ ಅಲೆಯಲ್ಲಿ ತೇಲಿಕೊಂಡು ಬಂದು ದೆಹಲಿಯ ಗದ್ದುಗೆ ದಯಪಾಲಿಸಿತು. ಭಾರತದ ಸರ್ವ ಸಮಸ್ಯೆಗಳನ್ನೂ ಕಂಪ್ಯೂಟರ್ ಕಣ್ಣಿನ ಮೂಲಕ ಬಿಡಿಸಲು ಯತ್ನಿಸುತ್ತಿದ್ದ ರಾಜೀವರಿಗೆ ದುರದೃಷ್ಟ ಪಂಜಾಬಿನ ಸಮಸ್ಯೆಯ ಹಿಂದಿರುವ ಸಾಂಸ್ಕೃತಿಕ ಕಾರಣಗಳನ್ನು ಪರಿಗ್ರಹಿಸುವುದರಲ್ಲಿ ಮುಗ್ಗರಿಸಿದರು.

ಕಡೆಗೆ ಜಗಜೀವನರ ಬಳಿಗೇ ಬಂದು "ಸಮಸ್ಯೆಯನ್ನು ನೀವು ಹೇಗಾದರೂ ಬಗೆಹರಿಸಿ'' ಎಂದು ಕೇಳುವಂತಹ ಒಳ್ಳೆಯತನ ತೋರಿದರು.

ರಾಜೀವ್ – ಜಗಜೀವನ್‌ರ ಮುಖಾಮುಖಿ ಹೃದಯಸ್ಪರ್ಶಿಯದು. ಆಧುನಿಕ ತಂತ್ರ ಪರಿಕರಗಳು ಮತ್ತು ತಾರುಣ್ಯಗಳು ಜಗಜೀವನ್‌ರ ದಕ್ಷತೆ, ಜಾಣ್ಮೆ, ಬುದ್ಧಿವಂತಿಕೆ, ಸರಳತೆ ಮತ್ತು ಅನುಭವದ ಮುಂದೆ ಕುಗ್ಗಬೇಕಾಯಿತು. ತೀವ್ರ ಬಳಲಿದ ರಾಮ್, ರಾಜೀವರಿಂದ ಬಂದ ದೇಶ ಸೇವೆಯ ಆಹ್ವಾನವನ್ನು ಸ್ವೀಕರಿಸುವಂತಹ ತ್ರಾಣ ಪಡೆದಿರಲಿಲ್ಲ. ಆಗಲೇ ಮರಣದ ದಿನಗಳನ್ನು ಅವರು ಎಣಿಸುತ್ತಿದ್ದರು.

ಜಗಜೀವನರ ಅಂತಿಮ ಸಂವತ್ಸರಗಳ ರಾಜಕೀಯ ಬದುಕು ಮುಳ್ಳಿನ ಹಾಸಿಗೆಯದು. ಪುರೋಹಿತಶಾಹಿಗಳ ಅಟ್ಟಹಾಸದ ವಿಕೃತ ನಗೆ, ಅಡರಿದ ದೈಹಿಕ – ಮಾನಸಿಕ ಮುಪ್ಪು, ಮಗನ ವರ್ತನೆಗಳು, ತಾವೊಬ್ಬ ಮಹಾ ಮೇಧಾವಿ, ಅನುಭವಿ, ಬುದ್ಧಿವಂತ, ದಕ್ಷ, ಅರ್ಹ ದೇಶಭಕ್ತರಾಗಿದ್ದರೂ ಈ ದೇಶದ ಉನ್ನತ ಪದವಿಗೇರದ ಅರ್ಥಪೂರ್ಣ ನೋವು, ಸಂಕಟಗಳು ತದೇಕವಾಗಿ ಕಡಿಯತೊಡಗಿದವು. ಎದೆಯ ಮೇಲಿನ ಈ ಮೂಟೆಗಳ ಭಾರ ಅಧಿಕವಾಯಿತು.

ಸ್ವತಂತ್ರ ಭಾರತದ ದಲಿತ ಸೂರ್ಯ ಹೀಗೆ ಈ ವ್ಯವಸ್ಥೆಯ ಕರಾಳ ತಂತ್ರಗಾರಿಕೆಯ ಕುಣಿಕೆಗೆ ಸಿಲುಕಿ ೧೯೮೬, ಜುಲೈ ೬ರಂದು ಅಸ್ತಂಗತವಾಯಿತು. ಪ್ರತಿಭೆ, ದಕ್ಷತೆಯ ಮಹಾವೃಕ್ಷ ಕಮರಿತು. ಇಂಗ್ಲಿಷ್ ಜ್ಞಾನ, ಶ್ರೀಮಂತಿಕೆ ಇದ್ದಾಗ್ಯೂ ಪ್ರಜ್ವಲವಾಗಿ ಉರಿಯುತ್ತಿದ್ದ ಜ್ಯೋತಿಯನ್ನು ತುಯ್ದಾಡಿಸಿ ತಣ್ಣೀರೆರಚಿ ನಂದಿಸಿತು. ಕೆಳ ಜಾತಿಯ ಸೋಂಕು. ಜಗಜೀವನ್‌ರ ಸಾವು ದಲಿತರಿಗೆ ಅಪ್ಪಳಿಸಿದ ಎರಡನೇ ದೊಡ್ಡ ಬರಸಿಡಿಲು. ಅಂಬೇಡ್ಕರರ ನಿರ್ವಾಣದಿಂದ ತಬ್ಬಲಿಗಳಾದ ದಲಿತರನ್ನು ತಮ್ಮ ಪ್ರೀತಿ, ವಾತ್ಸಲ್ಯದ ಹೃದಯದಲ್ಲಿ ಅಪ್ಪಿಕೊಂಡು ಅತ್ಯಂತ ಶ್ರದ್ಧಾಪೂರ್ವಕವಾಗಿ ಪೋಷಿಸಿದ

ಮಹಾ ಚೇತನ ದಲಿತರಿಂದ ದೂರಾದುದು ಅಸದಳ ಮತ್ತು ಅವರ್ಣನೀಯ ದುಃಖ – ನೋವಿನ ಗಾಥೆ.

ತನ್ನ ಒಡಲಿನ ಕುಡಿಯಾದ ರಾಮ್‌ರನ್ನು ಚಂದ್ವಾ ಗ್ರಾಮದ ಎರೆಭೂಮಿ ಲೀನಗೊಳಿಸಿಕೊಂಡಿತು. ಅವರು ಬಿತ್ತಿದ ಮತ್ತೊಂದು ಬಗೆಯ ವಿಚಾರಧಾರೆಗಳ ಬೀಜಗಳು ದಲಿತರ, ಶೋಷಿತರ ವಿಮೋಚನೆಗೆ ಉತ್ತಮ ಬುತ್ತಿಯ ಬೆಳೆಗಳಾಗಿವೆ. ಸಂಘರ್ಷ ಮತ್ತು ಸಂವಾದ ಈ ಎರಡೂ ಬಗೆಯ ನಡಿಗೆಗಳು ದಲಿತರ ಸ್ವಾಭಿಮಾನಕ್ಕೆ ದಾರಿದೀಪವಾಗಿವೆ.

ರಾಮ್‌ರಲ್ಲಿ ಮನೆಮಾಡಿದ್ದ ವಿಶೇಷಣಗಳನ್ನು ಈ ದೇಶದ ಇತರೇ ಸಾಮಾಜಿಕ ಸ್ತರದ ವ್ಯಕ್ತಿಯೊಬ್ಬರು ಬೆಳೆಸಿಕೊಂಡರೆ ನಾಡಿನ ಶೃಂಗಮಟ್ಟ ತಲುಪುವುದು ಕಷ್ಟಕರವಲ್ಲ. ಇಲ್ಲಿ ಬುದ್ಧನ ಕರ್ಮ ಸಿದ್ಧಾಂತಕ್ಕಿಂತ ಗೀತೆಯ ಕೃಷ್ಣನ ಕರ್ಮ ಸಿದ್ಧಾಂತಗಳೇ ವಿಜೃಂಭಿಸುವ ವೇದಿಕೆ "ಕರ್ಮಕ್ಕೆ ನೀವು ಹೇಗೆ ಹಕ್ಕುದಾರರೋ ಅದೇ ಬಗೆಯಲ್ಲಿ ಅದರ ಪ್ರತಿಫಲಕ್ಕೂ ನೀವೇ ಹಕ್ಕುದಾರರು" ಎಂಬ ಬುದ್ಧನ ವಿಚಾರಧಾರೆ ವೈಜ್ಞಾನಿಕ ಮಾನವೀಯವಾಗಿದ್ದರೂ ಈ ನಾಡಿನ ಸಾಮಾಜಿಕ ವ್ಯವಸ್ಥೆಯ ಕಟ್ಟುಪಾಡುಗಳು ತಡಹಿಡಿಯುತ್ತವೆ. ಅದಕ್ಕೆ ಬದಲು ಗೀತೆಯ "ಕರ್ಮ ನಿಮ್ಮ ಹಕ್ಕು ಆದರೆ ಪ್ರತಿಫಲದ ಹಕ್ಕು ನಿಮ್ಮದಲ್ಲ" ಎಂಬ ದೈವವಾಣಿಯ ಮೇಲ್ಜಾತಿ ಮೇಲ್ವರ್ಗ ಪರವಾದ ಸರಣಿ ಗೆಲುವು ಸಾಧಿಸುತ್ತಿರುತ್ತದೆ.

ಜಗಜೀವನ್ ತನ್ನ ವರ್ಣ ಧರ್ಮದ ಚಟುವಟಿಕೆಗಳನ್ನು ನಿರ್ವಹಿಸಿಲ್ಲ. ಶೂದ್ರನೊಬ್ಬನೇ ಆತ ನಿರ್ವಹಿಸಿದ ಕೆಲಸಗಳನ್ನು ಮಾಡಲು ಅನರ್ಹ. ಅಂಥದರಲ್ಲಿ ಒಬ್ಬ 'ಪಂಚಮ' ಇಂಥ ಕರ್ಮ ನೆರವೇರಿಸಿರುವುದು ಅಕ್ಷಮ್ಯ ಅಪರಾಧ ಎಂಬ ಭಾವ ವೈದಿಕರ ಮನದಾಳದಲ್ಲಿ ಗೋಚರಿಸಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಇಂಥ ತಲೆ ಬುಡರಹಿತ, ತರ್ಕಹೀನ ವಾದಸರಣಿ ಎಲ್ಲೀತನಕ ನಾಡಿನ ಸಾಂಸ್ಕೃತಿಕ ಬದುಕಿನ ಅಂತರ್ಯದಲ್ಲಿ ಗುಪ್ತಗಾಮಿನಿ ಯಾಗಿ ಹರಿಯುತ್ತಿರುತ್ತದೋ, ಈ ನಾಡನ್ನು ಆಳುತ್ತಿರುತ್ತದೋ ಅಲ್ಲಿಯತಕ

ಪರಿಶ್ರಮಕ್ಕೆ, ಕರ್ಮಕ್ಕೆ ತಕ್ಕ ಪ್ರತಿಫಲ ದೊರೆಯುವುದಿಲ್ಲ. ರಾಮ್‌ರಂತಹ ಪ್ರತಿಭೆಗಳು ಮುಕ್ತಾಗದಿರುವುದಿಲ್ಲ ಮತ್ತು ನಾಡಿನ ಅಭಿವೃದ್ಧಿ ಸಾಧ್ಯವಾಗದಿರುವುದಿಲ್ಲ.

ಈ ಎಲ್ಲ ಇತಿ–ಮಿತಿಗಳ ಮಧ್ಯದಲ್ಲೂ ಬಿಹಾರಿನ ಎರೆಹೊಲದಲ್ಲಿ ಹೆಮ್ಮರವಾಗಿ ಬೆಳೆದ ರಾಮ್‌ರ ಹೆಸರು ದೇಶದ ಚರಿತ್ರೆಯಲ್ಲಿ ಅಜರಾಮರವಾಗಿ ಉಳಿಯುವಂತಹುದೆಂದು ನಿಸ್ಸಂದೇಹವಾಗಿ ದಾಖಲಿಸಬಹುದು.

ಭಾಗ – ೨

ಚಿಂತನ

ಸಾಮಾಜಿಕ ವಿಚಾರಧಾರೆ:

ಜಗಜೀವನ್‌ರಾಮ್ ಅವರು ಪುರೋಹಿತಶಾಹಿ ಮತ್ತು ವೈದಿಕ ಸಂಸ್ಕೃತಿಯ ಕಡುವೈರಿಗಳು. ಭಾರತದ ಸಮಸ್ತ ಬದುಕು ಚಲನೆ ಕಳೆದುಕೊಳ್ಳಲು ಈ ಸಿದ್ಧಾಂತಗಳೇ ಕಾರಣವೆಂದು ನಂಬಿದವರು. ನಾಡಿನ ಸಾಮಾಜಿಕ ವ್ಯವಸ್ಥೆ ಇವುಗಳ ತಳಪಾಯದ ಮೇಲೆ ನಿಂತಿದೆಯೆಂದು ಭಾವಿಸಿದವರು. 'ಜಾತಿ ಪದ್ಧತಿ' ಈ ವಿಚಾರಧಾರೆಗಳ ಪಾಪದ ಕೂಸು. 'ಜಾತಿ' ಅನ್ನುವುದು ಒಂದು ಕಲ್ಪನೆ, ಆದರೆ ಭ್ರಮೆಯಲ್ಲ. ಅದೊಂದು ವಾಸ್ತವಿಕ ಚಿತ್ರಣ. ಅದರ ಮರೆವು ಅಥವಾ ಅದರ ಬಗ್ಗೆ ಕುರುಡಾಗುವುದು ಅಥವಾ ತಿರಸ್ಕರಿಸುವುದು ಒಂದರ್ಥದಲ್ಲಿ ಸಮಸ್ಯೆಯ ವಸ್ತು ಸ್ಥಿತಿಗೆ ಹೆದರುವುದೆಂದು ಅಥವಾ ಅದನ್ನು ನಿರಂತರವಾಗಿ ಬೆಳೆಸಬೇಕೆಂಬ ಒಳ ಆಸೆ. ಅದರಿಂದ ಅಧಿಕ ಅಪಾಯಗಳನ್ನೇ ಮತ್ತೂ ಆಹ್ವಾನಿಸಬೇಕಾಗುತ್ತದೆ. 'ಜಾತಿ' ವಸ್ತು – ಸ್ಥಿತಿ ಎಂದು ಪರಿಗಣಿಸಿದರೆ, ಕನಿಷ್ಟ ಅದರ ಕುರಿತು

ಗಂಭೀರ ಚಿಂತನೆ – ಕಾರ್ಯಕ್ರಮಗಳನ್ನಾದರೂ ಯೋಜಿಸಲು ಸಾಧ್ಯ ಎಂಬುದು ಜಗಜೀವನ್‌ರ ಪ್ರಾಯೋಗಿಕ ಆಲೋಚನೆ.

ಜಾತಿಯ ಸರ್ವ ವ್ಯಾಪ್ತಿಯನ್ನು ಜಗಜೀವನ್‌ರು ಗುರುತಿಸಿದರು. ಭಾರತೀಯ ಸಮಾಜದ ಅಂಗುಲಂಗುಲ ಭಾಗಗಳು ಇದರ ರೌದ್ರಾವತಾರಕ್ಕೆ ಬಲಿ. ಹಿಂದೂ ಸಮಾಜವೇ ಸರ್ವಶ್ರೇಷ್ಠ ಎಂಬ ಹೆಗ್ಗಳಿಕೆ. ಅದರ ಕಟ್ಟುಪಾಡುಗಳ ಅಳತೆಗೋಲುಗಳೇ ದೇಶದ ಇತರೇ ಸಮಾಜಗಳ ಮೌಲ್ಯಮಾಪನಕ್ಕೆ ಬಳಕೆ. ಜಾತಿ, ಉಪಜಾತಿಗಳ ರೋಗಾಣುಗಳು ರಾಷ್ಟ್ರದ ಸರ್ವಧರ್ಮಗಳ ಸಾಮಾಜಿಕ ವ್ಯವಸ್ಥೆಯೊಳಗೂ ಕಾಲಿರಿಸಿವೆ. ಜಗಜೀವನ್‌ರು ಈ ಪರಿಸ್ಥಿತಿ ಬಗ್ಗೆ ಹೀಗೆ ಕ್ಷ–ಕಿರಣ ಹರಿಸಿರುವರು. "ಹಿಂದೂ ಒಬ್ಬ ತನ್ನ ಧರ್ಮವನ್ನು ತ್ಯಜಿಸಬಲ್ಲ, ತನ್ನೆಲ್ಲ ಆಪ್ತ ವಸ್ತುಗಳನ್ನು ತಿರಸ್ಕರಿಸಬಲ್ಲ. ಆದರೆ ಅವನ ಜಾತಿಯನ್ನು ಎಂದೆಂದೂ ಬಿಡಲಾರ. ಅವನು ಬಿಡಲೆತ್ನಿಸಿದರೂ ಅದು ಮಾತ್ರ ಅವನನ್ನು ಪಿಡುಂಭೂತವಾಗಿ ಬೆನ್ನ ಹಿಂದೆಯೇ ಕಾಡುತ್ತಿರುತ್ತದೆ.'' ಈ ಕಾರಣ, ಕೇವಲ ಹಿಂದೂ ಸಮಾಜ ಮಾತ್ರವಲ್ಲ, ಸಮಸ್ತ ಭಾರತೀಯ ಸಮಾಜವೇ 'ಪುರೋಹಿತ ಶಾಹಿ' ವಿಚಾರಧಾರೆಗೆ ಪಕ್ಕಾಗಿವೆ. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳು ಭಾರತೀಯನ ಮನಃಪರಿವರ್ತನೆಯಲ್ಲಿ ತೋಪಾಗಿವೆ. ಅತ್ಯಾಧುನಿಕ ತಾಂತ್ರಿಕ ಪರಿಕರಗಳನ್ನು ನಿತ್ಯದ ಬದುಕಲ್ಲಿ ಬಳಸುವ ವ್ಯಕ್ತಿಯೊಳಗಣ ಮನಃಸ್ಥಿತಿ 'ಜಾತಿ'ಯ ರಾಡಿಯಲ್ಲಿ ಹುದುಗಿರುತ್ತದೆ. ಜಗತ್ತಿನ ಯಾವ ಲೋಕದಲ್ಲೇ ಆಗಲಿ, ಹಿಂದೂವೊಬ್ಬನ ಹೆಜ್ಜೆ ಗುರುತು ಬಿದ್ದರೆ ಅದರೊಡನೆ ಅವನ ಅಂತರಂಗದ 'ಜಾತಿ'ಯ ಎಳೆಗಳೂ ಬೀಳುತ್ತವೆಂಬ ಪಾಶ್ಚಿಮಾತ್ಯ ಚಿಂತಕನೊಬ್ಬನ ಮಾತುಗಳನ್ನು ಇಲ್ಲಿ ನೆನೆಯುವುದು ಸ್ತುತ್ಯಾರ್ಹ.

ಪ್ರಪಂಚದ ಅಭಿವೃದ್ಧಿ ರಾಷ್ಟ್ರಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವ ನಿಷ್ಕರ್ಷಣಗೆ 'ಪ್ರತಿಭೆ', 'ಜ್ಞಾನ', 'ದಕ್ಷತೆ', ಸನ್ನಡತೆ, ಸಂಯಮ ಮುಂತಾದ ಮಾನವೀಯ ಗುಣ – ಸ್ವಭಾವಗಳು ಅಳತೆಗೋಲುಗಳು. ಭಾರತ

ಹೊರತುಪಡಿಸಿ ಉಳಿದ ಹಿಂದುಳಿದ ರಾಷ್ಟ್ರಗಳಲ್ಲಿ ವ್ಯಕ್ತಿಯ ಜೀವನಮಟ್ಟ ಅಳತೆಗೋಲು. ದುರಾದೃಷ್ಟ ಭಾರತದಲ್ಲಿ ಮಾತ್ರ ಈ ಯಾವ ಆಯಾಮಗಳು ವ್ಯಕ್ತಿಯ ಸ್ಥಾನ–ಮಾನ ನಿರ್ಧರಿಸುವುದಿಲ್ಲ. ಬದಲು 'ಜಾತಿ'ಯೇ ವ್ಯಕ್ತಿಯ 'ಪ್ರತಿಷ್ಠೆ–ಪ್ರತಿಭೆ'ಗಳನ್ನು ನಿರ್ಧರಿಸುತ್ತದೆಂದೂ ಜಗಜೀವನ್‌ರ ಅಭಿಪ್ರಾಯ.

ಸಾವಿರಾರು ಜಾತಿ, ಉಪಜಾತಿಗಳಲ್ಲಿ ಸೀಳಿರುವ ಹಿಂದೂ ಸಮಾಜ ಸಾಂದ್ರತೆಯ ಸಮಗ್ರ ಸ್ವರೂಪ ಪಡೆಯಲು ಅಸಾಧ್ಯ. ಇದು ಅನೇಕ ಗುಂಪು – ಪಂಗಡಗಳ ಒಕ್ಕೂಟ ಮಾತ್ರ. ಹಿಂದೂ ಧರ್ಮ ವಿಭಜನೆ ಮತ್ತು ಪ್ರತ್ಯೇಕತೆಯ ಚಾವಡಿ. ತದ್ವಿರುದ್ಧ ತತ್ವಗಳ ಒಡಲು, ಅನ್ಯೋನ್ಯತೆ ಕೇವಲ ಮೇಲ್ಪದರಿನದು. ವಿಚ್ಛಿದ್ರತೆ ಮತ್ತು ಒಡೆಯುವಿಕೆಯ ಸೂತ್ರಗಳ ಬೀಜಗಳು ಧರ್ಮದ ಜೀವಾಣುಗಳು. ಏಕೀಕೃತ ಭಾರತೀಯ ಸಮಾಜದ ಪರಿಕಲ್ಪನೆ ಒಂದು ಭ್ರೋಳೆ. 'ವೈದಿಕ ಸಿದ್ಧಾಂತ' ಹೀಗೆ ಅಂತರಂಗದಲ್ಲಿ ಭಾರತೀಯ ಸಮಾಜವನ್ನು ಕೊರೆಯುತ್ತಿದೆ ಎಂಬುದಾಗಿ ಜಗಜೀವನ್ ರಾಮ್‌ರ ಖಚಿತ ಧ್ವನಿ. ದಲಿತರು ಇರದ ಯಾವ ಹಳ್ಳಿ – ಪಟ್ಟಣಗಳೂ ಇಲ್ಲ. ಆದರೆ ಇಲ್ಲಿಯ ಸಾಮಾಜಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿರುವುದಿಲ್ಲ; ಸಾಂಸ್ಕೃತಿಕ ಎಲ್ಲ ಕ್ರಿಯೆಗಳಿಂದ ಅವರನ್ನು ಹೊರಗಿಟ್ಟಿರುತ್ತಾರೆ. ಅವರಿಗೇ ಪ್ರತ್ಯೇಕತೆ ನಿರ್ಮಿಸಿ, ಪ್ರಮುಖ ವಾಹಿನಿಗೆ ಬರುವುದಿಲ್ಲ ಎಂಬ ಅಪವಾದ ಹೊರಿಸುತ್ತಾರೆಂಬುದಕ್ಕೆ ಜಗಜೀವನ್‌ರು ವ್ಯಾಕುಲಪಡುತ್ತಿದ್ದರು. ಇಷ್ಟಾದರೂ ಅತ್ಯಂತ ನಯ ನಾಜೂಕಿನಲ್ಲಿ ಪುರೋಹಿತಶಾಹಿ ವಾರಸುದಾರರು ಅಂತರ್ಗತ ವೈವಿಧ್ಯತೆ ಮರೆಮಾಡುತ್ತ ಬಹಿರಂಗದ 'ಏಕತೆ' ಸಾಧಿಸಲು ಸುಳ್ಳಿನ ಸರಮಾಲೆ ನಿರ್ಮಿಸುತ್ತಿರುತ್ತಾರೆ.

ಪುರೋಹಿತಶಾಹಿ ಧೋರಣೆಯ ಮತ್ತೊಂದು ಅಪಾಯಕಾರಿ ಮಜಲು ತನ್ನನ್ನು ಭೌತಿಕವಾಗಿ ವಿರೋಧಿಸುವ ಸಿದ್ಧಾಂತ, ವ್ಯಕ್ತಿಗಳನ್ನು

ಮಾನಸಿಕವಾಗಿ ತನ್ನ ಹಿಡಿತಕ್ಕೆ ತಂದುಕೊಳ್ಳುವುದು ಅಥವಾ ತನ್ನ ಮೌಲ್ಯಗಳಿಗೆ ಒಗ್ಗಿಸಿಕೊಳ್ಳುವುದು. ಇಲ್ಲಾ, ಸಂಪೂರ್ಣವಾಗಿ ತನ್ನಲ್ಲಿ ಜೀರ್ಣಿಸಿಕೊಳ್ಳುವುದು. ಈ ಪ್ರಕ್ರಿಯೆಯಲ್ಲಿ ಆಕಸ್ಮಿಕವಾಗಿ ವಿರೋಧಿ ಬಣ ಪ್ರತ್ಯೇಕತೆ ಉಳಿಸಿಕೊಂಡರೆ ಅದರ ಕಥೆ ಮುಗಿದಂತೆ. ಜೀವನಪರ್ಯಂತ ಪುರೋಹಿತಶಾಹಿ ಅಂಥದ್ದರ ವಿರುದ್ಧ ಸದಾ ಶತ್ರುತ್ವ – ದ್ವೇಷ – ಹಗೆತನ ಸಾಧಿಸಲು ಕತ್ತಿ – ಗುರಾಣಿಗಳನ್ನು ಹಿಡಿಯಲೂ ಹೇಸುವುದಿಲ್ಲ.

ಈ ಮಾತಿನ ಸ್ಪಷ್ಟತೆಗೆ ಜಗಜೀವನ್‌ರಾಮ್ ಎತ್ತಿರುವ ಚಾರಿತ್ರಿಕ ಘಟನೆಯ ಸತ್ಯ ಸಂಗತಿ ಸಂಗತವೆನಿಸುತ್ತದೆ. "ಶಕರು ಮತ್ತು ಹೂಣರು ಹೊರಗಿನ ದಾಳಿಗಾರರು. ಆದರೂ ಕ್ರಮೇಣ ಅವರನ್ನು ಹಿಂದೂ ಸಮಾಜ ಸಂಪೂರ್ಣವಾಗಿ ಗರ್ಭೀಕರಿಸಿಕೊಂಡಿತು. ಆದರೆ ಇಸ್ಲಾಮ್ ಮತ್ತು ಕ್ರಿಶ್ಚಿಯನ್ ಧರ್ಮೀಯರನ್ನು, ತತ್ವಗಳನ್ನು ತನ್ನ ಜಾತಿ ವ್ಯವಸ್ಥೆಯ ಕಕ್ಷೆಯೊಳಗೆ ನುಂಗಲಾಗಲಿಲ್ಲ. ಅವು ಪ್ರತ್ಯೇಕವಾಗಿ ಉಳಿದವು" ಪ್ರಸ್ತುತ ಭಾರತದ ಪ್ರಕ್ಷುಬ್ಧತೆಯ ಹಿಂದಿರುವ ಚಾರಿತ್ರಿಕ ಅಂಶಗಳನ್ನು ಇವು ಬೆತ್ತಲುಗೊಳಿಸುತ್ತವೆ.

ಈ ಜಾಡಲ್ಲೇ ಚರಿತ್ರೆಯ ಆಳಕ್ಕೆ ಇಳಿದರೆ ಇಂತಹ ಅನೇಕ ಘಟನಾವಳಿಗಳು ಗೋಚರಿಸದೇ ಇರಲಾರವು. ಅಂಥದರಲ್ಲಿ ಒಂದು ವಿಷಯದ ಬಗೆಗೆ ಕಣ್ಣು ಹೊರಳಿಸುವುದು ಸ್ತುತ್ಯವೆನಿಸುತ್ತದೆ. ಭಾರತದ ಮೂಲ ನಿವಾಸಿಗಳು 'ನಾಗ' ಅಥವಾ 'ದಸ್ಯ'ಗಳು. ಬಹು ಹಿಂದೆಯೇ ಹೊರಗಿನಿಂದ ಬಂದ ದ್ರಾವಿಡರು ಇಲ್ಲಿನ ಜನರ ಬದುಕಿನೊಡನೆ ಪರಿಪೂರ್ಣವಾಗಿ ಮಿಳಿತಗೊಂಡರು. ತರುವಾಯ, ಅಲೆಮಾರಿ ಜೀವನ ಪ್ರಕೃತಿಯ ಆರ್ಯರ ದಾಳಿ ಅವರೊಡನೇ ಹರಿದು ಬಂದ ಪುರೋಹಿತಶಾಹಿ, ವೈದಿಕ ಸಿದ್ಧಾಂತಕ್ಕೆ ಮೂಲ ಜನಾಂಗದವರಿಂದ ಪ್ರತಿರೋಧದ ಅಂಕಣ ಆರಂಭ. ಸ್ವಭಾವತಃ ಅಲೆಮಾರಿ ಚರ್ಯೆಯ ವಿದೇಶೀಯರಾದ ಈ ಜನ ವಿರೋಧಿಗಳನ್ನು ಮಣಿಸುವ ಕಲೆಯಲ್ಲಿ ನಿಪುಣರು. ಅನೇಕ ವರ್ಷಗಳ

ಸಂಘರ್ಷದಲ್ಲಿ ವಿಜಯಿಗಳಾದ ಆರ್ಯರು ತಮ್ಮ ತತ್ವಗಳನ್ನು ಒಪ್ಪದ ಜನರನ್ನು ತಾವು ರಚಿಸಿದ ವ್ಯವಸ್ಥೆಯ ಆವರಣದಿಂದ ಹೊರದಬ್ಬಿದರು. ಕ್ರಮೇಣ ಇವರ ಸುಳ್ಳು – ಠಕ್ಕಿನ ತತ್ವಗಳ ವಿರುದ್ಧ ಬೌದ್ಧ – ಜೈನ ಧರ್ಮಗಳು ತಲೆಎತ್ತಿದವು. ಈ ಧರ್ಮದೊಳಗೆ ಅದರಲ್ಲೂ ವಿಶೇಷವಾಗಿ ಬೌದ್ಧ ಧರ್ಮದೊಳಗೆ ಬಹುಸಂಖ್ಯಾ ಇಲ್ಲಿನ ಮೂಲ ಜನಾಂಗಗಳ ಪ್ರವೇಶ. ಮುಂದಿನ ಚಾರಿತ್ರಿಕ ಘಟನೆಗಳಲ್ಲಿ ಬಹು ಸಂಖ್ಯೆಯ ಬೌದ್ಧರು ಮುಸ್ಲಿಂ ಧರ್ಮಕ್ಕೆ ಸೇರಿದವರು. ಸಮಗ್ರ ಭಾರತದಲ್ಲಿ ಬಹು ಸಂಖ್ಯೆಯ ಮುಸ್ಲಿಮರ ಭೂಭಾಗಗಳು ಒಂದು ಕಾಲದಲ್ಲಿ ಬೌದ್ಧರ ಜನನಿಬಿಡ ಪ್ರದೇಶಗಳೆಂಬುದು ಚರಿತ್ರೆಯ ದಾಖಲೆಗಳು ತಿಳಿಸುತ್ತವೆ. ಈ ಮಾತಿಗೆ ಆಧಾರವಾಗಿ ಅಂಬೇಡ್ಕರರ 'ಹಿಂದೂ ಧರ್ಮದ ಒಗಟು'ಗಳು ಮತ್ತು 'ಅಸ್ಪೃಶ್ಯರು' ಗ್ರಂಥವನ್ನು ವೀಕ್ಷಿಸಬಹುದು.

ಇಲ್ಲಿನ ಮೂಲ ನಿವಾಸಿಗಳು 'ನಾಗ' ಜನಾಂಗದವರೇ. ಅವರೇ ಮುಂದೆ ಆರ್ಯರಿಂದ 'ದಸ್ಯು' ಪಟ್ಟವನ್ನು ಪಡೆದವರು ಎಂಬ ವಾದವನ್ನು ಜಗಜೀವನ್‌ರು ಮಂಡಿಸಿರುವರು. ಅಂಬೇಡ್ಕರ್ ಮತ್ತು ರೋಮಿಲಾಥಾಪರ್ ರಂತಹ ವಿದ್ವಾಂಸರ ಧ್ವನಿ ಕೂಡ ಹೀಗೆ ಇರುವುದು.

ಭಾರತದಲ್ಲಿ ಇಂದು 'ಧರ್ಮ–ಮತ'ದ ಹೆಸರಲ್ಲಿ ಹರಿಯುತ್ತಿರುವ ರಕ್ತದ ಹಿಂದಿರುವ ತಲತಲಾಂತರದ ದ್ವೇಷ – ಅಸೂಯೆಯ ತಾತ್ವಿಕ ಎಳೆಗಳ ದರ್ಶನ ಇದಾಗಿದೆ. 'ನಾಗ'ರನ್ನು ಹಿಂಸಿಸಿದ, ಬೌದ್ಧರನ್ನು ಓಡಿಸಿದ, ಮುಸ್ಲಿಮರನ್ನು, ದಲಿತರನ್ನು ಕೊಲ್ಲುತ್ತಿರುವ ಕೈ – ಬುದ್ಧಿ – ಮನಸ್ಸು ಒಂದೇ. ಈ ಮರ್ಮ – ರಹಸ್ಯವನ್ನು ದಲಿತರು ಭೇದಿಸಿದ್ದಾರೆಂಬುದು ಸಂತೋಷಕರ ಎಂಬುದಾಗಿ ಜಗಜೀವನ್‌ರ ಹೇಳಿಕೆಯ ಅವರ ನುಡಿಗಳು. "ಇಂದು ದಲಿತರು ಪ್ರತಿಗಾಮಿ ಶಕ್ತಿಗಳ ಮತ್ತು ಸಂಪ್ರದಾಯಬದ್ಧ ಹಿಂದೂ ತತ್ವಗಳ ಬಗ್ಗೆ ಜಾಗೃತರಾಗಿದ್ದಾರೆ. ದೇಶದಲ್ಲಿ ದಲಿತರ

ವಿಮೋಚನಾ ಆಂದೋಲನಗಳು ಆರಂಭಗೊಂಡಿವೆ. ಇದು ಮನಸ್ಸಿಗೆ ನೆಮ್ಮದಿಯ ಸಂಗತಿ.''

ಜಾತಿಪದ್ಧತಿ ರೋಗದ ಅಪಾಯಗಳನ್ನು ಕಂಡುಕೊಂಡ ಜಗಜೀವನ್ ರಾಮ್ ಅದರ ಮೂಲ ಮತ್ತು ಪರಿಹಾರೋಪಾಯಗಳನ್ನು ಶೋಧಿಸಿರುವರು. ಆರ್ಯ – ಅನಾರ್ಯರ ನಡುವಿನ ಅನೇಕ ವರ್ಷಗಳ ಸಂಘರ್ಷದ ತರುವಾಯ ತಲೆದೋರಿದ 'ವರ್ಣ – ಕಸುಬು', 'ಜಾತಿ' ಪದ್ಧತಿ ತಾಯಿಬೇರು. ಮೊದಲಿನ 'ಬ್ರಾಹ್ಮಣ' – 'ಕ್ಷತ್ರಿಯ' ವರ್ಣಗಳು ಕ್ರಮೇಣ ವೈಶ್ಯರೊಳಗೊಂಡು ಕಡೆಯಲ್ಲಿ 'ಶೂದ್ರ'ರೆಂಬ ನಾಲ್ಕನೆಯ ವರ್ಣದಲ್ಲಿ ವರ್ಣಾಶ್ರಮ ಪದ್ಧತಿ ನೆಲೆಗೊಂಡಿತು. ಮೊದಲು, ವರ್ಣಗಳ ಮಧ್ಯ ಚಲನೆ ಇದ್ದಾಗ್ಯೂ ಕಾಲಗತಿಯಲ್ಲಿ ಅದು ಸ್ಥಗಿತಗೊಂಡಿತು. ನಿಯಮಾವಳಿಗಳು ಬಿಗಿಗೊಂಡವು. ವರ್ಣಗಳ ಮಧ್ಯದ ವಿವಾಹ ನಿಷೇಧವಾಯಿತು. ಕಾನೂನು – ಕಟ್ಟಳೆಗಳನ್ನು ಉಲ್ಲಂಘಿಸಿದವರು ವರ್ಣಗಳಿಂದ ಬಹಿಷ್ಕೃತರಾದರು. ಅಂದಮೇಲೆ ಜಾತಿಗಳ ಉಗಮಕ್ಕೆ ವರ್ಣಸಂಕರ ಅಡಿಪಾಯ. ಮನು ಸ್ಮೃತಿಯಲ್ಲಿ ಇದಕ್ಕೆ ಅಧಿಕ ಪುರಾವೆಗಳು ಲಭ್ಯ. 'ಚಂಡಾಲ'ನ ಹುಟ್ಟು ಮನುವಿನ ಪ್ರಕಾರವೇ ವರ್ಣಸಂಕರದ ಪ್ರತಿಫಲದಿಂದ.

ಕಾಲಗತಿಗೆ ಸಿಲುಕಿದ ವರ್ಣಾಶ್ರಮ 'ಜಾತಿ–ಉಪಜಾತಿ'ಗಳಾಗಿ ಮಾರ್ಪಾಡಾಯಿತು. ಅನುಲೋಮ – ಪ್ರತಿಲೋಮ ವಿವಾಹಗಳು ಸರ್ವೇ ಸಾಮಾನ್ಯವಾಗುತ್ತಾ ಯಾವ ಜಾತಿಯ ರಕ್ತವೂ ಶುದ್ಧವಾಗಿಲ್ಲ ಎಂಬುದನ್ನು ಜಗಜೀವನ್‌ರು ಹೇಳಿರುವರು. ಅದಕ್ಕೆ ಮಹಭಾರತದ ಅಂತರ್‌ಜಾತಿ ವಿವಾಹಗಳ ದೊಡ್ಡ ಪಟ್ಟಿಯನ್ನೇ ನೀಡಿರುವರು.

ಹೀಗೆ ಜಾತಿಗಳ ಉಗಮವನ್ನು ಸ್ಪಷ್ಟವಾಗಿ ಗುರುತಿಸಿರುವ ಜಗಜೀವನ್‌ರು ಆರ್ಯರ ಸಾಂಸ್ಕೃತಿಕ ಒಳಸಂಚುಗಳನ್ನು ಬಯಲಿಗೆಳೆದಿರುವರು. ಆರ್ಯರು ಮೂಲನಿವಾಸಿಗಳಲ್ಲಿ ರೂಢಿಯಲ್ಲಿದ್ದ ಉತ್ತಮಾಂಶ

ಗಳನ್ನು ತಮ್ಮದಾಗಿಸಿಕೊಂಡರು. ಅನಾರ್ಯರ ಪೂಜಾ ವಿಧಾನಗಳನ್ನು ಮತ್ತು ದೇವರುಗಳನ್ನು ಕದ್ದರು. ಅದರಿಂದಲೇ ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ವಿವಿಧ ಕಾಲಗಳಲ್ಲಿ ವಿವಿಧ ಬಗೆಯ ದೇವಾನುದೇವತೆಗಳು ಮತ್ತು ಪೂಜಾ ವಿಧಾನಗಳು ಕಂಡುಬರುತ್ತವೆ.

ಹಿಂದೂ ಸಮಾಜವನ್ನು ಇಷ್ಟೊಂದು ಆಳವಾಗಿ ಚಾರಿತ್ರಿಕ ಮತ್ತು ವೈಜ್ಞಾನಿಕ ಪಾತಳಿಯ ಮೇಲೆ ಅರಗಿಸಿಕೊಂಡಿದ್ದ ಜಗಜೀವನ್‌ರಾಮ್‌ರು ಹಿಂದೂ ಧರ್ಮದ ಆವರಣದಾಚೆ ತಮ್ಮ ಯಾವ ಕ್ಷೇತ್ರದ ಬದುಕನ್ನು ನಿರ್ವಹಿಸಲು ಯೋಚಿಸುತ್ತಿರಲಿಲ್ಲ. ಈ ಕಾರಣವೇ ಅವರು ಮತಾಂತರವನ್ನು ತಾತ್ವಿಕವಾಗಿ ವಿರೋಧಿಸುತ್ತಿದ್ದರು. ಅಲ್ಲದೆ ದಲಿತರ ಸಾಮಾಜಿಕ ಸ್ತರವಿನ್ಯಾಸ ಮತಾಂತರದಿಂದ ಬದಲಾಗದೆಂದು ಭಾವಿಸಿದರು. ಸಮಾನತೆಗೆ ದಲಿತರು ಆಳದ ಅರಿವು ಪಡೆಯುತ್ತ ಸಂಘಟಿತ ಹೋರಾಟ ನಡೆಸಬೇಕೆಂದು ಹೇಳುತ್ತಿದ್ದರು. ತಲತಲಾಂತರದಿಂದ ತುಳಿಸಿಕೊಂಡಿರುವ ದಲಿತರ ಸ್ಫೋಟವನ್ನು ಯಾರೂ ತಪ್ಪಿಸರು. ಒಂದಲ್ಲ ಒಂದು ದಿನ ದಲಿತರು ಸಾಮಾಜಿಕ ಸಮಾನತೆಯನ್ನು ಹೊಂದೇ ಹೊಂದುತ್ತಾರೆಂಬ ದೃಢ ಮನಸ್ಸು ಜಗಜೀವನ್‌ರದಾಗಿತ್ತು.

ದಲಿತರ ಸಮಸ್ಯೆಗಳಿಗೆ ಗಾಂಧಿ – ನೆಹರು ಕಂಡುಕೊಂಡ ಹಿನ್ನೆಲೆಗಳು ಜಗಜೀವನ್‌ರ ಮೈಯ್ಯಲ್ಲಿ ಬಿಸಿ ತರುತ್ತಿದ್ದವು. ಗಾಂಧೀಜಿಗೆ 'ಧರ್ಮ' ಅದರ ಮೂಲವೆನಿಸಿದರೆ ನೆಹರೂ ಅವರಿಗೆ 'ಆರ್ಥಿಕ' ಹಿನ್ನಡತೆ ಕಾರಣವೆನಿಸುತ್ತಿತ್ತು. ಜಗಜೀವನ್ ದಲಿತರ ಸಮಸ್ಯೆಗಳು ಸಾಮಾಜಿಕ – ಆರ್ಥಿಕ – ರಾಜಕೀಯ – ಸಾಂಸ್ಕೃತಿಕ ಸ್ವರೂಪದವು ಎಂಬ ಆಳದ ಅರಿವಿನ ಅಭಿಮತ. ಅದರಿಂದ ಹಿಂದೂ ಸಮಾಜವನ್ನು ಆಮೂಲಾಗ್ರವಾಗಿ ಕ್ರಾಂತಿಕಾರಕ ಬಗೆಯಲ್ಲಿ ಪುನರ್ ಸಂಘಟಿಸಲು ಹೆಣಗಿದರು. 'ಮೀಸಲಾತಿ' ಈ ದಿಸೆಯ ಒಂದು ಮೆಟ್ಟಿಲು. ಅವಕಾಶ ವಂಚಿತರಿಗೆ ಎಲ್ಲ ಕ್ಷೇತ್ರಗಳಲ್ಲಿ

ನಡೆಯಲು ಅವಕಾಶ ಕಲ್ಪಿಸುವುದರ ಮುಖೇನ ನಾಡಿನ ತುಂಭಾ ಹೊಸ ಗಾಳಿ – ಹೊಸ ಚೈತನ್ಯ ತುಂಬಬಹುದೆನ್ನುವುದು ಅವರ ಮಾತು.

ಸಾಮಾಜಿಕ ಸಂಬಂಧ – ಸಂಪರ್ಕಗಳನ್ನು ತುಂಡರಿಸಿರುವ ಜಾತಿ ಪದ್ಧತಿ ಮನುಷ್ಯನ ಕ್ರಿಯಾಶೀಲತೆಗೂ ಪೂರಕ. ಮಾನವೀಯ ಸಂವೇದನೆಯೂ ಏಕಮುಖ ಹೊತ್ತು ಸಂಕುಚಿತಗೊಂಡಿದೆ. ಸಾವಿರರು ವರ್ಷಗಳಿಂದ ಶ್ರಮಿಕರನ್ನು, ಕೃಷಿ ಕಾರ್ಮಿಕರನ್ನು, ಅದರಲ್ಲೂ ಮುಖ್ಯವಾಗಿ ದಲಿತರು – ಹಿಂದುಳಿದವರನ್ನು ಹಿಂಸಿಸಲಾಗುತ್ತಿದೆ. ಇದರ ಹಿಂದೆ ಬ್ರಾಹ್ಮಣರು ಮತ್ತು ಇತರ ಮೇಲ್ಪಂಕ್ತಿಯ ಸುವರ್ಣೀಯರು ಇರುವರು. ಇದರ ದುಷ್ಪರಿಣಾಮ, ದೇಶದ ಮಹೋನ್ನತ ಮೌಲ್ಯಗಳ ಅಭಾವ ಹಾಗೂ ನೈತಿಕ ಜೀವನದ ಅಧಃಪತನ. ರಾಜಕೀಯ ಸಂಕಲ್ಪ ಮತ್ತು ಆಸಕ್ತಿ ಇವುಗಳ ಬಗ್ಗೆ ಇರದಿರುವುದು ಈ ಪರಿಸ್ಥಿತಿ ಬಿಗಡಾಯಿಸಲು ಎಣ್ಣೆ ಹುಯ್ಯುವಿಕೆ ಎಂಬುದು ಜಗಜೀವನ್‌ರ ಮನಸ್ಸು.

ಜಾತಿ ಪದ್ಧತಿಯ ನಿರ್ಮೂಲನೆ ಅದರ ಆಧಾರ ಸ್ತಂಬಗಳನ್ನು ಕೆಡವುದರಲ್ಲಿ ಮಲಗಿದೆ. ಸಹಪಂಕ್ತಿ ಭೋಜನ, ಜಾತಿ ಸೂಚಕ ಚಿನ್ಹೆ – ಹೆಸರುಗಳನ್ನು ಕೈಬಿಡುವ, ಸಾಮೂಹಿಕ ಮನೆಗಳ ನಿರ್ಮಾಣ, ದಲಿತರಿಗೆ ರಾಜಕೀಯ ಅಧಿಕಾರ ಒದಗಿಸುವ, ಆಡಳಿತ ರಂಗದಲ್ಲಿ ಭಾಗವಹಿಸುವ, ಉತ್ತಮ ಶಿಕ್ಷಣ ಪಡೆಯುವ ಪರಿಸರದ ಸೃಷ್ಟಿ ತ್ವರಿತಗತಿಯಲ್ಲಿ ಸಾಗಬೇಕೆಂಬುದು ರಾಮ್‌ರ ಅಭಿಪ್ರಾಯ.

ಇದಲ್ಲದೆ ಅಂತರ್‌ಜಾತಿ ವಿವಾಹಗಳನ್ನು ಕಡ್ಡಾಯಗೊಳಿಸುವುದು. ಸ್ವಜಾತಿ ವಿವಾಹಗಳನ್ನು ನಿಷೇದಿಸುವುದು ಹಾಗೂ ಅಂತರ್‌ಜಾತಿ ವಿವಾಹಿತರಿಗೆ ಆದ್ಯತೆಯಲ್ಲಿ ನೌಕರಿ ಕಲ್ಪಿಸುವುದು, ಸಾಮಾಜಿಕ ಸಮಾನತೆಗಿರುವ ಮಾರ್ಗಸೂಚಿಗಳೆಂದು ಜಗಜೀವನ್‌ರ ನಿಲುವು. ಜಾತಿ – ಜಾತಿಗಳ ನಡುವೆ ರಕ್ತ ಬೆರಕೆ ಆದಷ್ಟೂ ಸಾಮಾಜಿಕ ವ್ಯವಸ್ಥೆ ವಿಸ್ತೃತ ತಳಹದಿ ಪಡೆಯುತ್ತದೆ. ವರ್ಣ – ಜಾತಿಗಳ ಬೇರುಗಳು ಸಡಿಲ

ಹೊಂದುತ್ತವೆ. ಸಾಮರಸ್ಯ, ಸಮಾನತೆ, ಸೋದರತೆ ಮತ್ತು ಸ್ವಾತಂತ್ರ್ಯದ ಬೆಳೆಗಳು ಸಮಾಜದ ಮಡಿಲಲ್ಲಿ ಸಂರಕ್ಷಿಸಲ್ಪಡುತ್ತವೆ. ಜನತಾಂತ್ರಿಕ ಸಮಾಜ ವಾದದ ಪ್ರತಿಮೆ ನೆಲೆಗೊಳ್ಳುತ್ತವೆ.

ಈ ತತ್ವ – ಚಿಂತನೆಗಳ ಅರ್ಥವಂತಿಕೆಯು ಅವುಗಳ ಪ್ರಾಯೋಗಿಕ ಅನುಷ್ಠಾನದಲ್ಲಿ ವ್ಯಕ್ತಗೊಳ್ಳಬೇಕು. ಈ ದಿಸೆಯಲ್ಲಿ ವಿಶ್ಲೇಷಣೆ – ವೀಕ್ಷಣೆಯ ಕಾರ್ಯತತ್ಪರತೆ ನಿರಂತರವಾಗಿ ಸಾಗಬೇಕೆಂಬುದು ಜಗಜೀವನ್‌ರ ಪ್ರಮುಖ ಕಳಕಳಿ. ಅವರು ತಮ್ಮ ಮಕ್ಕಳು ಅಂತರ್‌ಜಾತಿ ವಿವಾಹವಾಗಲು ಪ್ರೇರೇಪಿಸಿದ್ದರು ಮತ್ತು ಇಂಥ ವಿವಾಹಿತರ ಸಂರಕ್ಷಣೆಗೆ ಮುಂದಾಗುತ್ತಿದ್ದರು. ಆಚಾರ – ವಿಚಾರ, ನಡೆ – ನುಡಿಯಲ್ಲಿ ಹೀಗೆ ಅವರು ಸಾಂಗತ್ಯ ಸಾಧಿಸಿದ್ದರು. ಅಂತರಂಗ – ಬಹಿರಂಗಗಳ ಏಕತೆಯೇ ನಮಗಿಂದು ಬೇಕಾದ ಆದರ್ಶ. ಆದರಿಂದ ಅವರ ಚಿಂತನೆ – ಪ್ರಾಯೋಗಿಕ ಜೀವನ ಅನುಕರಣೀಯ.

ಆರ್ಥಿಕ ವಿಚಾರಧಾರೆ:

ಪ್ರತಿಯೊಬ್ಬ ವ್ಯಕ್ತಿಗೆ ತಿನ್ನಲು ಅನ್ನ, ಉಡಲು ಬಟ್ಟೆ, ವಾಸಿಸಲು ಮನೆ ಮತ್ತು ಮನುಷ್ಯ ಮನುಷ್ಯನಾಗಲು ಪೂರಕವಾದ ಶಿಕ್ಷಣ, ಸಂಸ್ಕೃತಿ ಲಭಿಸಬೇಕೆಂಬ ಅಪೇಕ್ಷೆ ಜಗಜೀವನ್‌ರದು. ಬಂಡವಾಳಶಾಹಿ ಮತ್ತು ಜಮೀನುದಾರಿ ಪದ್ಧತಿಗಳ ಕಡುವಿರೋಧಿಗಳಾದ ರಾಮ್, ತಮ್ಮ ಆರ್ಥಿಕ ವಿಚಾರಧಾರೆಗೆ ಬಳಸಿದ ನೆರಳು ಗಾಂಧಿ – ಉತ್ಪದನಾ ವಿಧಾನಗಳು ಮತ್ತು ಪರಿಕರಗಳ ಮಾಲೀಕತ್ವ ಖಾಸಗೀಕರಣದಿಂದ ಮುಕ್ತಗೊಂಡು ಸಮಾಜೀಕರಣಗೊಳ್ಳಲು ಅಲ್ಲಲ್ಲಿ ಏಳುತ್ತಾ ಬಂದಿರುವ ಅವರ ಚಿಂತನೆಯಲ್ಲಿ ಮಾರ್ಕ್ಸ್‌ರ ವಾಸನೆಯನ್ನು ಕಂಡುಕೊಳ್ಳಬಹುದು. ಗಾಂಧಿ ಮತ್ತು ಮಾರ್ಕ್ಸ್‌ರ ಸಿದ್ಧಾಂತಗಳ ಸಮ್ಮಿಳಿತವೇ ರಾಮ್‌ರ ಆರ್ಥಿಕ ಧೋರಣೆ.

ಮತ್ತೊಂದು ಜಗಜೀವನರ ಆರ್ಥಿಕವಾದ ಸಾಪೇಕ್ಷ ಸಮಾನತೆಯದು. ಇತ್ತೀಚಿನ ರಾಷ್ಟ್ರೀಯ, ಅಂತರರಾಷ್ಟ್ರೀಯ ಆರ್ಥಿಕ – ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸಿದರೂ ನಿರಪೇಕ್ಷ ಅಂದರೆ ನೂರಕ್ಕೆ ನೂರು ಸಮಾನತೆ ಅಸಾಧ್ಯವೆನಿಸುತ್ತದೆ. ಆದಾಯ – ಸಂಪತ್ತಿನಲ್ಲಿರುವ ಎರಡು ತುದಿಗಳ ನಡುವಿನ ಅಸಮಾನತೆ ತೊಡೆಯುವುದಕ್ಕೆ ಅವರ ಅಧಿಕ ಒತ್ತಡ. ರಾಜಧನ ರದ್ಧತಿ, ಭೂ ಸುಧಾರಣಾ ನಿಯಮಗಳು, ಬ್ಯಾಂಕುಗಳ ರಾಷ್ಟ್ರೀಕರಣದಂತಹ ತಮ್ಮಷ್ಟಕ್ಕೆ ಕ್ರಾಂತಿಕಾರಕವೆನಿಸಿರುವ ಕಾರ್ಯಗಳ ಹಿಂದೆ ಜಗಜೀವನ್‌ರ ಬುದ್ಧಿ – ಬಲ ಅಡಗಿತ್ತು. ಕಾರ್ಮಿಕ, ರೈಲ್ವೆ, ಕೃಷಿ, ಸಂಪರ್ಕ ಸಚಿವರಾಗಿದ್ದಾಗ ಅವರು ನಿರ್ವಹಿಸಿರುವ ಕಾರ್ಯಗಳಲ್ಲಿ ಹರಡಿರುವ ವಿಚಾರಧಾರೆ ಇದೇ ಆಗಿದೆ. ದೇಶದ ಆಹಾರದ ಬವಣೆ ತಪ್ಪಿಸಲು ಕೃಷಿಯಲ್ಲಿ ಅಳವಡಿಸಿದ ಹೊಸ – ಹೊಸ ಉತ್ಪಾದನಾ ವಿಧಾನಗಳು ಮತ್ತು ಹಂಚುವಿಕೆಯ ಪ್ರಕ್ರಿಯೆಯಲ್ಲಿ ತಂದ ಬದಲಾವಣೆಗಳು ಅವರು ಆಳವಾಗಿ ನಂಬಿದ್ದ ತತ್ವಗಳಿಗೆ ಎಂಥ ನಿಷ್ಠೆ ತೋರುತ್ತಿದ್ದರೆಂಬುದರ ಅಭಿವ್ಯಕ್ತಿ. ಅವರನ್ನು 'ಹಸಿರು ಕ್ರಾಂತಿ'ಯ ಪ್ರವರ್ತಕರೆಂದೇ ಪರಿಗಣಿಸಲಾಗಿದೆ.

ಜಗಜೀವನ್‌ರಾಮ್ ಪ್ರಾಯೋಗಿಕ ಆರ್ಥಿಕ ತಜ್ಞರು. ವರ್ಣಾಶ್ರಮ – ಜಾತಿ ಪದ್ಧತಿಯೇ ಭಾರತದ ಸರ್ವರೋಗಗಳ ರೋಗಾಣು. ದೇಶದಲ್ಲಿ ಬಿಟ್ಟಿ ಚಾಕರಿ ಅಥವಾ ಒಂದೊಪ್ಪತ್ತಿನ ಹಳಸಿದ ಗಂಜಿಗೆ ಹಗಲು – ರಾತ್ರಿ ಬೆವರು ಸುರಿಸುವ ಪರಿಸ್ಥಿತಿಗೆ ಸಾಮಾಜಿಕ ಅಸಮಾನತೆಯೇ ಬೆನ್ನೆಲುಬು. ಮೇಲ್ಜಾತಿಗಳ ಸುಖಕ್ಕಾಗಿಯೇ ಕೂಲಿ ಇರದೆ ದುಡಿಯುವ ಈ ಬಿಟ್ಟಿ ಚಾಕರಿ ಪದ್ಧತಿ ಜೀತ ಪದ್ಧತಿಗೆ ಜೀವ ನೀಡಿದೆ. ಜೀತ ಪದ್ಧತಿಗೆ ಬಡತನ ಒಂದೇ ಕಾರಣವಲ್ಲ. ಇದಕ್ಕೆ ವರ್ಣಾಶ್ರಮ ಧರ್ಮವು ಹಿನ್ನೆಲೆಯೆಂದು ಜಗಜೀವನ್‌ರು ಹೇಳಿರುವರು. ಇದಕ್ಕೆ ಬೆಂಬಲವಾಗಿ ಅವರು ನೀಡಿರುವ ಜೀವಂತ ಪುರಾವೆ ಜೀತಗಾರರಲ್ಲಿ ಅಧಿಕ ಸಂಖ್ಯೆಯ ಜನರು ದಲಿತರೇ ಆಗಿರುವರು. ಅದರಿಂದ ಜೀತ ನಿರ್ಮೂಲನೆ ಜಾತಿ ಪದ್ಧತಿಯ

ನಿರ್ಮೂಲನೆಯು ಸಾಮಾಜಿಕ – ಆರ್ಥಿಕ ಸಮಾನತೆಯನ್ನು ಅವಲಂಬಿಸಿದೆ ಯೆಂದು ಗುರುತಿಸಿದ್ದಾರೆ.

ಕಾರ್ಮಿಕ ಸಚಿವರಾಗಿದ್ದಾಗ ರೂಪಿಸಿದ್ದ ಕನಿಷ್ಟ ವೇತನ ನಿಯಮಾ ವಳಿಯ ಅಂತರಂಗ ಗ್ರಾಮೀಣ ಪ್ರದೇಶಗಳ ಕೃಷಿ ಕಾರ್ಮಿಕರ ಜೀತಗಾರರ ವಿಮುಕ್ತಿಯ ಕಡೆಗೆ ಇಟ್ಟ ಒಂದು ದಿಟ್ಟ ಹೆಜ್ಜೆ. ಜಗಜೀವನ್‌ರು ಬಿಟ್ಟಿ ಚಾಕರಿಯನ್ನು ತೊಲಗಿಸಲು ಕಂಡುಕೊಂಡ ಮಾರ್ಗ 'ಸಹಕಾರಿ ಸಂಘ'ಗಳ ರಚನೆ. ಭೂಹೀನ ರೈತರು ಮತ್ತು ಸಣ್ಣ ರೈತರು ಈ ಸಂಘಗಳ ಉಸಿರಾಗಬೇಕೆಂಬುದು ಅವರ ಅಭಿಲಾಷೆ. ಆದರೆ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳಲ್ಲಿ ನುಸುಳಿರುವ ಮೇಲ್ಜಾತಿ – ಮೇಲ್ವರ್ಗದ ಜನರ ಹಾವಳಿ ಬಗ್ಗೆ ಅವರಿಗೆ ಪರಿಪೂರ್ಣ ಎಚ್ಚರಿಕೆ. ಇದರಿಂದ ಅವರು ಈ ಸಂಘಗಳು ಬಲಾಢ್ಯ ಕೋಮಿನ ಜನರ ಕಪಿಮುಷ್ಠಿಯಿಂದ ಪಾರಾಗಿ ದಲಿತರ – ಬಡವರ ಸಕ್ರಿಯ ಪಾಲ್ಗೊಳ್ಳುವಿಕೆಯ ಪರಿಸರ ನಿರ್ಮಾಣಕ್ಕೆ ಹೆಣಗಿದರು.

ಸ್ವಾತಂತ್ರ್ಯ ಶೋಷಣಾಮುಕ್ತ ಸಮಾಜ ರಚನೆಗೆ ರಹದಾರಿ ಆಗುತ್ತದೆಂದು ಆಶಿಸಿದ್ದ ರಾಮ್‌ರಿಗೆ ಅಲ್ಪ ಕಾಲಾವಧಿಯಲ್ಲೇ ಸ್ವಾತಂತ್ರ್ಯ ಯಾರ ಬಾಗಿಲನ್ನು ಕಾಯುತ್ತಿದೆ ಎಂಬುದನ್ನು ಪರಿಗ್ರಹಿಸಿದರು. "ಸ್ವಾತಂತ್ರ್ಯ ಅತಿ ದೊಡ್ಡ ಸಾಮಾಜಿಕ ಪರಿವರ್ತನೆ ತರುತ್ತದೆಂದು ನಾನು ಬಗೆದಿದ್ದೆ. ಆದರೆ ಆ ಕ್ರಾಂತಿಯು ಅರಮನೆಗಳಲ್ಲಿ ಮಾತ್ರ ಮಿಣುಕಿತು. ಕುರ್ಚಿಯ ಮೇಲಿನ ಜನ ಬದಲಾದರು ಮತ್ತು ಅವರ ಹೆಸರುಗಳು ಬದಲಾದವು." ಅತೀವ ನೋವಿನ ದುಗುಡತೆಯನ್ನು ಹೊರಚೆಲ್ಲುವ ಈ ಮಾತುಗಳ ಬೆನ್ನಲ್ಲೇ ರಾಮ್‌ರ ಮತ್ತು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಅವಲೋಕಿಸುತ್ತಾ ದೇಶದ ಆರ್ಥಿಕ ರಂಗಕ್ಕೆ ಮುಕುರಿದ ರೋಗವನ್ನು ಗ್ರಹಿಸಬಹುದು. "ಸ್ವಾತಂತ್ರ್ಯದ ಅಭಿವೃದ್ಧಿ ಫಲ ಕೈ ಬೆರಳೆಣಿಕೆಯ ಶ್ರೀಮಂತರ ಖಜಾನೆ ತುಂಬಿಸಿದೆ. ಶೇಕಡಾ ೮೦ ಪರಿಶ್ರಮಜೀವಿಗಳು ಶೇಕಡ

೨೦ ಶ್ರೀಮಂತರಲ್ಲಿ ಭಿಕ್ಷೆ ಬೇಡುವ ಪರಿಸ್ಥಿತಿಯಲ್ಲಿದ್ದಾರೆ. ಯೋಜನೆಗಳ ಸಂಪತ್ತಿನೋತ್ಪತ್ತಿ ಕೆಲವೇ ಜನರಲ್ಲಿ ಕೇಂದ್ರೀಕೃತವಾಗಿದೆ. ಕೈಗಾರಿಕೋದ್ಯಮಿಗಳ ಮತ್ತು ವ್ಯಾಪಾರೋದ್ಯಮಿಗಳ ಜೇಬಿನಲ್ಲಿ ಕೋಟಿಗಟ್ಟಲೆ ಹಣ ಕೊಳೆಯುತ್ತಿದೆ. ಇದರಿಂದ ಅವರು ಏಕಸ್ವಾಮ್ಯತೆಗೆ ಹಪಹಪಿಸುತ್ತಾರೆ. ಅಲ್ಲದೆ ಈ ಏಕಸ್ವಾಮ್ಯ ವ್ಯಕ್ತಿಗಳು ತೆರೆದ ಆರ್ಥಿಕ ವ್ಯವಸ್ಥೆಯ ಹರಿಕಾರರು. ಸಮಾಜ ವಾದಕ್ಕೆ ಮೂಗು ಮುರಿಯುವ ಈ ಜನ ಖಾಸಗಿ ಒಡೆತನಕ್ಕಾಗಿ ಜೀವವನ್ನೇ ಬಲಿಕೊಡಲು ಸಿದ್ಧ.''

ಸ್ವತಂತ್ರ ಭಾರತದ ಆರ್ಥಿಕ ವಲಯದ ಹೂರಣವೇ ಇಲ್ಲಿ ದೃಗ್ಗೋಚಾರ. ರಾಮ್‌ರ ಹೇಳಿಕೆಗಳು ವಿಶ್ಲೇಷಣೆಯನ್ನೇ ನಿರಾಕರಿಸುತ್ತವೆ. ಖಚಿತ ಮತ್ತು ನೇರ ನುಡಿಗಳಲ್ಲಿ ದೇಶದ ಆರ್ಥಿಕ ರಂಗದ ಆಕ್ಟೋಪಸ್ ಹಿಡಿತವನ್ನು ಅನಾವರಣಗೊಳಿಸಿರುವರು.

ಮುಕ್ತ ಮಾರುಕಟ್ಟೆ, ಆರ್ಥಿಕ ನೀತಿಗಳು, ಏಕಸ್ವಾಮ್ಯ ಮತ್ತು ಬಂಡವಾಳಶಾಹಿ ವರ್ಗಗಳಿಗೆ ಸ್ವರ್ಗ. ಕಾರ್ಮಿಕರಿಗೆ – ಬಡವರಿಗೆ ನರಕ. ಇದನ್ನು ತಪ್ಪಿಸಲು ಜಗಜೀವನ್‌ರು ವಿಕೇಂದ್ರೀಕೃತ ಆರ್ಥಿಕ ತತ್ವಗಳ ಕಡೆಗೆ ತಮ್ಮ ಒಲವು ತೋರಿಸಿದರು. ಆಗ ಸ್ವರ್ಗ ಮತ್ತು ನರಕ ಸಮವಾಗಿ ಎಲ್ಲರಿಗೂ ವಿತರಣೆಯಾಗುತ್ತದೆ.

ನೆಹರೂರವರ ಔದ್ಯೋಗೀಕರಣ ನಿಯಮ ದೇಶವನ್ನು ಮುನ್ನಡೆಸುವಲ್ಲಿ ಮುಗ್ಗರಿಸಿತು. ಬಡವ – ಬಲ್ಲಿದರ ಮಧ್ಯದ ಭಿನ್ನತೆಯನ್ನು ಅಧಿಕಗೊಳಿಸಿತು ಇದು. ಜನಶಕ್ತಿಯ ಬಳಕೆಗೆ ದೊಡ್ಡ ಪ್ರಮಣದ ಉದ್ಯಮಗಳು ಸೂಕ್ತವಲ್ಲ ಎಂದು ಬಗೆದ ಜಗಜೀವನ್‌ರು ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಹಾಗೂ ಕೃಷಿಪ್ರಧಾನ ಉದ್ದಿಮೆಗಳನ್ನು ಅಪ್ಪಿಕೊಂಡರು.

ಉದ್ಯೋಗ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಿಸಲು ಒತ್ತಾಯಿಸಿರುವ ರಾಮ್ ಅವರು ಕೃಷಿ ರಂಗದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲು ಇಚ್ಛೆಸಿದರು. ತತ್ವ ಮತ್ತು ಪ್ರಯೋಗಗಳ ನಡುವಿನ

ವ್ಯತ್ಯಾಸಕ್ಕೆ ಮುದುಡುತ್ತಿದ್ದ ಜಗಜೀವನ್‌ರು ಅವರ ಬಗ್ಗೆಯೇ ಹೆಚ್ಚು ಹೆಚ್ಚು ವ್ಯಾಕುಲಗೊಳ್ಳುತ್ತಿದ್ದರು. ಕಾನೂನುಗಳ ಕಣ್ಣುಗಳಲ್ಲಿ ಜಮೀನುದಾರಿ ಪದ್ಧತಿ ರದ್ದಾಗಿದೆ. ಆದರೆ ವಾಸ್ತವಿಕ ಬದುಕಿನಲ್ಲಿ ಅದು ಇನ್ನೂ ಜೀವಂತವಾಗಿದೆ. ಜಾಗೀರುದಾರಿ ಮನೋಪ್ರವೃತ್ತಿ ಇಂದು ಮುಂದುವರಿಯುತ್ತಿದೆ. ಭೂಮಿಯ ಒಡೆಯನಾಗುವುದು ಪ್ರಸ್ತುತದಲ್ಲೂ ಗೌರವ – ಪ್ರತಿಷ್ಠೆಯ ಪ್ರಶ್ನೆ. ಈ ಕಾರಣದಿಂದಲೇ ಭೂಮಿಯ ಮೇಲೆ ಬೆವರು ಸುರಿಸಿದ ವ್ಯಕ್ತಿಗಳು ತಮ್ಮ ಹೆಸರುಗಳಲ್ಲಿ ಭೂಮಿಯನ್ನು ಹೊಂದಿರುತ್ತಾರೆ. ಕೇವಲ ಭೂ ಒಡೆತನ ಪಡೆಯುವುದು ಯಾವ ನ್ಯಾಯವಲ್ಲ. ಉತ್ಪಾದನೆ ಹೆಚ್ಚಿಸಲು ಮತ್ತು ಸಾಮಾಜಿಕ ನ್ಯಾಯ ಕರಲು ಗೌರವಕ್ಕಾಗಿಯೇ ಭೂಮಿ ಹೊಂದುವುದು ಅಡ್ಡಗೋಡೆ.

ಇದರಿಂದ ಭೂಮಿಯನ್ನು ಪುನರ್ ವಿಂಗಡಿಸಲು ಜಗಜೀವನ್‌ರ ಅಪೇಕ್ಷೆ. ಉಳುವವನೇ ಭೂಮಿಯ ಒಡೆಯ ನೀತಿ – ನಿಯಮ ಕೃಷಿ ರಂಗದ ಈ ತೊಂದರೆಗಳನ್ನು ತಪ್ಪಿಸಲು ಇರುವ ಏಕೈಕ ದಾರಿ. ಭೂ ಸುಧಾರಣಾ ಕಾನೂನುಗಳನ್ನು ಬಿಗಿಯಾಗಿ ಅನುಷ್ಠಾನಕ್ಕೆ ತರಬೇಕು. ಆಗ ಮಾತ್ರ ಜನರಲ್ಲಿ ಮನೆಮಾಡಿರುವ ಉಪೇಕ್ಷಿತ ಮನಃಸ್ಥಿತಿಯನ್ನು ತೊಳೆಯಲು ಸಾಧ್ಯ. ಇದಕ್ಕೆ ಪೂರ್ವಭಾವಿಯಾಗಿ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಪುನರ್ ಸಂಘಟಿಸುವುದು ಉತ್ತಮ. ಹೊಸ ವಾತವರಣದಲ್ಲಿ ಆಸೆ ಮತ್ತು ದುಡಿಯುವ ಅಭೀಪ್ಸೆಗಳನ್ನು ಗ್ರಾಮೀಣ ಜನರಲ್ಲಿ ತುಂಬಬಹುದು.

ಭೂ ಸುಧಾರಣೆಯ ತಾತ್ವಿಕ ಅಂಶಗಳು ಸಮಾನತೆಯ ಸನ್ನೆಗೋಲೆಂದೇ ತೋರಿರುವ ರಾಮ್‌ರು ಅದರ ಜಾರಿಯಲ್ಲಿ ತಲೆದೋರಿರುವ ಅಡ್ಡಿ – ಆತಂಕಗಳನ್ನು ಗುರುತಿಸಿದರು. ವಿವಿಧ ರಾಜ್ಯಗಳಲ್ಲಿ ವಿವಿಧ ಪ್ರಮಾಣದ ಭೂಮಿತಿಯನ್ನು ಅಳವಡಿಸಿಕೊಳ್ಳುವುದರ ಮುಖೇನ ಮೊದಲ ಹೆಜ್ಜೆಯಲ್ಲೇ ಇದಕ್ಕೆ ಭಾರಿ ಪೆಟ್ಟು ಕೊಡಲಾಯಿತು. ಹಾಳುಬಿದ್ದ ಮತ್ತು ಬಂಜರು ಭೂಮಿಯ ಹಂಚಿಕೆಯ ಕಾರ್ಯಗಳು ನಿರ್ಧರಿತ ಪರಿಣಾಮ ಬೀರಲಿಲ್ಲ.

'ಮಿತಾಕ್ಷರ', ದಯಾಬಾಗ್, ಅಳಿಯ ಸಂತಾನ ಮುಂತಾದ ವಿವಿಧ ರೂಪದ ಕೌಟುಂಬಿಕ ಪದ್ಧತಿಗಳ ನಿಯಮಗಳು ಹಿಂದೂ ಸಾಮಾಜಿಕ ವ್ಯವಸ್ಥೆಯನ್ನು ಆವರಿಸಿದೆ. ಸಮಸ್ತ ಭಾರತಕ್ಕೆ ಒಪ್ಪಿತವಾಗುವ – ಅಳವಡಿಸಿಕೊಳ್ಳಬಹುದಾದ ಒಂದು ನಿರ್ದಿಷ್ಟ, ನಿಖರ ಕೌಟುಂಬಿಕ ಕಾನೂನು ಇಲ್ಲ. ಕುಟುಂಬದ ವಿವರಣೆ ಮತ್ತು ವ್ಯಾಖ್ಯೆ ಹೀಗೆ ಅಸ್ಪಷ್ಟವಾಗಿದೆ. ಇದರಿಂದ ಭೂ ಸುಧಾರಣಾ ಕಾರ್ಯಾಚರಣೆಯಲ್ಲಿ ಅನೇಕ ಸಂದು ಗೊಂದುಗಳಿಂದ ಭೂ ಮಾಲೀಕರು ನುಸುಳುವರು. ಸಹಜವಾಗಿ ಅಧಿಕ ಭೂಮಿ ಮರು ಹಂಚಿಕೆಗೆ ಸಿಗುವುದು ವಿರಳ. 'ಕುಟುಂಬ' ಪದಕ್ಕೆ ಪ್ರಪ್ರಥಮವಾಗಿ ಒಂದು ಸ್ಪಷ್ಟ ಅರ್ಥ ಒದಗಿಸಬೇಕೆಂದು ರಾಮ್‌ರು ಹೇಳಿದರು. ಹಾಗಾದಾಗ ಮಾತ್ರವೇ ಭೂ ಸುಧಾರಣೆ ಅರ್ಥಪೂರ್ಣವೆನಿಸುತ್ತದೆ. ಭೂಹೀನರು ಮತ್ತು ಕೃಷಿ ಕಾರ್ಮಿಕರು ತಮ್ಮ ಹೆಸರುಗಳಲ್ಲಿ ಭೂಮಿಯನ್ನು ಹೊಂದುವರು.

"ಒಬ್ಬರಿಗೆ ಒಂದೇ ಜೀವನ ಮಾರ್ಗ" ಮತ್ತು 'ಒಂದು ಕುಟುಂಬ ಒಂದು ಸಂಪನ್ಮೂಲ' ಎನ್ನುವ ಆರ್ಥಿಕ ಸೂತ್ರಗಳನ್ನು ಜಗಜೀವನ್‌ರು ಹೊಸೆದರು. ಭೂ ಸುಧಾರಣೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಈ ತತ್ವಗಳು ಸ್ವಾಗತಾರ್ಹ. ಆದಾಯ – ಸಂಪತ್ತಿನ ಕೇಂದ್ರೀಕರಣ ಮತ್ತು ಮಾನಸಿಕ ಜಮೀನ್ದಾರಿ ಪದ್ಧತಿಗೆ ಇರುವ ಪ್ರೇರಕ ಶಕ್ತಿ, ಒಬ್ಬ ಅಥವಾ ಒಂದೇ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಆರ್ಥಿಕ ಮೂಲಗಳು ಕೇಂದ್ರೀಕೃತವಾಗಿರುವುದು. ಸರ್ಕಾರಿ ಅಥವಾ ಖಾಸಗಿ ಉದ್ಯೋಗದಲ್ಲಿರುವ ವ್ಯಕ್ತಿಯೊಬ್ಬ ಭೂ ಮಾಲೀಕನಾಗುವುದು ದೇಶದ ಅಭಿವೃದ್ಧಿಗೆ ತಗಲುವ ಅರ್ಬುದ ರೋಗ. ಉತ್ಪಾದನೆ ಮತ್ತು ಹಂಚುವಿಕೆಯ ಪರಿಕರಗಳು ಸಮವಾಗಿ ಎಲ್ಲರಿಗೂ ವಿತರಿಸಲ್ಪಡಬೇಕು.

ಈಗಾಗಲೇ ಒಂದು ಆದಾಯ ಮೂಲಕ್ಕೆ ಒಡೆತನವಿರುವ ಯಾವುದೇ ಕುಟುಂಬ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರಗಳ ಹಾಗೂ

ಸರ್ಕಾರದ ಉದ್ಯೋಗಕ್ಕೆ ಅನರ್ಹವಾಗುವುದು ಉತ್ತಮ ಎಂಬುದು ರಾಮ್‌ರ ಸಲಹೆ. ಸ್ವಯಂ ಉದ್ಯೋಗದ ಧನಸಹಾಯಕ್ಕೂ ಇದೇ ನಿಯಮವನ್ನು ಅಳವಡಿಸಲು ಅವರು ತಿಳಿಸಿದ್ದಾರೆ. ಹೀಗೆ ಮಾಡಿದ್ದಾದರೆ ದುಡಿಮೆಗೆ ತಕ್ಕ ಫಲ ಸುಲಭವಾಗಿ ದೊರೆಯುತ್ತದೆ. ಇನ್ನೊಬ್ಬರ ಅನ್ನದ ಮಾರ್ಗವನ್ನು ಕಸಿಯುವ ವಂಚನೆಯೂ ತಪ್ಪುತ್ತದೆ. ಆಗ ನಾಡಿನ ಸಮಸ್ತ ಜನರೂ ಕನಿಷ್ಟ ಪ್ರಮಾಣದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವರು. ಶೋಷಕರ ಅಟ್ಟಹಾಸವೂ ಸ್ತಬ್ಧಗೊಳ್ಳುತ್ತದೆ. ಬಡವ – ಬಲ್ಲಿದರ ನಡುವಿನ ಭೇದ – ಭಾವಗಳ ಸೆಳೆತ ಸಡಿಲವಾಗುತ್ತದೆ. ದಲಿತರು ತಮ್ಮ ಸಾಮಾಜಿಕ ಹಕ್ಕುಗಳನ್ನು ಚಲಾಯಿಸಲು ಶಕ್ತಿ ಸಂಚಯಿಸಿಕೊಳ್ಳುವರು.

ಉತ್ಪಾದನೆ ಮತ್ತು ವಿತರಣೆ ಒಂದೇ ನಾಣ್ಯದ ಎರಡು ಮುಖಗಳು. ಈ ಎರಡರ ಪ್ರಕ್ರಿಯೆಯ ಮಾಲೀಕತ್ವ ಖಾಸಗಿಯವರ ಕೈಗಳಲ್ಲಿ ಬಿಡುವುದು ಅಪಾಯಕಾರಿ. ಅದರಿಂದ ಅವುಗಳ ಹಿಡಿತ ಸಮಾಜದ ವಶಕ್ಕೆ ತರಬೇಕು ಎಂದು ಹೇಳಿರುವ ಜಗಜೀವನ್‌ರು "ಉತ್ಪಾದನೆಯ ವಿಧಾನವು ವಿತರಣೆಯ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ಅದರಿಂದ ಹೊಸ ಹೊಸ ಉತ್ಪಾದನಾ ವಿಧಾನಗಳನ್ನು ಅಳವಡಿಸಬೇಕು" ಎಂಬುದಾಗಿಯೂ ಒತ್ತಾಯಿಸಿದ್ದಾರೆ.

ಸ್ವಾತಂತ್ರ್ಯದ ಎಳೆ ಬಿಸಿಲಿನ ದಿನಗಳಲ್ಲಿ ರಾಷ್ಟ್ರದ ಪ್ರಮುಖ ನಾಯಕರ ತಲೆಗಳಲ್ಲಿ ನಡೆಯುತ್ತಿದ್ದ ಒಂದು ಅತ್ಯುನ್ನತ ಚಿಂತನ ಮಂಥನವನ್ನು ಹೊರಗೆಡವಿರುವ ಜಗಜೀವನ್‌ರು ಅದೊಂದು ಮೂರ್ತ ಸ್ವರೂಪ ತಳೆಯದಿದ್ದಕ್ಕಾಗಿ ವ್ಯಥೆಪಟ್ಟಿದ್ದಾರೆ. ಅವರ ಮಾತುಗಳು "ಸ್ವಲ್ಪ ಸಮಯಕ್ಕೆ ಮೊದಲು ಎಲ್ಲಾ ಭೂಮಿಯನ್ನು ರಾಷ್ಟ್ರೀಕರಣಗೊಳಿಸಲು ಮತ್ತು ಭೂಮಿಯನ್ನು ನಿಜವಾಗಿ ವ್ಯವಸಾಯದ ಕಾರ್ಯದಲ್ಲಿ ತೊಡಗಿರುವ ಕೃಷಿ ಕಾರ್ಮಿಕರಿಗೆ ಹಂಚುವ ವಿಚಾರ ಇತ್ತು. ದುರಾದೃಷ್ಟ ಈ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲ."

ಈ ಪ್ರಮುಖ ಮಾಹಿತಿಯನ್ನು ನಮಗೆ ಪ್ರಕಾಶಿಸುತ್ತಲೇ ಜಗಜೀವನ್‌ರು ತಮ್ಮ ಸ್ಪಷ್ಟ ಆರ್ಥಿಕ ಧೋರಣೆಯ ಶಿಲ್ಪವನ್ನು ಕಡೆದು ನಿಲ್ಲಿಸುವರು. ಭಾರತದ ಜೀವ ಗ್ರಾಮಗಳು. ಅದರ ರಕ್ತ, ನರ – ನಾಡಿಗಳು ಭೂಮಿ ಗ್ರಾಮಗಳ ಸಾಂಸ್ಕೃತಿಕ – ರಾಜಕೀಯ ವಲಯಗಳು ಭೂಮಿಯ ಸುತ್ತ ಸುತ್ತುತ್ತಿರುತ್ತವೆ. ಭೂಮಿ ಗುರುತ್ವಾಕರ್ಷಣ ಕೇಂದ್ರ. ನಾಡಿನ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಚಟುವಟಿಕೆಗಳು 'ಭೂಮಿ'ಯ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತವೆ. ಈ ಕಾರಣ ಕೃಷಿ ಇಂದಿನ ಆಧುನಿಕ ಯುಗದಲ್ಲಿ ವ್ಯವಹಾರಿಕವಾಗಿ ಸೂಕ್ತವಲ್ಲ ಎನಿಸಿದರೂ ದೇಶದ ಗ್ರಾಮೀಣ ಆರ್ಥಿಕ ಸ್ವರೂಪವನ್ನು ಅಷ್ಟು ಸರಳ ರೀತಿಯಲ್ಲಿ ಪರಿವರ್ತಿಸಲು ಸಾಧ್ಯವಿಲ್ಲ. ಭಾರತದ ಉತ್ಪಾದನಾ ಸಂಬಂಧಗಳಿಗೂ ಹಾಗೂ ಸಾಂಸ್ಕೃತಿಕ ಕ್ರಿಯೆಗಳಿಗೂ ಇರುವ ಅವಿನಾ ಸಂಬಂಧದ ಸೂಕ್ಷ್ಮಾತಿ ಸೂಕ್ಷ್ಮಗಳ ಎಳೆಗಳನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಂಡವರಲ್ಲಿ ಮೊಟ್ಟಮೊದಲಿಗರು ಗಾಂಧಿ, ಅಂಬೇಡ್ಕರ್ ಮತ್ತು ಜಗಜೀವನ್‌ರಾಮ್ ನಿಲ್ಲುತ್ತಾರೆಂದರೆ ಅದು ಅತಿಶಯೋಕ್ತಿಯಲ್ಲ.

ರಾಜಕೀಯ ವಿಚಾರಧಾರೆ :

ಮಾನವ ತನ್ನ ವಿಕಾಸದ ವಿವಿಧ ಹಂತಗಳಲ್ಲಿ ವಿವಿಧ ಬಗೆಯ ರಾಜಕೀಯ ಅವಸ್ಥೆಗಳನ್ನು ಅನುಭವಿಸಿದ್ದಾನೆ. ಬುಡಗಟ್ಟಿನಾವಸ್ಥೆ, ಪಾಳೇಗಾರರಾವಸ್ಥೆ, ರಾಜ್ಯಾವಸ್ಥೆ, ಸಾಮ್ರಾಜ್ಯಾವಸ್ಥೆ ಮತ್ತು ಗಣತಂತ್ರಾವಸ್ಥೆ. ಜಗತ್ತಿನ ಬಹುತೇಕ ರಾಷ್ಟ್ರಗಳ ರಾಜಕೀಯ ವಿಕಾಸದ ಹಂತಗಳು ಸ್ವಲ್ಪ ಹೆಚ್ಚೂ ಕಡಿಮೆ ಹೀಗೆ ಅನುಕ್ರಮವಾಗಿ ಸಾಗಿದೆ. ಆದರೆ ನಮ್ಮ ದೇಶದ್ದು ಹಾಗಾಗಿಲ್ಲ. ನಮ್ಮ ಸರ್ವ ಕ್ಷೇತ್ರಗಳ ಜುಟ್ಟು ಧಾರ್ಮಿಕ ಸಿದ್ಧಾಂತ – ತತ್ವಗಳಲ್ಲಿ ಅಡಗಿದೆ. ಭಾರತದ ಸುದೀರ್ಘ ಚರಿತ್ರೆಯ ಅಂತರ್ಮುಖ ವೈದಿಕ –ಅವೈದಿಕ ವಿಚಾರಧಾರೆಗಳ ಸಂಘರ್ಷದ ಮಡಿಲು. ಆದರಿಂದ

ಧಾರ್ಮಿಕ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಗಳ ನಡುವೆ ನಿಕಟ ಸಂಬಂಧ.

ಇಂದಿನ ಸಂಸದೀಯ ಪ್ರಜಾಪ್ರಭುತ್ವ ಭಾರತಕ್ಕೆ ಹೊಸದಲ್ಲ. ಹಿಂದಿನಿಂದಲೂ ಅದೊಂದು ನಮ್ಮ ಪರಂಪರೆಯ ಭಾಗ. 'ಬುದ್ಧಿಸ್ಟ್ ಭಾರತ' ಪುಸ್ತಕದಲ್ಲಿ ರೈಸ್ ಡೇವಿಟರು ಬುದ್ಧನ ಕಾಲದಲ್ಲಿ ಅನೇಕ ಗಣತಂತ್ರ ವ್ಯವಸ್ಥೆಯ ಭೂಭಾಗಗಳು ಭಾರತದಲ್ಲಿ ಇದ್ದವೆಂದು ದಾಖಲಿಸಿದ್ದಾರೆ. ಜಸ್ವಾಲ್‌ರು, 'ಹಿಂದೂ ಪಾಲಿಟಿ' ಕೃತಿಯಲ್ಲಿ ಆಧುನಿಕ ಕಾಲದ ಜನತಂತ್ರಕ್ಕೂ; ಪ್ರಾಚೀನ ಭಾರತದ ಜನತಂತ್ರಕ್ಕೂ ಯಾವುದೇ ವ್ಯತ್ಯಾಸ ಇರಲಿಲ್ಲವೆಂದು ತೋರಿಸಿದ್ದಾರೆ. ಅನೇಕ ದಾಖಲೆ, ಪುರಾವೆಗಳಿಂದ ಅವರ ವಾದವನ್ನು ಸಮರ್ಥಿಸಿರುವರು. 'ಬುದ್ಧ ಮತ್ತು ಆತನ ಧರ್ಮ' ಹೊತ್ತಿಗೆಯಲ್ಲಿ ಅಂಬೇಡ್ಕರ್ ಕೂಡ ಪ್ರಾಚೀನ ಭಾರತ ಅದರಲ್ಲೂ ವಿಶೇಷವಾಗಿ ಬುದ್ಧನ ಕಾಲದ ಭಾರತ ಜನತಂತ್ರ ವ್ಯವಸ್ಥೆಗೆ ಪ್ರಸಿದ್ಧಿ ಎಂದು ತಿಳಿದಿರುವರು. ದುರಾದೃಷ್ಟ ಇಂಥ ಅದ್ಭುತ ಪ್ರತಿಭೆಯ, ಭಾರತದ ರಾಜಕೀಯ ವ್ಯವಸ್ಥೆಯ ವಿಕಾಸವು ವೈದಿಕ ಸಂಸ್ಕೃತಿಯ ಮೇಲುಗೈಯಿಂದ ಸೊರಗಿತು.

ಜನತಾಂತ್ರಿಕ ವ್ಯವಸ್ಥೆ ಮಾನವ ಸರ್ವಾಂಗೀಣ ಬೆಳವಣಿಗೆಗೆ ಸದೃಢ, ಅರ್ಥಪೂರ್ಣ ಮತ್ತು ಸಂಗತವೆನಿಸಿರುವ ರಾಜಕೀಯ ವ್ಯವಸ್ಥೆ ಎಂಬುದು ರಾಜಕೀಯ ತಜ್ಞರ ಮತ್ತು ಸಾಮಾಜಿಕ ಚಿಂತಕರ ಅಭಿಮತ. ಆದರೆ ಜನತಂತ್ರದ ಯಶಸ್ಸಿಗೆ ಒಂದು ದೇಶದ ಸಮಸ್ತ ಜನವರ್ಗಗಳು ಭಾಗವಹಿಸುವುದು ಅಗತ್ಯ. ವಿವಿಧ ಭಾಷೆ, ಮತ, ಧರ್ಮ, ಜಾತಿ–ಉಪಜಾತಿಗಳ ಆಗೇವು ಭಾರತ. ಈ ಎಲ್ಲ ಆಯಾಮಗಳು ಭಿನ್ನ–ಭಿನ್ನ ವರ್ಗ–ಪ್ರಭೇದಗಳನ್ನು ಸೃಷ್ಟಿಸಿವೆ.

ಮೇಲ್ಜಾತಿ – ಮೇಲ್ವರ್ಗ ಮತ್ತು ಕೆಳಜಾತಿ – ಕೆಳವರ್ಗ – ಇವುಗಳ ಪಾತ್ರ ಸಾಮಾಜಿಕ ಬದುಕಿನ ಪ್ರತಿಯೊಂದು ಚಟುವಟಿಕೆಯಲ್ಲಿ

ಕಣ್ಣಿಗೆ ರಾಚುತ್ತವೆ. ವರ್ಗ ಮತ್ತು ಜಾತಿಗಳ ಲಕ್ಷಣ ವಿರುದ್ಧ ದಿಕ್ಕಿನವು. ವರ್ಗ ಚಲನಶೀಲ, ಜಾತಿ ಚಲನರಹಿತ. ಒಂದು ಮತ್ತೊಂದಕ್ಕೆ ಹಾಯುತ್ತವೆ. ಇಂಥೆಡೆ ಜನತಂತ್ರದ ನಡಿಗೆ ಸರ್ಕಸ್ ತಂತಿಯದು.

ಜನತಂತ್ರ ಇದರಿಂದ ಕೆಲವು ಪೂರ್ವ ನಿಬಂಧನೆಗಳನ್ನು ಬಯಸುತ್ತದೆ. ಸಾಮಾಜಿಕ – ಆರ್ಥಿಕ ವಲಯಗಳು ಸಮಾನವಾಗಿರಬೇಕು. ಸಮಾಜದ ಪ್ರತಿ ವ್ಯಕ್ತಿಯ ನಡೆವಳಿಕೆ ಮುಕ್ತವಾಗಿರಬೇಕು. ಸ್ವಾತಂತ್ರ್ಯ, ಸಮಾನತೆ, ಸೋದರ ಭಾವನೆಗಳು ವ್ಯವಸ್ಥೆಯ ಉಸಿರಾಗಬೇಕು. ಯಾರೂ ಯಾರ ಭಯ–ಭೀತಿಯ ನೆರಳಲ್ಲಿ ಜೀವಿಸಬಾರದು. ಈ ಬಗೆಯ ಮುಕ್ತ ವಾತಾವರಣ ಜನತಂತ್ರಕ್ಕೆ ಅಡಿಪಾಯ. ಇಲ್ಲದಿದ್ದರೆ ಪ್ರಜಾಪ್ರಭುತ್ವ ಒಂದು ಪರಿಹಾಸ್ಯ.

ಜಗಜೀವನ್‌ರಾಮ್ ಜನತಂತ್ರಕ್ಕೆ ಕಂಕಣಬದ್ಧರು. ಅವರ ಚಿಂತನೆಗಳು ಈ ದಿಕ್ಕನಲ್ಲಿ ಸ್ಫುಟಗೊಂಡಿವೆ. ಕಾರಣ, "ಜನತಾಂತ್ರಿಕ ವ್ಯವಸ್ಥೆ ಬಲಾಢ್ಯವಾಗಲು ನಾಡಿನ ಸಮಸ್ತ ಜನರೂ ಅದರಲ್ಲಿ ಪಾಲ್ಗೊಳ್ಳಬೇಕು. ಆಳುವ ಮತ್ತು ಅಧೀನ – ಎರಡು ವರ್ಗಗಳು ಜನತಂತ್ರಕ್ಕೆ ಮಾರಕ" ಎಂಬುದು ಅವರ ಧ್ಯಾನ. ಈ ಪರಿಸ್ಥಿತಿ ಮುಂದುವರಿಸಿಕೊಂಡು ಹೋಗುವ ಯಾವುದೇ ದೇಶದಲ್ಲಿ ಪ್ರಜಾಪ್ರಭುತ್ವ ನಿರಂತರ ಅಸ್ತಿತ್ವ ಪಡೆದಿರುತ್ತದೆ ಎಂಬುದು ಕನಸಿನ ಮಾತು. ಈ ಹಿನ್ನೆಲೆಯಲ್ಲಿ ಜನತಂತ್ರದ ಉಳುವಿಗೆ ಬಡವ – ಬಲ್ಲಿದ, ಮೇಲು – ಕೀಳು ಭಿನ್ನತೆಗಳಿಗೆ ತೀವ್ರ ಸರ್ಜರಿ ಅನಿವಾರ್ಯ. ಅದೇ ಬಗೆಯಲ್ಲಿ ಪಟ್ಟಭದ್ರ ಹಿತಾಸಕ್ತರ ಮತ್ತು ಯಥಾಸ್ಥಿತಿ ವಾದಿಗಳ ಭದ್ರಕೋಟೆಗಳನ್ನು ಛಿದ್ರಗೊಳಿಸಿ ವ್ಯವಸ್ಥೆಯೊಳಗೆ ಸಮಾನತೆಯ ಗಾಳಿ – ಬೆಳಕು ತುಂಬಲು ಜಗಜೀವನ್ ತವಕ.

ಭಾರತದ ರಾಜಕೀಯ ವ್ಯವಸ್ಥೆ ಜನತಂತ್ರ, ಸಮಾಜವಾದ ಮತ್ತು ಸರ್ವಧರ್ಮ ಸಮಾನ ಮನೋಭಾವದ ಸಂಗಮಗಳಾಗಬೇಕೆಂಬ ಅಭಿಲಾಷೆ ಜಗಜೀವನ್‌ರದು. ಸಮಾಜವಾದ ಮತ್ತು ಜನತಂತ್ರ ಒಟ್ಟೊಟ್ಟಿಗೆ ಸಾಗಬೇಕಾದ

ದೀಪಗಳು. ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಜನತಂತ್ರ ಮಾರ್ಗ, ಸಮಾಜವಾದ ಧ್ಯೇಯ ಎಂದು ಗೆರೆ ಕೊಯ್ಯುವುದು ತಪ್ಪು. ಅವೆರಡು ಸ್ವಯಂ ದಾರಿ ಮತ್ತು ಗುರಿಗಳು. ಆದರಿಂದ "ಸಮಾಜವಾದ ಇರದ ಜನತಾಂತ್ರಿಕ ಆಡಳಿತ ಕೇವಲ ಕುಲೀನರದು. ಕುಲೀನರಿಂದ ಕುಲೀನರಿಗಾಗಿ ನಡೆಸುವ ಆಡಳಿತ. ಹಾಗೆಯೇ, ಜನತಂತ್ರ ಇರದ ಸಮಾಜವಾದ ಸರ್ವಾಧಿಕಾರಿಗಳ ಹುಚ್ಚು ಕುಣಿತ'' ಎಂಬುದು ರಾಮ್‌ರ ಅಭಿಪ್ರಾಯ.

ಸರ್ವಧರ್ಮ ಸಮಾನತೆಯ ಪರಿಕಲ್ಪನೆ ಪಾಶ್ಚಿಮಾತ್ಯರ ಕೊಡುಗೆ ಅಲ್ಲ. ಅನೇಕ ಧರ್ಮಗಳ ಕಣಜವಾದ ಭಾರತವೇ ಅದರ ಜನಕ. ಆದರೂ ಅದರ ಏಳು-ಬೀಳುಗಳು ವೈಚಿತ್ರ್ಯ: ಈ ಮನೋಭಾವ ಒಂದು ದಷ್ಟ-ಪುಷ್ಟ ಸಿದ್ಧಾಂತವಾಗಿ ರೂಪ ತಳೆದು ಜನರ ಒಡಲಾಳಕ್ಕೆ ಇಳಿಯಲಿಲ್ಲ. ಈಗಾಗಲೇ ಗುರುತಿಸಿರುವಂತೆ ಸವಿಸ್ತಾರವಾದ ಸೈದ್ಧಾಂತಿಕ ಘರ್ಷಣೆಯಲ್ಲಿ ಈ ಆಲೋಚನೆ ಸದಾ ಬಿಕ್ಕಟ್ಟಿಗೆ ಸಿಲುಕುತ್ತಿತ್ತು. ಪುರೋಹಿತಶಾಹಿಯ ವಿಜೃಂಭಣೆಯ ಸಂದರ್ಭಗಳಲ್ಲಂತೂ ಇದರ ವಾಸ ಪಾತಾಳ. ಈ ದಿಕ್ಕಿಗೆ ಜಗಜೀವನ್‌ರು ಬಿಂಬಿಸಿರುವ ನೋಟಗಳನ್ನು ಗಮನಿಸುವುದು ಉತ್ತಮ. "ಸರ್ವಧರ್ಮ ಸಮಾನ ಮನೋಭಾವ ಭಾರತೀಯ ಚಿಂತನಾ ಕ್ರಮದ ಅಂತರ್ಗತ ಭಾಗ. ಆದರೆ ಅದು ಸಾಮಾಜಿಕ ಬದುಕಿನ ಒಳ ಸಂರಚನೆಗಳಿಗೆ ಹರಿಯುತ್ತಿರಲಿಲ್ಲ ಮತ್ತು ನಿತ್ಯದ ಪ್ರಾಯೋಗಿಕ ಬದುಕಿನಲ್ಲಿ ಮೈದಾಳುತ್ತಿರಲಿಲ್ಲ.

ಜಗಜೀವನ್‌ರ ಈ ಅನನುಭವಜನ್ಯ ಪಾಕ ಭಾರತೀಯ ಮನಸ್ಸಿನ ದ್ವಂದ್ವ ಮತ್ತು ನಯವಂಚಕ ಲಕ್ಷಣವನ್ನು ಬಯಲಿಗೆ ಎಳೆದಿದೆ. ದೇಶದ ಪ್ರಸ್ತುತ ಪರಿಸ್ಥಿತಿಯ ಅವಲೋಕನವು ಜಗಜೀವನ್‌ರ ಮಾತುಗಳನ್ನು ಎಚ್ಚರಿಕೆಯ ಗಂಟೆಯೆಂದು ಪರಿಗಣಿಸದೇ ಇರಲು ಸಾಧ್ಯವಿಲ್ಲ. ಒಟ್ಟಾರೆ, ದೇಶದ ಸಮಗ್ರ ಬದುಕು ಅರಳಲು ಜನತಂತ್ರ, ಸಮಾಜವಾದ ಮತ್ತು

ಸರ್ವಧರ್ಮ ಸಮಾನ ಮನೋಭಾವಗಳ ಬೀಜಗಳನ್ನು ಜನರ ಎದೆಗಳಲ್ಲಿ ಬಿತ್ತಬೇಕೆಂಬುದು ರಾಮ್ ಅವರ ಆಶಯ.

ಪ್ರಜಾಪ್ರಭುತ್ವದ ಯಶಸ್ಸು ಅಸ್ತಿತ್ವದಲ್ಲಿರುವ ರಾಜಕೀಯ ಪಕ್ಷಗಳ ಸಿದ್ಧಾಂತ – ಕಾರ್ಯ ಚಟುವಟಿಕೆಗಳನ್ನು ಅವಲಂಬಿಸಿರುತ್ತದೆ. ಆಳುವ ಪಕ್ಷದ ತಪ್ಪುಗಳನ್ನು ಖಂಡಿಸಲು, ಅದರ ಕ್ರಿಯೆಗಳನ್ನು ಸರಿಪಡಿಸಲು ಅದರ ತಪ್ಪು ನಿರ್ಣಯಗಳನ್ನು ತಿದ್ದಲು ಸದೃಢ ವಿರೋಧ ಪಕ್ಷ ಆಗತ್ಯವೆಂದು ರಾಮ್ ನಂಬಿದ್ದರು. ಈ ಹಿನ್ನೆಲೆಯಲ್ಲಿ ಅವರು ದ್ವಿಪಕ್ಷೀಯ ಪದ್ಧತಿಗೆ ಅಧಿಕ ಒತ್ತು ನೀಡುತ್ತಿದ್ದರು. ಬಲಯುತ ವಿಪಕ್ಷದ ರಚನೆ ಈ ಪದ್ಧತಿಯಲ್ಲಿ ಮಾತ್ರ ಸಾಧ್ಯವೆಂದು ತಿಳಿದಿದ್ದರು. ಇದಕ್ಕಾಗಿ ರಾಜಕೀಯ ಧ್ರುವೀಕರಣವನ್ನು ಅವರು ಪದೇ ಪದೇ ಅಪೇಕ್ಷಿಸುತ್ತಿದ್ದರು. ಆದರೆ ಬಹುಭಾಷಾ ಮತ್ತು ಬಹು ಸಂಸ್ಕೃತಿಯ ಭಾರತದಲ್ಲಿ ಜಗಜೀವನ್‌ರ ಆಲೋಚನೆಗಳು ಅಪ್ರಾಯೋಗಿಕವೆಂದು ಕಾಣುತ್ತದೆ. ಇತ್ತೀಚೆಗಿನ ರಾಜಕೀಯ ಧ್ರುವೀಕರಣಗಳು ದೇಶದ ಹಿತದೃಷ್ಟಿಯಿಂದ ಹೆಚ್ಚಾಗಿ ಪಕ್ಷಗಳ – ನಾಯಕರ ಹಿತ ದೃಷ್ಟಿಗಾಗಿಯೇ ನಡೆಯುತ್ತಿರುವುದು ಮತ್ತೊಂದು ಬಗೆಯ ಅಪಾಯವನ್ನು ಹುಟ್ಟುಹಾಕುತ್ತಿವೆ.

ನಿರಂಕುಶ ಪ್ರಭುತ್ವವನ್ನು ಪ್ರತಿಬಂಧಿಸಲು ಪಕ್ಷಗಳ ಆಂತರಿಕ ಪ್ರಜಾಸತ್ತೆ ಊರುಗೋಲೆಂದು ಜಗಜೀವನ್‌ರು ಹೇಳುತ್ತಿದ್ದರು. ಜನತಂತ್ರದ ಮಿತಿಯೊಳಗೆ ನಡೆಯುವ ಪಕ್ಷಗಳ ಒಳಗಿನ ಸಂಘರ್ಷ ಮತ್ತು ತಿಕ್ಕಾಟ ಸಹ್ಯವಾದುದು. ಒಂದು ಚೌಕಟ್ಟಿನೊಳಗಿನ ವಿರೋಧಗಳು ರಾಜಕೀಯ ಶಕ್ತಿಯ ಧ್ರುವೀಕರಣಕ್ಕೆ ಕೆಲವೊಮ್ಮೆ ನಾಂದಿ. ಆದರೆ ಇದು ನಿರಂತರವಾಗಿ ಕಾಡಬಾರದು. ಕಾರಣ, ರಾಜಕೀಯ ಅಭದ್ರತೆ ಅಭಿವೃದ್ಧಿಗೆ ಕಂಟಕ.

ಭಾರತ ಜಾತಿ – ಉಪಜಾತಿಗಳ ಭಂಡಾರ. ಇದರಿಂದ ಎಲ್ಲ ರಂಗಗಳು ಮಲೀನ. ಭಾರತೀಯನ ಪ್ರಥಮ ನಿಷ್ಠೆ ಜಾತಿಗೆ. ತರುವಾಯ ಒಬ್ಬನ ಆಸಕ್ತಿಯ ಆದ್ಯತೆಯನುಸಾರ ನಿಷ್ಠೆ ಕ್ರಮಸಂಖ್ಯೆಯನ್ನು ಪಡೆಯುತ್ತದೆ.

ಇಂಥ ದುಃಸ್ಥಿತಿಯಲ್ಲಿ ರಾಜಕೀಯ ವಲಯವನ್ನು ಜಾತಿ ಮುಕ್ತವನ್ನಾಗಿ ಗುಡಿಸುವುದು ಕಷ್ಟಕರ. ಆದರೆ ಜಾತಿಪದ್ಧತಿ ಇರುವವರೆಗೆ ಪ್ರಜಾಪ್ರಭುತ್ವದ ಶುದ್ಧತೆ ಅಸಾಧ್ಯ. ಅಷ್ಟೇ ಅಲ್ಲ, ಜನತಂತ್ರ ಸಾವಿನ ಹೊಸ್ತಿಲೆಡೆಗೆ ಜಾರುತ್ತಿರುತ್ತದೆ. ಜಗಜೀವನ್‌ರು ಹೇಳಿರುವಂತೆ "ಜಾತಿಪದ್ಧತಿ ಮತ್ತು ಜನತಂತ್ರದ ಮಧ್ಯೆ ಸಹಬಾಳ್ವೆ ಒಂದು ಕನಸು. ಇವೆರಡೂ ಹಾವು–ಮುಂಗಸಿ. ಒಂದರ ಸಾವಿನಲ್ಲಿ ಮತ್ತೊಂದರ ಉಳಿವಿದೆ. ಅದೇ ಬಗೆಯಲ್ಲಿ ಜಾತಿಪದ್ಧತಿ ಮತ್ತು ಸಮಾಜವಾದಗಳ ಸಂಬಂಧ ಎಣ್ಣೆ – ಸೀಗೆಕಾಯಿ. ಜಾತಿಯೊಳಗಡೇ ಇದ್ದಾಗಲೂ ಸಮಾಜವಾದ ಕುರಿತು ಮಾತನಾಡುವುದು ಅರ್ಥಹೀನ ಮತ್ತು ವ್ಯಂಗ್ಯ."

ರಾಮ್ ಒಬ್ಬ ಪ್ರಾಯೋಗಿಕ ರಾಜಕೀಯ ಚಿಂತಕರೆಂಬುದನ್ನು ಮರೆಯುವಂತಿಲ್ಲ. ನಾಡಿನ ನಾಡಿಬಡಿತ ಬಲ್ಲವರಾಗಿದ್ದರು. ದಲಿತರ ರಾಜಕೀಯ ಭವಿಷ್ಯದ ಬಗ್ಗೆ ಆಲೋಚನಾಪರರು. ದೇಶದ ರಾಜಕೀಯ ಪಕ್ಷಗಳ ಬೆಳವಣಿಗೆಗೆ ಆಹಾರ ದಲಿತರ ಮತಗಳು. ಅದಕ್ಕಾಗಿ ಪಕ್ಷಗಳ ಮುಖಂಡರು ಪ್ರಗತಿಪರ ಧೋರಣೆಯ ಮುಖವಾಡ ಧರಿಸುವುದಕ್ಕೆ ಜಗಜೀವನ್ ಖಂಡನೆ. ತಮ್ಮ ವೈಯಕ್ತಿಕ ಬದುಕುಗಳಲ್ಲಿ ಜಾತಿ ಪ್ರಿಯರಾಗಿ ದಲಿತರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ನಾಯಕರ ಕುರಿತು ಎಚ್ಚರಿಸುತ್ತಿದ್ದರು. ಅಂಥ ನಾಯಕರ ನಡೆ–ನುಡಿಗಳ ಅನ್ವೇಷಣೆಗೆ ರಾಮ್‌ರ ಒತ್ತಾಯ. ಜಾತಿ ವಿರುದ್ಧ ಮಾತನಾಡುತ್ತಲೇ ಹುಟ್ಟು–ಸಾವಿನ ಮಧ್ಯದ ಎಲ್ಲ ವೈಯಕ್ತಿಕ ಕ್ರಿಯೆಗಳನ್ನು ತನ್ನ ಜಾತಿಯ ಆವರಣದಲ್ಲೇ ನೆರವೇರಿಸುವವರನ್ನು ನಯವಂಚಕರೆಂದೇ ಭಾವಿಸಿದರು.

ಈ ಪರಿಸರದಲ್ಲಿ ದಲಿತರ ವಿಮುಕ್ತಿ ಶಾಂತಿಯುತ ಸಾಮಾಜಿಕ – ರಾಜಕೀಯ ಕ್ರಾಂತಿಯಲ್ಲಿ ನೆಲೆಸಿದೆಯೆಂಬುದು ರಾಮ್ ಅವರ ಅಸದಳ ವಿಶ್ವಾಸ. ದಲಿತರು ತಮ್ಮ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಹಿಂದುಳಿದ ಜಾತಿಗಳ ಬೆಂಬಲ ಪಡೆಯಲು ಒತ್ತಾಯಿಸಿರುವರು. ದಲಿತರ

– ಹಿಂದುಳಿದವರ ರಾಜಕೀಯ ವೇದಿಕೆಯ ಸೃಷ್ಟಿಯೇ ಜಾತಿ ನಿರ್ಮಿತ ಕಂದಕಗಳಿಗೆ ಭದ್ರ ಸೇತುವೆ.

ಪೂನಾ ಒಪ್ಪಂದದಿಂದ ಬಂದ ರಾಜಕೀಯ ಮೀಸಲಾತಿ ಪದ್ಧತಿ ಬಗ್ಗೆ ಸಿಡಿಮಿಡಿಗೊಂಡಿರುವುದು ಜಗಜೀವ್‌ನರ ಮತ್ತೊಂದು ಪ್ರಮುಖ ರಾಜಕೀಯ ವಿಚಾರಧಾರೆ. ಪೂನಾ ಒಪ್ಪಂದ ದಲಿತ ಪ್ರತಿನಿಧಿಗಳ ಸಂಖ್ಯೆಯನ್ನು ಅಧಿಕಗೊಳಿಸಿದ್ದು ಸತ್ಯ. ಆದರೆ ಸತ್ವಪೂರ್ಣ ಪ್ರಾತಿನಿಧ್ಯಕ್ಕೆ ಇದು ರಾಹು. ರಾಜಕೀಯ ಮೀಸಲಾತಿ ದಲಿತರಿಗೆ ಜಾತಿಪದ್ಧತಿ ಇರುವವರೆಗೆ ಅಗತ್ಯವೆಂದು ಪರಿಗಣಿಸಿದ್ದ ರಾಮ್, ಚುನಾವಣಾ ವಿಧಾನಗಳು ಬದಲಾಗದಿದ್ದರೆ ಈ ಮೀಸಲಾತಿಗೆ ಅರ್ಥವಿಲ್ಲವೆಂದು ಭಾವಿಸಿದ್ದರು. ಮೀಸಲು ಕ್ಷೇತ್ರ, ಎಲ್ಲ ಜಾತಿ, ಧರ್ಮ, ವರ್ಗದ ಮತದಾರರನ್ನು ಒಳಗೊಂಡು ರಚಿತವಾದ ಮತಕ್ಷೇತ್ರ. ಈ ಕ್ಷೇತ್ರದಲ್ಲಿ ದಲಿತ ಅಭ್ಯರ್ಥಿ ದಲಿತರ ನೂರಕ್ಕೆ ನೂರು ಮತಗಳನ್ನು ಪಡೆದರೂ ಅವನು ಚುನಾಯಿತನಾಗುವುದಿಲ್ಲ. ದಲಿತೇತರ ಮತಗಳು ಗೆಲುವಿನ ಏಣಿ. ಯಾವ ಉಮೇದುವಾರ ಹಿಂದೂಗಳ ಹೃದಯವನ್ನು ಓಲೈಸುವನೋ ಅವನಿಗೇ ಜಯ. ಮೀಸಲು ಕ್ಷೇತ್ರಗಳ ದಲಿತ ಮತದಾರರ ಸಂಖ್ಯೆ ಶೇಕಡಾ ೧೮–೨೦ ಇರುವುದು ಇದಕ್ಕೆ ಇರುವ ಕಾರಣ. ಈ ವಿವರಣಾತ್ಮಕ ಮಾಹಿತಿಯನ್ನು ಹೊರಗೆಡವಿರುವ ರಾಮ್ ಮೀಸಲು ಕ್ಷೇತ್ರ ಮತ್ತು ದಲಿತ ಪ್ರತಿನಿಧಿಗಳ ಸುತ್ತ ಆವರಿಸಿರುವ ಕತ್ತಲ ಬಗ್ಗೆ ಬೆಳಕು ಚೆಲ್ಲಿರುವರು.

ಪ್ರಾದೇಶಿಕ ಆಧಾರದಲ್ಲಿ ರಚಿತಗೊಂಡ ಸಂಯುಕ್ತ ಮತ ಕ್ಷೇತ್ರಗಳ ಮೀಸಲು ಸ್ಥಾನಗಳು ದಲಿತರಿಗೆ ಪರಿಣಾಮಕಾರಿ ರಾಜಕೀಯ ಹಕ್ಕನ್ನು ಕಲ್ಪಿಸುವುದರಲ್ಲಿ ಸೋತಿವೆ ಎಂಬ ಇಂಗಿತ ತೋರಿರುವ ರಾಮ್‌ರ ಧ್ವನಿಯಲ್ಲಿ ಪ್ರತ್ಯೇಕ ಮತ ಕ್ಷೇತ್ರಗಳ ಕಡೆಗೆ ಮನಸ್ಸು ಹರಿದಿರುವುದನ್ನು ಖಚಿತವಾಗಿ ಗುರುತಿಸಬಹುದು. ಎಂ.ಸಿ. ರಾಜಾ ಅವರ ಮೂಸೆಯಿಂದ ಹೊರಹೊಮ್ಮಿದ ಈ ರಾಜಕೀಯ ಹೊಳಹು ಅಂಬೇಡ್ಕರರ ಪ್ರತಿಭಾಶಕ್ತಿ

ಯಿಂದ ಒಂದು ಸತ್ವಶಾಲಿ ಸಿದ್ಧಾಂತ – ಆಂದೋಲನವಾಗಿ ಮಾರ್ಪಟ್ಟಿದ್ದರೂ ಜಗಜೀವನ್‌ರ ರಾಜಕೀಯ ಕಾಲಘಟ್ಟಗಳಲ್ಲಿ ಇದರ ಮುಂದುವರಿಕೆ ನಡೆದಿಲ್ಲ ಎಂಬ ಚಾರಿತ್ರಿಕ ತತ್ವವನ್ನು ದಾಖಲಿಸದಿದ್ದರೆ ಅಪಚಾರವೆನಿಸುತ್ತದೆ.

ಗಾಂಧಿಯೊಂದಿಗೆ ಅನೇಕ ಅಭಿಪ್ರಾಯ ಭೇದಗಳು ಇದ್ದಾಗ್ಯೂ ಜಗಜೀವನರು ಅವರ ವಿಚಾರಧಾರೆಗಳ ಗಾಢಪ್ರಭಾವಕ್ಕೆ ಒಳಗಾಗಿದ್ದರು. ಗ್ರಾಮ ಸ್ವರಾಜ್ಯದ ಮೂರ್ತ ಸ್ವರೂಪಕ್ಕೆ ಪಂಚಾಯತ್ ರಾಜ್ಯ ವ್ಯವಸ್ಥೆಯ ತೊಡಿಗೆ ತೊಡಿಸಲು ರಾಮ್‌ರ ಒತ್ತಡ. ಆದರೆ ಅವರಿಗೆ ಗ್ರಾಮಗಳ ವಾಸ್ತವಿಕ ಪರಿಸ್ಥಿತಿಯ ಪರಿಚಯ ಆಪ್ತವಾಗಿತ್ತು. ಅಲ್ಲಿನ ಜಾತಿ – ಜಾತಿಗಳ ಬಿರುಕು, ವರ್ಗಗಳ ಅಸ್ತಿತ್ವ, ಶ್ರೀಮಂತ ಭೂಮಾಲೀಕರ ಅಟ್ಟಹಾಸ, ಗ್ರಾಮೀಣ ಪ್ರದೇಶದ ಸಕಲ ಕ್ರಿಯೆಗಳ ಮೇಲಿನ ಮೇಲ್ಜಾತಿ – ಮೇಲ್ವರ್ಗದವರ ಸಂಪೂರ್ಣ ನಿಯಂತ್ರಣ, ಸ್ವಾತಂತ್ರ್ಯ ಎಂಬುದು ಕೇವಲ ತತ್ವ ರೂಪದಲ್ಲಿ ಮಾತ್ರ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಮಾಹಿತಿ. ಪ್ರಾಯೋಗಿಕವಾಗಿ ಗ್ರಾಮಗಳು ಈಗಲೂ ಫ್ಯೂಡಲ್ ವ್ಯವಸ್ಥೆಯನ್ನು ದಾಟದಿರದ ದುರಂತ – ಈ ಎಲ್ಲಾ ಬಗೆಯ ಗ್ರಾಮೀಣ ಬದುಕಿನ ನ್ಯೂನತೆಗಳ ನಿಕಟ ಪರಿಚಯ ಜಗಜೀವನ್‌ರಿಗಿತ್ತು.

ಆ ಕಾರಣ, ಪಂಚಾಯತ್ ರಾಜ್ಯ ವ್ಯವಸ್ಥೆ ಒಂದು ಪರಿಣಾಮಕಾರಿ ವಿಕೇಂದ್ರೀಕೃತ ರಾಜಕೀಯ ವ್ಯವಸ್ಥೆ ಆಗಬೇಕಾದರೆ ಪ್ರಪ್ರಥಮವಾಗಿ ಗ್ರಾಮಗಳನ್ನು ಹೊಸ – ಆಲೋಚನೆಗಳ ಬುನಾದಿ ಮೇಲೆ ಪುನರ್ ಸಂಘಟಿಸಲು ರಾಮ್‌ರ ಅಭೀಷ್ಟೆ. ಹಿಂದೆ ಪಂಚಾಯತ್ ರಾಜ್ಯ ವ್ಯವಸ್ಥೆ ಭಾರತದ ಮಾದರಿ ವ್ಯವಸ್ಥೆಗಳಾಗಿರಬಹುದು. ಆದರೆ ಆಗಿನ ಸಾಮಾಜಿಕ ರೀತಿ – ರಿವಾಜುಗಳೇ ಬೇರೆ, ಇಂದಿನ ಪರಿಸ್ಥಿತಿಯೇ ಬೇರೆ. ಶತಮಾನಗಳಾಚೆ ಧಾರ್ಮಿಕ ಮತ್ತು ಮತದ ಮೌಢ್ಯತೆಯಿಂದ ದೀನ ದಲಿತರು ಬಡವರಾಗಿರಲು, ಹಸಿವಿನಿಂದ ನರಳಲು, ಅವಮಾನ ಸಹಿಸಲು, ಸಿದ್ಧರಿದ್ದರು. ಅಲ್ಲದೆ ಮೇಲ್ವರ್ಗ – ಮೇಲ್ಜಾತಿ ಜನರು ತಾವು ಆಳಲಿಕ್ಕಾಗಿಯೇ ಹುಟ್ಟಿದವರೆಂಬ

ಮನೋಭೂಮಿಕೆಯನ್ನು ಕೆಳಜಾತಿ – ಕೆಳವರ್ಗದ ಜನರು ವಿರೋಧಿಸುತ್ತಿರಲಿಲ್ಲ. ಆದರಿಂದ ಪಂಚಾಯತ್ ರಾಜ್ಯಗಳು ಏಕಮುಖವಾಗಿದ್ದು, ಯಶಸ್ವಿಯ ಬಣ್ಣ ಬಳಿದುಕೊಂಡಿದ್ದವು.

ಆದರೆ ಇಂದು ವಾತಾವರಣ ಭಿನ್ನವಾಗಿದೆ. ಬಹುಸಂಖ್ಯೆಯ ಜನರಿಗೆ ತಮ್ಮ ಮೂಲಭೂತ ಹಕ್ಕುಗಳ ಅರಿವಿದೆ. ಮಾನವರೆಲ್ಲ ಒಂದೇ ಎನ್ನುವ ತತ್ವ ಶೋಷಿತರ ತಲೆಯಲ್ಲಿ ಮುದ್ರೆಗೊಂಡಿದೆ. ಯಾರೂ ಯಾರ ಗುಲಾಮರಲ್ಲ. ಯಾರೂ ಯಾರನ್ನೂ ಆಳಲು ದೈವಾಜ್ಞೆ ಪಡೆದಿಲ್ಲ ಎಂಬ ಸತ್ಯ ದರ್ಶನ ದಲಿತರಿಗೆ – ಬಡವರಿಗೆ ಹೊಳೆದಿದೆ. ಸಮಾನತೆ, ಸಾಮಾಜಿಕ ನ್ಯಾಯದೆಡೆ ಎಲ್ಲರ ಗಮನ ಹರಿದಿದೆ. ಸ್ವಾತಂತ್ರ್ಯ ಆಮೂಲಾಗ್ರ ಬದಲಾವಣೆ ತರದಿದ್ದಾಗ್ಯೂ ಕನಿಷ್ಟಪಕ್ಷ ಶೋಷಿತರ ಆಲೋಚನೆಗಳಲ್ಲಿ ಈ ಮೂಲಭೂತ ಪರಿವರ್ತನೆ ತಂದಿರುವುದನ್ನು ಅಲ್ಲಗಳೆಯಲಾಗದು. ಈ ಮೇಲಿನ ಅಂಶಗಳನ್ನು ಪರಿಗಣಿಸಿರುವ ಜಗಜೀವನ್‌ರು ಗ್ರಾಮೀಣ ಭಾರತವನ್ನು ಈ ನಿಟ್ಟಿನಲ್ಲಿ ಕ್ರಾಂತಿಕಾರಕ ಪರಿರ್ತನೆಗೆ ಒಳಪಡಿಸಲು ಆಶಿಸಿದ್ದರು.

ಪಂಚಾಯತ್ ರಾಜ್ಯ ವ್ಯವಸ್ಥೆಗೆ ಸಂಬಂಧಿಸಿದಂತೆ ಅಂಬೇಡ್ಕರರು ಇದೇ ಅಭಿಪ್ರಾಯ ತಳೆದಿದ್ದರು. ಭಾರತದ ಪ್ರಜಾಪ್ರಭುತ್ವ ಅರ್ಥಪೂರ್ಣವೆನಿಸುವುದು ಭಾರತದ ಸಂಪ್ರದಾಯಬದ್ಧ ಹಳ್ಳಿಗಳ ಸಾಂಸ್ಕೃತಿಕ ಜೀವನ ಕ್ರಾಂತಿಕಾರಕವಾಗಿ ಬದಲಾಗಬೇಕೆಂದು ಒತ್ತಾಯಿಸಿದ್ದರು. ಅವರ 'ಶ್ರೀಮಾನ್ ಗಾಂಧಿ ಮತ್ತು ಅಸ್ಪೃಶ್ಯರ ವಿಮೋಚನೆ' ಇದಕ್ಕೆ ಅನೇಕ ಪುರಾವೆಗಳನ್ನು ಒದಗಿಸುತ್ತದೆ.

ಜಗಜೀವನ್‌ರ ರಾಜಕೀಯ ಚಿಂತನೆಗಳ ಮೂಲ ಉದಾರವಾದಿ ರಾಜಕೀಯ ಸಿದ್ಧಾಂತ. ರಾಜಕೀಯ ವಿಕೇಂದ್ರೀಕರಣ ಪರ ವಾಲುವ ಅವರು ಸಂವಿಧಾನ ಬದ್ಧರು. ಸರ್ವಧರ್ಮ ಸಮಾನತೆಯ ಸಮಾಜವಾದಿ

ಜನತಾಂತ್ರಿಕ ವ್ಯವಸ್ಥೆಯ ಹರಿಕಾರರು. ಸಾಮಾಜಿಕ – ಆರ್ಥಿಕ ಸಮಾನತೆಯ ದೃಷ್ಟಿಕೋನದಿಂದ ಅವರ ರಾಜಕೀಯ ವಿಚಾರಧಾರೆ ರೂಪಿತವಾಗಿದೆ.

ಕೋಮುವಾದ:

ವಿಭಿನ್ನ ಧರ್ಮ – ಮತಗಳ ನಡುವಿನ ಸಂಘರ್ಷವೇ ಕೋಮುವಾದ. ಒಂದು ಚಿಂತನಾ ಕ್ರಮ ತನ್ನದೇ ಸರಿ ಎಂಬ ಅಹಂಕಾರದಲ್ಲಿ ಪಡೆಯುವುದು ಮತಾಂಧಕ್ಕೆ ಆಹಾರ. ಅಸಹಿಷ್ಣುತೆ, ಅಮಾನವೀಯತೆ, ಪರಸ್ಪರ ಅವಿಶ್ವಾಸ, ಅಪನಂಬಿಕೆಗಳು ಎರಡು ಭಿನ್ನ ಸಾಮಾಜಿಕ ಸ್ತರಗಳಲ್ಲಿ ಪರಾಕಾಷ್ಠೆ ಹೊಂದಿದಾಗ ಸಮಾಜದಲ್ಲಿ ಪ್ರಕ್ಷುಬ್ಧತೆ ತಲೆದೋರುತ್ತದೆ. ಕೋಮುವಾದ ವಿವಿಧ ಮತಗಳ ಮಧ್ಯದ ಸಂಘರ್ಷವೇ ಆಗಬೇಕಾಗಿಲ್ಲ. ಅದು ವಿಭಿನ್ನ ಸಂಸ್ಕೃತಿ – ಜೀವನ ಕ್ರಮ ಮತ್ತು ಆಲೋಚನಾ ಕ್ರಮಗಳ ನಡುವಿನ ಸಂಗ್ರಾಮವೂ ಹೌದು. 'ಭೂತ'ದ ಸಾಮಾಜಿಕ – ಧಾರ್ಮಿಕ – ಆರ್ಥಿಕ ಕ್ಷೇತ್ರಗಳ ಘಟನಾವಳಿಗಳೂ 'ವರ್ತಮಾನ'ದ ಸಂದಿಗ್ಧತೆಗೆ ಪ್ರೇರಕ.

ಕೋಮುವಾದ ಈ ದೇಶಕ್ಕೆ ಬ್ರಿಟಿಷರ ಬಳುವಳಿ ಎಂಬ ಆರೋಪ ಸಮಂಜಸವಲ್ಲ. ವಾಸ್ತವಿಕವಾಗಿ ಅನೇಕ ರಂಧ್ರಗಳನ್ನು, ಶಿಥಿಲಗಳನ್ನು ಹೊಂದಿದ ಭಾರತೀಯ ಸಾಮಾಜಿಕ ವ್ಯವಸ್ಥೆಯೇ ಇದೆಲ್ಲದರ ಆಗೇವು. ಮನುಷ್ಯನನ್ನು ಮನುಷ್ಯನನ್ನಾಗಿ ಪರಿಗಣಿಸಿದ ಆಲೋಚನಾ ರೀತಿ ರಿವಾಜುಗಳು ಇದರ ಬೆನ್ನೆಲುಬು. ತಾನು ಶ್ರೇಷ್ಠ ಮತ್ತೊಬ್ಬ ಅಶ್ರೇಷ್ಠ, ತಾನು ಮಾತ್ರ ಜ್ಞಾನಿ ಇತರರು ಅಜ್ಞಾನಿಗಳು, ತಾನು ಉತ್ತಮ ಮತ್ತಿತರರು ತುಚ್ಛರು, ಅನ್ನುವ ಮನಸ್ಸು ಇದರ ಉಸಿರು. ನನ್ನ ಆಚಾರ – ವಿಚಾರ ಸಂಹಿತೆಗಳು ಮಾತ್ರ ಅನುಸರಣೀಯ ಎಂಬ 'ಮನು' ಮಾದರಿಯ ನಾಜಿ ಧೋರಣೆ ಇದರ ತಾಯಿ. ಇಂಥ ಅಸಮಾನ ವ್ಯವಸ್ಥೆ ಎಲ್ಲೆಲ್ಲಿ ಇರುತ್ತದೋ ಅಂಥಲ್ಲೆಲ್ಲ ವಿದೇಶೀಯರ ಆಳ್ವಿಕೆ, ಕೋಮು ಸಂಘರ್ಷ, ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುವುದು ಸರ್ವೇಸಾಮಾನ್ಯ.

ಜಗಜೀವನ್‌ರು ಕೋಮುವಾದ ಜನನದ ಮಾನಸಿಕ ಪರಿಸ್ಥಿತಿಯನ್ನು ಹೀಗೆ ಹೇಳಿರುವರು – "ಯಾವ ಹಿಂದೂ ಒಬ್ಬ ಮುಸಲ್ಮಾನ ತನಗಿಂತ ಕೀಳು ಅಥವಾ ಯಾವ ಮುಸಲ್ಮಾನ ಮತ್ತೊಬ್ಬ ಹಿಂದೂವನ್ನು ಕಾಫಿರನೆಂದು ಬಗೆಯುವನೋ ಅಥವಾ ಯಾವ ಹಿಂದೂ ಒಬ್ಬ ದಲಿತ ತನಗಿಂತ ಕೀಳೆಂದು ಭಾವಿಸುವನೋ ಅದು ಕೋಮುವಾದ."

ಮಾನವೀಯತೆ ಒಂದು ರಾಷ್ಟ್ರದ ಜೀವದಾತು. ಎಲ್ಲ ಧರ್ಮಗಳಲ್ಲೂ ತಮ್ಮೆಲ್ಲಾ ಕೊರತೆಗಳ ಮಧ್ಯೆ ಮಾನವೀಯ ಗುಣಗಳಿಗೆ ಅವಕಾಶವಿರುತ್ತದೆ. ಸಹ ಮಾನವನನ್ನು ಪ್ರೀತಿಸುವುದು, ವಾತ್ಸಲ್ಯಪೂರ್ವದಲ್ಲಿ ನೋಡಿಕೊಳ್ಳುವುದು, ವಿಶ್ವಾಸ – ನಂಬಿಕೆಗಳನ್ನು ಹೊಂದಿರುವುದು ನಿಜ ಅರ್ಥದ ಧರ್ಮದ ತಿರುಳು. ಇಲ್ಲದಿದ್ದರೆ ಧರ್ಮ ಕೇವಲ ಭೂತ – ಪ್ರೇತಗಳ ಆರಾಧನೆಯ ತಂತ್ರ ಮಂತ್ರಗಳ ದೊಂಬಿಯೆನಿಸುತ್ತದೆ. ಧರ್ಮದ ಹೆಸರಿನಲ್ಲಿ ರಕ್ತ ಹರಿಸುವವರ್‍ಯಾರೂ ಆ ಧರ್ಮದ ಅನುಚರರಾಗಲು ಅರ್ಹರಲ್ಲ. ಧರ್ಮದ ಹೆಸರಿನಲ್ಲಿ ಮತ್ತೊಬ್ಬನನ್ನು ಕೊಲ್ಲುವ, ಹಿಂಸಿಸುವ, ಜೀವಂತವಾಗಿ ಸುಡುವ ವ್ಯಕ್ತಿ ಧಾರ್ಮಿಕ ವ್ಯಕ್ತಿಯಲ್ಲ. ಅಂಥವನು ತಾನು ಹಿಂದೂ ಅಥವ ಮುಸ್ಲಿಂ ಎಂದು ಕರೆದುಕೊಳ್ಳುವುದು ಆಯಾ ಧರ್ಮಗಳ ತಳದ ಮದ್ದು–ಗುಂಡುಗಳು. ಮತ್ತೊಂದು, ನಿಜವಾದ ಧಾರ್ಮಿಕ ವ್ಯಕ್ತಿಗಳು ಅಂಥವರನ್ನು 'ಕೊಲೆಪಾತಕರು', 'ಘೋರ ಅಪರಾಧಿಗಳು' ಎಂದೇ ಪರಿಗಣಿಸುವರು ಎಂಬ ಅಭಿಪ್ರಾಯ ಜಗಜೀವನ್‌ರಾಮ್‌ರದು.

ರಾಮ್ ಅವರದು ಧಾರ್ಮಿಕ ವ್ಯಕ್ತಿತ್ವ. ಧರ್ಮಗಳ ಒಳ ತಿರುಳಿನ ಬಗ್ಗೆ ಅವರಿಗೆ ಅಪಾರ ನಂಬಿಕೆ. ಧರ್ಮ ಮಾನವನನ್ನು ಋಜು ಮಾರ್ಗಕ್ಕೆ ಹಚ್ಚುತ್ತದೆ. ಮನುಷ್ಯನ ಕರುಳ ನೋವಿಗೆ ಉಪಶಮನ ನೀಡುತ್ತದೆಂಬ ಉಜ್ವಲ ವಿಶ್ವಾಸಿಗರು. ಅವರ ಮಾತುಗಳಲ್ಲೇ ವ್ಯಕ್ತಪಡಿಸುವುದಾದರೆ – "ಎಲ್ಲ ಧರ್ಮಗಳ ಸಾರಸಂಗ್ರಹ ಮೂಲಭೂತವಾಗಿ ಭ್ರಾತೃತ್ವ, ಸೇವೆ, ಕರುಣೆ, ಅನುಕಂಪಗಳ ಸಮುಚ್ಚಯ." ತಾಂತ್ರಿಕ – ವೈಜ್ಞಾನಿಕ ವಿಕಾಸ

ಹೊಂದಿದ ಸಮಾಜಗಳಿಗೂ ಮಾನವ ಸಹಜ ಈ ಗುಣ ವಿಶೇಷಗಳು ಅವಶ್ಯಕ.

ಜನತಂತ್ರ ಮತ್ತು ಕೋಮುವಾದ ಅಸಂಗತ ಭಾವಗಳು. ವ್ಯತಿರಕ್ತ ಅರ್ಥಗುಚ್ಛಗಳು. ಒಂದರ ಉಳಿವಿನಲ್ಲಿ ಮತ್ತೊಂದರ ಅಳಿವಿದೆ. ಜನತಂತ್ರ ವ್ಯಕ್ತಿಯ ವಿಕಾಸತೆ ಮತ್ತು ಅಸ್ತಿತ್ವದ ಪರ ನಿಂತರೆ ಕೋಮುವಾದ ವ್ಯಕ್ತಿಯ ವಿನಾಶ ಮತ್ತು ಅನಭಿವೃದ್ಧಿ ಪರ ನಿಲ್ಲುತ್ತದೆ. ಅವುಗಳ ಧ್ಯೇಯ – ಮಾರ್ಗಗಳು ಆಕಾಶ – ಭೂಮಿಯಷ್ಟು ಅಂತರ. ಜಗಜೀವನ್‌ರು ಕೋಮುವಾದ ಕುರಿತು ಸ್ಪಷ್ಟ ಮಾತುಗಳಲ್ಲಿ ನಿರ್ವಚಿಸಿಲ್ಲ. ಆದರೆ ಅದರ ಅಪಾಯ, ಕಾರಣಗಳು ಮತ್ತು ಕೋಮುವಾದಿಗಳ ಗೋಮುಖ ವ್ಯಾಘ್ರ ಸ್ವಭಾವ – ಗುಣಲಕ್ಷಣಗಳ ಪಕಳೆಗಳನ್ನು ಬಿಚ್ಚಿ ತೋರಿಸುವರು.

"ಜನತಂತ್ರದ ಮುಖ್ಯ ಆಧಾರ ಮಾನವನ ವೈಯಕ್ತಿಕ ಗುಣಗಳನ್ನು ನಂಬುವುದು ಮತ್ತು ವೃದ್ಧಿಸುವುದು. ವ್ಯಕ್ತಿ ಒಂದು ಗುಂಪಿನ ಸದಸ್ಯನಂತೆ ವರ್ತಿಸಬಾರದು. ಜನತಂತ್ರದ ಉಳಿವು ಕ್ಷಣಿಕ ಆವೇಶಕ್ಕೆ ಬಲಿಯಾಗದ, ಸ್ವಯಂ ವಿವೇಚಿಸುವ, ನೈತಿಕ ಕಾರ್ಯಗಳಲ್ಲಿ ತೊಡಗಿರುವ ವ್ಯಕ್ತಿಗಳ ಮೇಲೆ ನಿಂತಿದೆ." ಜಗಜೀವನ್‌ರ ಈ ನುಡಿಗಳು ಕೋಮುವಾದ ಹೇಗೆ ಜನತಂತ್ರಕ್ಕೆ ಡಿಕ್ಕಿ ಹೊಡೆಯುತ್ತಿರುತ್ತದೆಂಬುದನ್ನು ಖಚಿತಡಿಸಿವೆ.

ಕೋಮುವಾದ ದೇಶದ ಪ್ರತಿಯೊಂದು ಕ್ಷೇತ್ರವನ್ನು ಕಲುಷಿತಗೊಳಿಸಿದೆ ಎಂದು ಪರಿಗ್ರಹಿಸಿದ ರಾಮ್, ಅದೊಂದು ವಿಷಸರ್ಪ, ದೇಶದ ಸಮಗ್ರತೆ, ಏಕತೆ, ಅಭಿವೃದ್ಧಿಗೆ ಮಾರಕವೆಂದು ಗುರುತಿಸಿರುವರು. ಇದರ ರೂಕ್ಷತೆ ಸಾಮಾಜಿಕ – ಆರ್ಥಿಕ – ಧಾರ್ಮಿಕ – ರಾಜಕೀಯ – ಸಾಂಸ್ಕೃತಿಕ ವಲಯಗಳಲ್ಲಿ ತಲೆ ಎತ್ತಿರುವುದಕ್ಕೆ ವ್ಯಾಕುಲಗೊಂಡಿರುವರು. ಚುನಾವಣೆಗಳು ಮತಾಂಧತೆ, ಜಾತೀಯತೆಯ ಆಗರ. ಶಿಕ್ಷಣ ಕೇಂದ್ರಗಳು ವಿವಿಧ ಮತಾಚರಣೆಗಳ ತರಬೇತಿ ಕೇಂದ್ರಗಳು. ಸಮಾಜದ ಪ್ರತಿಯೊಂದು ಚಲನ–ವಲನಗಳಿಗೆ ಮಾರ್ಗಸೂಚಿ ಬರುವುದು ಕೋಮುವಾದದ

ದೀವಟಿಗೆಗಳಿಂದ. ಆದರಿಂದ ಕೋಮುವಾದ ಪ್ರಾದೇಶಿಕ ಮತ್ತು ಪ್ರಾಂತೀಯ ವಾದಗಳಿಗಿಂತ ಸಾವಿರಪಟ್ಟು ವಿಷಕಾರಿ ಮತ್ತು ಅಪಾಯಕಾರಿಯೆಂದು ಜಗಜೀವನ್‌ರು ಬಗೆದಿದ್ದರು.

ಭಾರತೀಯ ಸಮಾಜ ಒಂದು ಜೀವಂತ, ಸಜೀವ ಮತ್ತು ಶಕ್ತಿಯುತ ಸಮಾಜವೆನಿಸಲು ಕೋಮುವಾದದ ಬೇರುಗಳನ್ನು ಮೂಲೋತ್ಪಾಟನೆಗೊಳಿಸುವುದು ಅನಿವಾರ್ಯ. ಮಾನಸಿಕವಾಗಿ ಮತ್ತು ವೈಜಾನಿಕವಾಗಿ ಇಂದು ಭಾರತೀಯರು ವಿವಿಧ ಮತ–ಪಂಗಡಗಳ ರಾಡಿಯ ಇಕ್ಕಟ್ಟಿಗೆ ಸಿಲುಕಿದ್ದಾರೆ. ಸಂಕುಚಿತ ಸ್ವಭಾವ ತಾನೇ ತಾನಾಗಿ ಮೈದಾಳಿ ಮೊರೆಯುತ್ತದೆ. ಆದರಿಂದ ಇಂಥ ಸಮಾಜದ ರೂಪ ಬದಲಾಯಿಸಲು ಅಭೀಷ್ಟೆಪಟ್ಟಿರುವ ರಾಮ್, ಅದಕ್ಕಾಗಿ ಪ್ರಜಾಸತ್ತಾತ್ಮಕ ಸಾಮಾಜಿಕ ಧೋರಣೆಯ ನೆಲೆಗಟ್ಟನ್ನು ನಿರ್ಮಿಸಲು ಹಂಬಲಿಸಿದರು.

ಜಗಜೀವನ್‌ರಾಮ್ ಹಿಂದೂ ಮತ್ತು ಮುಸ್ಲಿಂ ಕೋಮುವಾದಿಗಳೆರಡನ್ನೂ ಖಂಡಿಸುತ್ತಿದ್ದರು. ಎರಡರ ಜೀವವಿರೋಧಿ ನಿಲುವುಗಳನ್ನು ಬೆತ್ತಲೆಗೊಳಿಸಿರುವರು. ಎರಡರ ತಂತ್ರ – ಕಾರ್ಯಾಚರಣೆಗಳನ್ನು ವಿರೋಧಿಸುತ್ತಿದ್ದರು. ಅವರ ಪ್ರಕಾರ – "ಜಯ ಭಜರಂಗಬಲಿ ಮತ್ತು ಅಲ್ಲಾ ಹೋ ಅಕ್ಬರ್ ಘೋಷಣೆಗಳು ಕೇಳಲು ಆಕರ್ಷಕ ಮತ್ತು ಅಯಸ್ಕಾಂತ ಸ್ವರೂಪದವು. ಈ ಪದ ಪ್ರಯೋಗಗಳು ಕೋಮುವಾದದ ಹಾವಿಗೆ ಹಾಲು ಎರೆದಂತೆ ಪ್ರಚೋದನಕಾರಿ. ಮತಾಂಧರ ಇಂತಹ ಪ್ರವೃತ್ತಿಗಳನ್ನು ಬಡಿದೆಬ್ಬಿಸುವ ಜ್ವಾಲಾಮುಖಿಗಳು."

ಅಷ್ಟೇ ಅಲ್ಲದೆ ದೇಶಭಕ್ತರ – ರಾಷ್ಟ್ರ ಪ್ರೇಮಿಗಳ ಗೋಸುಂಬೆತನದ ಚರ್ಯೆಗೆ ಹೀಗೆ ಕ್ಷ–ಕಿರಣ ಬೀರಿರುವರು – "ಪ್ರಗತಿಪರ ಸಾಮಾಜಿಕ ಮತ್ತು ಆರ್ಥಿಕ ತತ್ವಗಳ ವಿರುದ್ಧ ಕುಹಕ ರೀತಿಯ ರಾಷ್ಟ್ರೀಯ ವಾದದ ಭೂತವನ್ನು ಎತ್ತಿಕಟ್ಟುವ ಪ್ರಯತ್ನದ ಕುಚೇಷ್ಟೆ ವ್ಯವಸ್ಥೆಯ ಅಂತರ್ಗತ ಅಂಶ. ರಾಜಕೀಯ ಚದುರಂಗದಾಟದಲ್ಲಿ ನಿರತರಾದ ದೇಶಭಕ್ತರು ಸತ್ಯದ

ತಲೆಗೆ ಹೊಡೆಯುವುದಕ್ಕಾಗಲೀ ಅಥವಾ ಚರಿತ್ರೆಯನ್ನು ತಿರುಚುವುದಕ್ಕಾಗಲೀ ಹಿಂಜರಿಯುವುದಿಲ್ಲ.

ರಾಷ್ಟ್ರಭಕ್ತರ ರಾಷ್ಟ್ರೀಯ ವಾದದ ಚಿನ್ನದ ಲೇಪನವನ್ನು ಸ್ವಲ್ಪವೇ ಗೀರಿದಾಗ ಹೊರಬರುವ ಪ್ರಗತಿ ವಿರೋಧಿ ನಿಲುವಿನ ಕಪ್ಪು ಮುಖವನ್ನು ತೋರಿರುವ ಜಗಜೀವನ್‌ರು ಅವರಲ್ಲಡಗಿರುವ ಮತ್ತೊಂದು ಗೋಮುಖ ವ್ಯಾಘ್ರ ಸ್ವಭಾವಕ್ಕೆ ಬೆಳಕು ಚೆಲ್ಲಿದ್ದಾರೆ. ಸುಳ್ಳನ್ನು ಸತ್ಯವಾಗಿಸುವ ಮತ್ತು ಸತ್ಯವನ್ನು ಸುಳ್ಳಾಗಿಸುವ ಈ ಮತಾಂಧ ದೇಶಭಕ್ತರ ಕಾರ್ಯ ಇಲ್ಲಿಗೇ ನಿಲ್ಲುವುದಿಲ್ಲ. ಆಯಾಯ ಕಾಲಗಳಿಗೆ ಅನುಗುಣವಾದ ಬಣ್ಣ – ಬಣ್ಣದ ಚಡ್ಡಿ – ಚಲ್ಲಣ ಅಂಗಿಗಳನ್ನು ಧರಿಸುವರು. ಹೊಸ ಹೊಸ ನುಡಿಗಟ್ಟುಗಳನ್ನು ಹೊಸೆಯುವರು. ವಿವಿಧ ವೇದಿಕೆಗಳಲ್ಲಿ ವಿವಿಧ ಕುಣಿತ ನಡೆಸುವರು. ಜಗಜೀವನ್‌ರ ಮುಂದುವರಿದ ಮಾತುಗಳನ್ನು ಹೀಗೆ ಹಿಡಿಯಬಹುದು – "... ಮತ್ತೊಂದು ದುರಾದೃಷ್ಟಕರ ಪ್ರತಿಗಾಮಿ ಧೋರಣೆಗಳನ್ನು ಬಿತ್ತಿ ಬೆಳೆಸುವ ಸಲುವಾಗಿ ಈ ಜನರು ಗಾಂಧೀಜಿ ಹೆಸರನ್ನು ದುರುಪಯೋಗಪಡಿಸುತ್ತಿರುವುದನ್ನು ನಾವಿಂದು ವೀಕ್ಷಿಸುತ್ತಿದ್ದೇವೆ."

ಇದೇ ದೇಶದ ದೇಶಭಕ್ತ ನಾಥ್‌ರಾಮ್ ಗೂಡ್ಸೆ ಮೂಲಭೂತ ಹಿಂದೂ ವಾದದ ಅಡಿಯಲ್ಲಿ ಗಾಂಧಿಯನ್ನು ಕೊಂದ. ಗಾಂಧೀಜಿಯವರ ತಪ್ಪಾದರೂ ಯಾವುದು? ಗಾಂಧೀಜಿ ಹಿಂದೂ ಧರ್ಮದ – ಜಾತಿ ಬಂಡವಳಶಾಹಿ, ಸ್ತ್ರೀ ಅಸಮಾನತೆ, ಅಸಹಿಷ್ಣುತೆ – ಚತುಸ್ತಂಭಗಳನ್ನು ಕೆಡವಿ ಸಮಾನತೆಯ ಸಮಾಜವನ್ನು ರಚಿಸುವುದಕ್ಕೆ ಪ್ರಯತ್ನಶೀಲರಾಗಿದ್ದರು. ಈ ಹತ್ಯೆಯ ಕರಾಳ ದೃಶ್ಯ ಈಗಲೂ ನಮ್ಮೆದೆಗಳಲ್ಲಿ ಕಂಪನ ತರುತ್ತದೆ. ಇದ್ಯಾವುದಕ್ಕೂ ಕೇರ್ ಮಾಡದ ರಾಷ್ಟ್ರಭಕ್ತರು ಜನರ ಕಣ್ಣುಗಳಿಗೆ ಮಣ್ಣೆರಚಲು ತಿಣುಕುತ್ತಿದ್ದಾರೆ.

ಕೋಮುವಾದ 'ಸಿದ್ಧಾಂತ' ಮತ್ತು ಕಾರ್ಯಕ್ರಮ (ಗಲಭೆ) ಎರಡು ಮಜಲುಗಳ ಮುಖ ಹೊತ್ತಿದೆ. ಇದರ ಪ್ರಭೃತಿಗಳು ದ್ವೇಷ,

ಅಸೂಯೆ, ಅಸಹಿಷ್ಣುತೆ ಮತ್ತು ಪಕ್ಷಪಾತ ವಿಚಾರಗಳನ್ನು ತಮ್ಮ ತಮ್ಮ ಗುಂಪುಗಳಲ್ಲಿ ಹರಡುತ್ತ, ತಮ್ಮ ಆವರಣಗಳನ್ನು ವಿಸ್ತೃತಪಡಿಸುವರು. ವ್ಯವಸ್ಥಿತವಾಗಿ 'ಧರ್ಮ'ದ ಮೂಲಂಶಗಳ ಬದಲು 'ಮತ'ದ ಅಂಧಕಾರವನ್ನು ಜನರ ರಕ್ತ ನರನಾಡಿಗಳಲ್ಲಿ ತುಂಬುವರು. ಮನಸ್ಸು ಮತಾಂಧತೆಯ ಅಗ್ನಿಪರ್ವತವಾಗಿ ಕುದಿಯುವಂತೆ ನೋಡಿಕೊಳ್ಳುವರು.

ತರುವಾಯ, ಕೈಬೆರಳೆಣಿಕೆ ಸಂಖ್ಯೆಯ ಈ ಮೂಲಭೂತವಾದಿಗಳು ತಮ್ಮ ಹಿತಾಸಕ್ತಿಗಳಲ್ಲಿ ಏನಾದರೂ ಜಾರತೊಡಗಿದಾಗ ತಕ್ಷಣವೇ ಅಗ್ನಿ ಪರ್ವತದ ಬಿರಡೆಯನ್ನು ತೆಗೆದು ಲಾವಾರಸ ಹೊರಚೆಲ್ಲಿ ಇಡೀ ದೇಶವನ್ನೇ ದಹಿಸುತ್ತಾರೆ. ಅದೆಷ್ಟೋ ವರ್ಷಗಳಿಂದ ಎಚ್ಚರಿಕೆಯಿಂದ ಬೆಳೆಸಿಕೊಂಡು ಬಂದ ಮಾನವ ಪರ ವಿಚಾರಗಳು, ಜನತಾಂತ್ರಿಕ ಸಮಜವಾದಿ ಮೌಲ್ಯಗಳು ಕೋಮುವಾದಿಗಳ ಈ ಭಯಾನಕ ರಕ್ಕಸ ಕುಣಿತಕ್ಕೆ ಬಲಿಯಾಗುತ್ತವೆ. ಆ ಮುಖೇನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವರು. ಮಂಡಲ್ ವಿರುದ್ಧ ಹೋರಾಟ, ರಾಮರಥ, ರಾಮ ಜನ್ಮಭೂಮಿ – ಬಾಬರಿ ಮಸೀದಿ ಮತ್ತು ಶಹಬಾನು ಪ್ರಕರಣಗಳು ಇದಕ್ಕೆ ನೀಡಬಹುದಾದ ಬಲಯುತ ಜ್ವಲಂತ ನಿದರ್ಶನಗಳು.

ಮನುಷ್ಯನ ಅಸ್ತಿತ್ವ ಇಲ್ಲವಾಗಿಸುವ ವ್ಯಕ್ತಿಗತ ಬೇಕು – ಬೇಡಗಳನ್ನು ಶೂನ್ಯಗೊಳಿಸುವ ಈ ಮತಾಂಧತೆಗೆ ಸುಭದ್ರ ಅಣೆಕಟ್ಟು ಅಗತ್ಯ. ಇಲ್ಲದಿದ್ದರೆ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಜನ ತಾಂತ್ರಿಕ ಮೌಲ್ಯಗಳು ಧೂಳೀಪಟ ಆಗುವುದರಲ್ಲಿ ಸಂಶಯವಿಲ್ಲ. ಆದರಿಂದ ಕೋಮುವಾದದ ಪ್ರತಿಬಂಧನೆಗೆ ಪರಿಣಾಮಕಾರಿ ವಿಚಾರ – ಆಂದೋಲನಗಳ ಏಣಿಕೆ ಜರೂರಾಗಬೇಕಾಗಿದೆ. ಈ ದಿಸೆಯಲ್ಲಿ ಜಗಜೀವನರು ಬೀರಿರುವ ನೋಟಗಳನ್ನು ವೀಕ್ಷಿಸುವುದು ಉತ್ತಮ.

ವಿಸ್ತಾರವಾದ ನಮ್ಮ ಸಂವಿಧಾನದ ಮಡಿಲಲ್ಲಿರುವ 'ಸೆಕ್ಯುಲರಿಸಂ' ವಿಧಿ ಕೋಮುವಾದ ತಡೆಯುವ ಮದ್ದು ಎಂದು ರಾಮ್‌ರ ಅಭಿಮತ.

ಪ್ರತಿಯೊಬ್ಬ ಭಾರತೀಯ ಇದರ ಬೆಳಕಲ್ಲಿ ತನಗೆ ಕಂಡ ಸತ್ಯ ಮಾರ್ಗ ಅನುಸರಿಸಿ ಬದುಕು ನಿರ್ವಹಿಸಬಹುದೆಂಬ ಅರ್ಥವನ್ನು ಅವರು ಹೊಳೆಸಿದ್ದಾರೆ.

"ಧರ್ಮ ನಿರಪೇಕ್ಷತೆ ತತ್ವ ರಾಷ್ಟ್ರದ ಸಮಗ್ರ ಬದುಕಿಗೆ ಇರುವ ತಾತ್ವಿಕ ದರ್ಶನ. ದೇಶದ ಸರ್ಕಾರ ಯಾವುದೇ ಧರ್ಮದ ಬಗ್ಗೆ ಒಲವು ತೋರುವುದಿಲ್ಲ. ಯಾವುದೇ ಧರ್ಮವನ್ನು ವೈಭವೀಕರಿಸುವುದಿಲ್ಲ. ಸರ್ವ ಧರ್ಮಗಳಿಗೆ ಸಮಾನ ದೃಷ್ಟಿಕೋನ. ಪ್ರತಿಯೊಬ್ಬ ಪ್ರಜೆ ತನ್ನ ಇಚ್ಛೆಯ ಧರ್ಮವನ್ನು ಅನುಸರಿಸಬಹುದು. ಅಷ್ಟೇ ಅಲ್ಲ, ತಾನು ಯಾವುದೇ ಧಧರ್ಮ ಅನುಸರಿಸದೇ ಬದುಕಬಹುದು. "ಹೀಗೆ ಸೆಕ್ಯುಲರಿಸಂನ ಒಳ ಹೊರಗನ್ನು ವಿಷದಪಡಿಸಿರುವ ರಾಮ್, ಕೋಮುವಾದ ತಡೆಯಲು ಸಂವಿಧಾನದ ಪರಿಪೂರ್ಣ ಅನುಷ್ಠಾನದಲ್ಲಿ ಉತ್ತರ ಕಂಡುಕೊಂಡಿರುವರು. ರಾಜಕೀಯ – ಸಾಮಾಜಿಕ ಕ್ಷೇತ್ರಗಳು ಮತಾಂಧತೆಯಿಂದ ಮುಕ್ತವಾಗಿರಬೇಕೆಂಬ ಆಶಯದವರು. ಆದಕ್ಕಾಗಿ ಗಾಂಧೀಜಿ ಕನಸಿನ ಹೊಸ ಸಮಾಜದ ಹೊಸ ಮಾನವನ ಸೃಷ್ಟಿಗೆ ತವಕಿಸಿದರು. ಆದಲ್ಲದೆ ಆರ್ಥಿಕ ಕ್ಷೇತ್ರದಲ್ಲಿ ಜರೂರಾಗಿ ಸಂಭವಿಸಬೇಕಾದ ಆಮೂಲಾಗ್ರ ಪರಿವರ್ತನೆ ಕಡೆಗೆ ಗಮನಹರಿಸಿದರು. ಆರ್ಥಿಕ ವಿಕೇಂದ್ರೀಕರಣದ ಪ್ರಾಮುಖ್ಯತೆ ಎತ್ತಿಹಿಡಿದರು. ಆದಾಯ – ಸಂಪತ್ತಿನ ಕೇಂದ್ರೀಕರಣದ ಅಪಾಯದ ಮಗ್ಗುಲುಗಳಿಗೆ ಕಿರಣಗಳನ್ನು ಹಾಯಿಸಿದರು."

'ಪ್ರತಿಯೊಂದು ವರ್ಗಕ್ಕೂ ಸಿಗಲೇಬೇಕಾದ ಆರ್ಥಿಕ ಪರಿಕರಗಳ ಭಾಗವನ್ನು ಒದಗಿಸಲೇಬೇಕು. ಆದಾಯ ಸಮಾನತೆಯ ತಳಪಾಯದ ಮೇಲೆ ಹಂಚಲ್ಪಡಬೇಕು. ಇದಾದರೆ ಮಾತ್ರ ಜನ ತಾವುಗಳು ಭಿನ್ನ ಭಿನ್ನರೆಂದು ಭಾವಿಸಿಕೊಳ್ಳುವುದಿಲ್ಲ. ಎಲ್ಲರೂ ರಾಷ್ಟ್ರದ ಹಿತಕ್ಕೆ ದುಡಿಯುವರು. ಆಗ ದೇಶ ಕೆಲವೇ ಕೆಲವು ಜಾತಿ–ಕೋಮುಗಳ ಕಪಿಮುಷ್ಠಿಯಲ್ಲಿ ಇರುವುದಿಲ್ಲ. ಸಮಸ್ತ ಸಮಾಜ ಒಂದು ಸುಸಂಘಟಿತ ರಾಷ್ಟ್ರ ನಿರ್ಮಾಣಕ್ಕೆ ಪಾತಾಳಿಯಾಗುತ್ತದೆ.

ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ಗರ್ಭದಲ್ಲೂ ಕೋಮು ವಾದದ ಕರಾಳ ಮುಖ ಅವಿತಿರುವುದನ್ನು ಶೋಧಿಸಿರುವ ರಾಮ್‌ರು ಇದರ ನಿರ್ಮೂಲನೆಗೆ ಸಾಮಾಜಿಕ – ರಾಜಕೀಯ – ಆರ್ಥಿಕ – ಧಾರ್ಮಿಕ ಘಟಕಗಳನ್ನು ಸಮಾನತೆಯ ತಳಹದಿಯ ಮೇಲೆ ಪುನರ್ ಸಂಘಟಿಸಲು ಒತ್ತಾಯಿಸುವರು.

ಶೈಕ್ಷಣಿಕ ವಿಚಾರಧಾರೆ :

ಜಗಜೀವನ್‌ರಾಮ್ ಅವರು ಸಮಾಜವಾದದ ಮೂಲಾಂಶಗಳಿಗೆ ಪೂರಕವಾದ ಶಿಕ್ಷಣ ಪದ್ಧತಿಗೆ ಒಲವು ತೋರಿದ್ದಾರೆ. ಸಮಾನ ಶಿಕ್ಷಣ ವ್ಯವಸ್ಥೆ ಅವರ ಒಡಲಾಳದ ಕೂಗು. ಶಿಕ್ಷಣ, ವ್ಯವಹಾರೀಕರಣದಿಂದ ಮುಕ್ತವಾಗಲು ಸಾರ್ವಜನಿಕ ಕ್ಷೇತ್ರ ಅದರ ಜವಾಬ್ದಾರಿ ಹೊರಬೇಕೆಂಬ ಅಪೇಕ್ಷೆ ಅವರದು.

ಕೇವಲ ಅಕ್ಷರ ಕಲಿಕೆ ಎಂದೆಂದೂ ಶಿಕ್ಷಣದ ಮೊಗವನ್ನು ಧರಿಸಲು ಸಾಧ್ಯವಿಲ್ಲ. ಓದು – ಬರಹ ಕಲಿಯುತ್ತಿದ್ದರೂ ತನ್ನ ನಡೆವಳಿಕೆಗಳು ಅದೇ ಸಂಪ್ರದಾಯ – ಮೂಢನಂಬಿಕೆಗಳ ಚಾವಡಿ ಎನಿಸಿದರೆ ಅದರಿಂದ ವ್ಯಕ್ತಿಗಾಗಲೀ ಅಥವಾ ಸಮಾಜಕ್ಕಾಗಲೀ, ದೇಶಕ್ಕೆ ಆಗಲೀ ಯಾವುದೇ ಪ್ರಯೋಜನವಿಲ್ಲ. ಅದರಿಂದ ಶಿಕ್ಷಣ ವಾಸ್ತವಿಕವಾಗಿ ಮನುಷ್ಯನ ಅಂತಃಕರಣ ಮಾತನಾಡುವ ಪರಿಸರ ನಿರ್ಮಿಸಬೇಕು. ಮನುಷ್ಯ – ಮನುಷ್ಯರ ನಡುವೆ,ಪ್ರೀತಿ, ವಾತ್ಸಲ್ಯ, ಸಂಯಮ, ಸಹಿಷ್ಣುತೆ ಇಂತಹ ಮಾನವೀಯ ಗುಣಗಳನ್ನು ತುಂಬುವ ಹೃದಯವಂತಿಕೆಯ ಭಾಗ ಶಿಕ್ಷಣ.

ಶಿಕ್ಷಣ, ಸಂವಿಧಾನದ ಸ್ವಾತಂತ್ರ್ಯ, ಸಮಾನತೆ, ಧರ್ಮ ನಿರಪೇಕ್ಷತೆ, ಜನತಂತ್ರ ಮತ್ತು ಸಮಾಜವಾದ ತತ್ವಗಳಿಗೆ ಗರಿ ಮೂಡಿಸುವಂತಿರಬೇಕು. ಆರ್ಥಿಕ – ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಕಾಲಿಡುವ ಬಾಹಿರ – ಆಂತರಿಕ ಪರಿವರ್ತನೆಗಳಿಗೆ ಪಕ್ಕಾಗಿರಬೇಕು. ಶಿಕ್ಷಣದಿಂದ

ಕೇವಲ ತಂತ್ರಜ್ಞಾನ ಮತ್ತು ವೈಜ್ಞಾನಿಕ ಜ್ಞಾನ ಹೆಚ್ಚಳವಾಗಿ ಭೌತಿಕ ಪರಿಕರಗಳು ಮಾತ್ರ ಹೆಚ್ಚೆಚ್ಚು ಲಭಿಸುವಂತಿರಬಾರದು. ಶಿಕ್ಷಣದ ಈ ಶಾಖೆಗಳ ಭೌತಿಕ ಶಕ್ತಿ ಸಮಾಜದ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಾಳಕ್ಕೆ ಇಳಿದು ಅವನಲ್ಲಿ ಮಲಗಿರುವ ಕಂದಾಚಾರಗಳನ್ನು ಒದ್ದೋಡಿಸುವ ಪೂರಕ ಆಗಬೇಕು.

ಪ್ರಸ್ತುತ ಭಾರತದ ಶಿಕ್ಷಣ ಪದ್ಧತಿ ಹೀಗೇನಾದರೂ ಇರುವುದೇ? ಎಂಬ ಪ್ರಶ್ನೆಯನ್ನು ನಮ್ಮಲ್ಲಿ ನಾವು ಕೇಳಿಕೊಂಡಾಗ ದೊರಕುವ ಸ್ಫುಟವಾದ ಉತ್ತರ ನಕಾರಾತ್ಮಕ. ದೇಶಕ್ಕೆ ಆವರಿಸಿರುವ ನಾನಾ ನಮೂನೆಯ ರೋಗಾಣುಗಳಿಗೆ ಶಿಕ್ಷಣ ಪ್ರತಿರೋಧಕ ಔಷಧಿ ಎನಿಸದೆ ಇನ್ನೂ ಆ ರೋಗಾಣುಗಳು ಸ್ವಚ್ಛಂದವಾಗಿ ಉಲ್ಬಣಗೊಳ್ಳುವಂಥ ಟಾನಿಕ್ ಆಗಿದೆ. ಶಿಕ್ಷಣದ ಎಲ್ಲ ಹಂತಗಳಲ್ಲಿ ಹಳೆಯ ಮೌಲ್ಯಗಳೇ ಆಳುತ್ತಿವೆ. ಉನ್ನತ ಶಿಕ್ಷಣವಂತೂ ಜಾತಿಯ ಕೊಳೆಯಾಗಿದೆ. ವಿಶ್ವವಿದ್ಯಾನಿಲಯಗಳಂತೂ ಇದರ ಪಾರ್ಥೇನಿಯಂ. ಉನ್ನತ ಶಿಕ್ಷಣ, ಪದವಿ ಕೂದಲು ಸೀಳುವ ತಂತ್ರಗಾರಿಕೆಗಳನ್ನೆಣಯುವ ಸೂಜಿಯಾಗಿದೆ.

ಭಾರತದ ಈ ದುಃಸ್ಥಿತಿಯ ಶಿಕ್ಷಣ ಪದ್ಧತಿಯನ್ನು ಬದಲಾಯಿಸಲು ಜಗಜೀವನ್‌ರು ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾನಿಲಯದ ಶಿಕ್ಷಣದ ಹಂತದವರೆಗೆ ಭೋದನಾ ಕ್ರಮವನ್ನು ತಲಾಸ್ಪರ್ಶಿಯಾಗಿ ಪರಿವರ್ತಿಸಲು ತಿಳಿಸಿದ್ದಾರೆ. ಜೊತೆಗೆ ಶಿಕ್ಷಣದ ಮೂಲ ಉದ್ದೇಶವನ್ನು ಹೀಗೆ ಹೇಳಿರುವರು – 'ಶಿಕ್ಷಣದ ಉದ್ದೇಶ ವ್ಯಕ್ತಿಯನ್ನು ವೃತ್ತಿ ನಿಯೋಜಿತ ಯಂತ್ರಮಾನವನನ್ನಾಗಿ ಮಾಡುವುದಲ್ಲ. ಅದಕ್ಕೆ ಬದಲು ಶಿಕ್ಷಣ ಒಬ್ಬ ವ್ಯಕ್ತಿಯ ಸಾಮಾಜಿಕ ಜವಾಬ್ದಾರಿಯನ್ನು ಅರಿತುಕೊಳ್ಳುವ ಒಂದು ಪರಿಸರ ನಿರ್ಮಿಸುವುದಾಗಿದೆ.''

ಭಾರತದ ಸಂವಿಧಾನ ಸರ್ವರಿಗೂ ಸಮಾನ ಹಕ್ಕುಗಳನ್ನು ಕಲ್ಪಿಸುವುದರೊಡನೆ ಅವುಗಳ ಸಂರಕ್ಷಣೆಗೆ ಅವಕಾಶ ನೀಡಿದೆ. ಸಂವಿಧಾನದ ವಿಧಿ–ವಿಧಾನಗಳ ಎದುರು ಎಲ್ಲರೂ ಸರಿಸಮ. ಯಾರೂ ಹೆಚ್ಚಿಲ್ಲ.

ಯಾರೂ ಕಡಿಮೆಯಲ್ಲ. ಜಾತಿ ಲಿಂಗ ಭೇದಗಳಿಗೂ ಅಲ್ಲಿ ಸ್ಥಳವಿಲ್ಲ. ಹಾಗೆಯೇ ಎಲ್ಲರ ಹೊಣೆಗಾರಿಕೆ, ಜವಾಬ್ದಾರಿ ಒಂದೇ. ಈ ಹಿನ್ನೆಲೆಯಲ್ಲಿ ಜಗಜೀವನರು ಬಡವ – ಬಲ್ಲಿದರು, ಸಾಮಾನ್ಯರು ಮತ್ತು ಗಣ್ಯರಲ್ಲಿ ಯಾವ ಭಿನ್ನತೆ ತೋರದೆ ಸರ್ವರಿಗೂ ಒಂದೇ ಬಗೆಯ ಶಿಕ್ಷಣ ಒದಗಿಸಬೇಕೆಂದು ಆಶಿಸಿರುವರು.

ಶಿಕ್ಷಣ ರಂಗ ವಿಭಿನ್ನ ರೀತಿಯ ಶಾಲಾ ಕಾಲೇಜುಗಳನ್ನು ತೆರೆದಿದೆ. ಬಡವರು, ದಲಿತರು ಕಲಿಕೆಯ ಯಾವ ಸವಲತ್ತುಗಳೂ ಇರದ ಸಾಮಾನ್ಯ ವಿದ್ಯಾರ್ಥಿಗಳೆನಿಸಿದರೆ ಅದೇ ಶ್ರೀಮಂತರು ಪ್ರತಿಷ್ಠಿತ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಾಗಿರುವರು. ಪ್ರತಿಷ್ಠಿತ ಶಿಕ್ಷಣ ಕೇಂದ್ರಗಳಲ್ಲಿ ಅತ್ಯಾಧುನಿಕ ಕಲಿಕೆಯ ಸಾಮಗ್ರಿಗಳನ್ನು ಬಳಸಿಕೊಂಡು ಶಿಕ್ಷಣ ಪಡೆಯುವರು. ಭೋದನಾ ವಿಧಾನಗಳೂ ಈ ಎರಡೂ ಬಗೆಯ ಶಾಲೆಗಳಲ್ಲಿ ಭಿನ್ನ.

ಸಾಮಾನ್ಯ ಶಾಲೆಗಳ ಕಲಿಕೆಯ ಮಾರ್ಗ ಓಬಿರಾಯನ ಕಾಲವನ್ನು ನೆನಪಿಸುತ್ತದೆ. ಅದೇ ಪ್ರತಿಷ್ಠಿತ ಶಾಲೆಗಳ ಕಾಲಕ್ಕನುಗುಣವಾದ ಜೇಮಂತಿಕೆಯ ಮಾರ್ಗದ ಶಿಕ್ಷಣ ಪದ್ಧತಿ ಇರುತ್ತದೆ. ಆದರೂ ಶ್ರೀಮಂತರ ನವೀನ ಶಿಕ್ಷಣ ಮಾದರಿ ಅವರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಹಿಕ್ಮತ್ತುಗಳ ಆಗರವೆಂದರೆ ಆಶ್ಚರ್ಯಪಡಬೇಕಾಗಿಲ್ಲ.

ಈ ರೀತಿಯ ಭಿನ್ನ ಭೇದದ ಶಿಕ್ಷಣ ವ್ಯವಸ್ಥೆ ದೇಶದ ಸಮಗ್ರ ವಿಕಾಸಕ್ಕೆ ಪೂರಕವಲ್ಲ ಎನ್ನುತ್ತಾರೆ ಜಗಜೀವನ್‌ರಾಮ್. ಅವರ ಅಭಿಪ್ರಾಯ ಎರಡು ರೀತಿಯ ಶಾಲೆಗಳಿಂದ ದೊರೆಯುವ ವಿಭಿನ್ನ ಬಗೆಯ ಭೋದನೆ ಎರಡು ವಿವಿಧ ಸಮುದಾಯಗಳನ್ನು ಸೃಷ್ಟಿಸುತ್ತದೆ. ಇದು ಸಮಾಜವಾದಿ ಧ್ಯೇಯದ ರಾಷ್ಟ್ರವೊಂದರ ನಿರ್ಮಾಣಕ್ಕೆ ವಿರುದ್ಧ.

ಈ ರೀತಿಯ ದ್ವಿಮುಖ ಶಿಕ್ಷಣ ಪದ್ಧತಿಯನ್ನು ರದ್ದುಪಡಿಸಲು ಜಗಜೀವನ್‌ರಾಮ್ ಒತ್ತಾಯ ಮತ್ತು ದೇಶದ ಎಲ್ಲ ಮಕ್ಕಳಿಗೂ ಸಮಾನ ಭಾವನೆಯ ಶಿಕ್ಷಣ ಕಲ್ಪಿಸಲು ಒತ್ತಡ.

ವ್ಯವಹಾರದ ಸ್ವರೂಪ ಹೊಂದಿರುವ ಶಿಕ್ಷಣ ಬಡವರಿಗೆ ಒಂದು ಮರೀಚಿಕೆ. ತಾಂತ್ರಿಕ ಮತ್ತು ವೈಜ್ಞಾನಿಕ ಶಿಕ್ಷಣಗಳು ಹರಾಜು ಮಾರುಕಟ್ಟೆಯ ವಸ್ತುಗಳು. ಬಡವರು, ದಲಿತರು ಉಳ್ಳವರ ಎದುರು ನಿಲ್ಲಲು ಅಸಾಧ್ಯ. ಲಕ್ಷಾಂತರ ರೂಪಾಯಿಗಳಿಂದ ಜ್ಞಾನವನ್ನು ತಲೆಯೊಳಗೆ ತುಂಬಿಸಿಕೊಳ್ಳಲಾಗದಿದ್ದರೂ ಕನಿಷ್ಟ ಜ್ಞಾನದ ದೃಢೀಕರಣ ಪತ್ರಗಳನ್ನು ಬಲಾಢ್ಯರು ತಮ್ಮ ಹಣಗಳ ಮೇಲೆ ಅಂಟಿಸಿಕೊಳ್ಳುವರು. ಈ ಕಾರಣ ಜಗಜೀವನ್‌ರಾಮ್ ಶಿಕ್ಷಣ ರಂಗ ಖಾಸಗಿಯವರಿಂದ ಮುಕ್ತಾಯವಾಗಬೇಕೆಂಬ ಅಭೀಷ್ಟೆ ವ್ಯಕ್ತಪಡಿಸಿದ್ದಾರೆ. ಎಲ್ಲ ಹಂತದ ಶಿಕ್ಷಣದ ಸಂಪೂರ್ಣ ಹೊಣೆಗಾರಿಕೆ ಸರ್ಕಾರದ್ದಾಗಬೇಕು. ಖಾಸಗಿ ಸಂಸ್ಥೆಗಳು ತಲೆ ಎತ್ತದಂತೆ ನೋಡಿಕೊಳ್ಳುವುದು ಉತ್ತಮ.

ಶಿಕ್ಷಣ ರಂಗ ಸುಲಭ ಬಗೆಯ ಲಾಭ ಗಳಿಕೆಯ ಉದ್ದಿಮೆಯಾಗಿ ಪರಿವರ್ತಿತಗೊಂಡ ಪರಿಣಾಮವಾಗಿ ಇಂದು ನಮ್ಮ ನಾಡಿನಲ್ಲಿ ಶಾಲಾ ಕಾಲೇಜುಗಳು ನಾಯಿಕೊಡೆಗಳೋಪಾದಿಯಲ್ಲಿ ಉದ್ಭವಿಸುತ್ತಿವೆ. ಇವುಗಳನ್ನು ನಿಯಂತ್ರಿಸುವುದು ಕ್ಲಿಷ್ಟ. ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ಇಲ್ಲವಾಗಿಸುವ ಮತ್ತು ಪ್ರಸ್ತುತದ ಸಂಸ್ಥೆಗಳನ್ನು ರಾಷ್ಟ್ರೀಕರಿಸುವ ಅರ್ಥಪೂರ್ಣ ಮಾರ್ಗವನ್ನು ಜಗಜೀವನ್‌ರಾಮ್ ತೋರಿದ್ದಾರೆ.

ಆಕರ ಗ್ರಂಥಗಳು

೧. ಬಾಬು ಜಗಜೀವನ್‌ರಾಮ್
(ಜೀವನ ಮತ್ತು ವಿಚಾರ) – ಪ್ರೊ. ಟಿ. ಯಲ್ಲಪ್ಪ ಭೂತಯ್ಯ

೨. ಭಾರತದಲ್ಲಿ ಜಾತಿಗಳು ಮತ್ತು – ಮೂಲ: ಜಗಜೀವನ್‌ರಾಮ್
ಹರಿಜನರ ಸಮಸ್ಯೆಗಳು ಅನು: ಪ್ರೊ. ಟಿ. ಯಲ್ಲಪ್ಪ ಭೂತಯ್ಯ

೩. ಜಾತಿ ಪದ್ಧತಿ – ಮೂಲ: ರಾಮ್‌ಮನೋಹರ ಲೋಹಿಯಾ
ಅನು: ಹಸನ್ ನಯೀಂ ಸುರಕೋಡ

೪. ಟೀಕೆ – ಟಿಪ್ಪಣಿ – ಪಿ. ಲಂಕೇಶ್

೫. Jagjivan Ram - S.R. Bakshi

೬. Two Faces of Indira Gandhi - Uma Vasudev

೭. My Reminiscences - Renuka Ray

೮. Black Wednesday - Promilla Kalhan

೯. Political Thinkers of Modern India
Vol. 16, B.R. Ambedkar - Grover

೧೦. Political Thinkers of Modern India
Vallabh Bhai Patel - Grover

೧೧. Political Thinkers of Modern India
Ram Manohar Lohia - Grover

೧೨. The Congress Crisis - M.N. Rahaman

೧೩. Riddles of Hinduism
Vol. 4 - Dr. B.R. Ambedkar

೧೪. Who were the shudras and
Who were the Untouchables - Dr. B.R. Ambedkar


ಸಾಮಾಜಿಕ ಚಿಂತನ ಮಾಲೆ